## ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

### ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



## ಆಗಸ್ಟ್ ೧ನೇ ವಾರ

01-08-2025 TO 09-08-2025

**ಕ್ವಾಂಟಮ್ ಮಿಷನ್ಗೆ ಸಾವಿರ ಕೋಟಿ**

**ನೌಕಾಪಡೆಗೆ ‘ಹಿಮಗಿರಿ’ ಹಸ್ತಾಂತರ**

**ತೈಲ ಉತ್ಪಾದನೆ ಹೆಚ್ಚಳ**

**ಪಿ.ಎಂ ಕಿಸಾನ್ ಸಮ್ಮಾನ್**

## ❖ 'ಕ್ವಾಂಟಮ್ ಮಿಷನ್‌ಗೆ ಸಾವಿರ ಕೋಟಿ'

- **2035ರ ವೇಳೆಗೆ ಕರ್ನಾಟಕವನ್ನು ಕ್ವಾಂಟಮ್‌ನ ಆರ್ಥಿಕ ರಾಜ್ಯವನ್ನಾಗಿ** ಮಾಡುವ ಗುರಿ ಹೊಂದಲಾಗಿದೆ. ಇದನ್ನು ಸಾಧಿಸಲು ಬೇಕಾದ ಕೌಶಲ, ಮೂಲಸೌಕರ್ಯ ಮತ್ತು **ಸ್ಟಾರ್ಟ್‌ಅಪ್‌ಗಳಿಗೆ ₹1 ಸಾವಿರ ಕೋಟಿ ನಿಧಿ ಮೀಸಲಿರಿಸಿ ಕರ್ನಾಟಕ ಕ್ವಾಂಟಮ್ ಮಿಷನ್ (ಕೆಕ್ಯುಎಂ)** ಪ್ರಾರಂಭಿಸಲಾಗುವುದು.
- **ಸ್ಟಾರ್ಟ್ ಅಪ್‌ಗಳ ಬೆಳವಣಿಗೆಗೆ ನೆರವು ನೀಡಲು ಕ್ವಾಂಟಮ್ ವೆಂಚರ್ ಕ್ಯಾಪಿಟಲ್ ಫಂಡ್** ಪ್ರಾರಂಭಿಸಲಾಗು ವುದು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಸಹಯೋಗದಂತಹ ಕ್ರಮಗ ಳಿಂದಾಗಿ ಕರ್ನಾಟಕ ರಾಜ್ಯವನ್ನು ಜಾಗತಿಕ ಕ್ವಾಂಟಮ್ ಕೇಂದ್ರ ಮಾಡ ಲಾಗುವುದು. **2035ರ ವೇಳೆಗೆ 10 ಸಾವಿರ ಉದ್ಯೋಗ ಸೃಷ್ಟಿಸಿ, ಬೆಂಗಳೂರು ಅನ್ನು ಏಷ್ಯಾದ ಕ್ವಾಂಟಮ್ ರಾಜಧಾನಿ** ಮಾಡುವ ಗುರಿ ಇದೆ. **₹1.75 ಲಕ್ಷ ಕೋಟಿ ಮೌಲ್ಯದ ಕ್ವಾಂಟಮ್ ಆರ್ಥಿಕತೆ** ಸೃಷ್ಟಿಸಲಾಗುವುದು.
- ಐ.ಟಿ, ಜೈವಿಕ ತಂತ್ರಜ್ಞಾನ ಮತ್ತು ಸಂಶೋಧನೆಯಲ್ಲಿ ಸಮರ್ಥವಾಗಿರುವ ಕರ್ನಾಟಕ, ದೇಶದ ತಂತ್ರಜ್ಞಾನ ಮತ್ತು ನಾವೀನ್ಯತೆಯ ರಾಜಧಾನಿಯಾಗಿದೆ. ಸಾಮಾನ್ಯ ನಾಗರಿಕರಿಗೆ ಕ್ವಾಂಟಮ್ ಹೇಗೆ ಪ್ರಯೋಜನಕಾರಿ ಎಂದು ಕೆಲವರು ಕೇಳಬಹುದು. ಪ್ರಾರಂಭಿಕ ಹಂತದಲ್ಲಿ ರೋಗಗಳ ಪತ್ತೆಗೆ, ಸುರಕ್ಷಿತ ಸಂವಹನ ಹಾಗೂ ಸ್ಮಾರ್ಟ್ ಕೃಷಿಯನ್ನು ಸಾಧ್ಯವಾಗಿಸುತ್ತದೆ.
- ದೇಶದ ಕ್ವಾಂಟಮ್ ಕ್ರಾಂತಿಯನ್ನು ಕರ್ನಾಟಕ ಮುನ್ನಡೆಸುವುದನ್ನು ಖಾತ್ರಿಪಡಿಸಲು ಐದು ಪ್ರಮುಖ ಸ್ತಂಭಗಳ ಮೇಲೆ ಕಾರ್ಯತಂತ್ರ ರೂಪಿಸಲಾಗಿದೆ.
  - ✓ ಇಪ್ಪತ್ತಕ್ಕೂ ಹೆಚ್ಚು ಕಾಲೇಜುಗಳಲ್ಲಿ ಕ್ವಾಂಟಮ್ ಕೌಶಲ ಅಭಿವೃದ್ಧಿ ಕಾರ್ಯಕ್ರಮಗ ಳನ್ನು ಪರಿಚಯಿಸಿ, ಪ್ರತಿ ವರ್ಷ 150 ಪಿಎಚ್.ಡಿ ಫೆಲೋಶಿಪ್‌ಗಳಿಗೆ ನೆರವು ನೀಡಲಾಗುವುದು.
  - ✓ 1000- ಕ್ಯುಬಿಟ್ ಪ್ರೊಸೆಸರ್‌ಗಳನ್ನು ಒಳಗೊಂಡಂತೆ ಅತ್ಯಾಧುನಿಕ ಕ್ವಾಂಟಮ್ ವ್ಯವಸ್ಥೆಗ ಳನ್ನು ಅಭಿವೃದ್ಧಿಪಡಿಸುವುದು.
  - ✓ ಆರೋಗ್ಯ ರಕ್ಷಣೆ, ರಕ್ಷಣಾ ಮತ್ತು ಸೈಬರ್ ಭದ್ರತೆ ಹಾಗೂ ಕ್ವಾಂಟಮ್ ಘಟಕಗಳ ಸ್ಥಳೀಯ ಉತ್ಪಾದನೆ ಉತ್ತೇಜಿಸಲು ಮೀಸಲಾದ ಫ್ಯಾಬ್ ಲೈನ್ ಅನ್ನು ಸ್ಥಾಪಿಸಲಾಗುವುದು.
- ಬೆಂಗಳೂರಿನಲ್ಲಿ ಕ್ವಾಂಟಮ್ ಕ್ಲಸ್ಟರ್ ಆರಂಭಿಸಲಾಗುತ್ತಿದ್ದು, ಶೀಘ್ರವೇ ಬೆಂಗಳೂರು ಕ್ವಾಂಟಮ್ ತಂತ್ರಜ್ಞಾನದ ರಾಜಧಾನಿಯಾಗಲಿದೆ. ಎರಡು ಹಾಗೂ ಮೂರನೇ ಹಂತದ ನಗರಗಳು ಕೂಡ ಅತ್ಯುತ್ತಮ ಮಾನವ ಸಂಪನ್ಮೂಲ ಹಾಗೂ ಮೂಲಸೌಕರ್ಯ ನೀಡಲಿದ್ದು, ಈ ಭಾಗಗಳತ್ತಲೂ ಉದ್ಯಮಿಗಳು ಗಮನಹರಿಸಬಹುದು.

**ಕ್ವಾಂಟಮ್ ನಗರ ಸ್ಥಾಪನೆ**

- 'ಬೆಂಗಳೂರು ಬಳಿ ಕ್ಯು- ಸಿಟಿ (ಕ್ವಾಂಟಮ್) ನಗರ ಸ್ಥಾಪಿಸಿ, ವಿಶ್ವ ದರ್ಜೆಯ ಸೌಲಭ್ಯ ಒದಗಿಸಲಾಗುವುದು.'
- **ಕೇಂದ್ರ ಸರ್ಕಾರವು ₹6 ಸಾವಿರ ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಕ್ವಾಂಟಮ್ ಮಿಷನ್ (ಎನ್ ಕ್ಯುಎಂ) ಆರಂಭಿಸಿದ್ದು,** ಕರ್ನಾಟಕದ ನೇತೃತ್ವದಲ್ಲಿ ನಾವೀನ್ಯತೆ ಮತ್ತು ವಿಕೇಂದ್ರೀಕೃತ ವಿಧಾನಗಳನ್ನು ಅಳವಡಿಸಿಕೊಳ್ಳಲು ಅನುಮತಿ ನೀಡಬೇಕು.

## ❖ ಭಾರತದ್ದು 'ಸತ್ತ' ಆರ್ಥಿಕತೆ: ಟ್ರಂಪ್

- ಭಾರತ ಮತ್ತು ರಷ್ಯಾ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪಾಕಿಸ್ತಾನದ ಜತೆ ಹೊಸ ವ್ಯಾಪಾರ ಒಪ್ಪಂದವನ್ನು ಘೋಷಿಸಿದ್ದಾರೆ.

- ಭಾರತದಿಂದ ಅಮೆರಿಕ ಆಮದು ಮಾಡಿಕೊಳ್ಳಲಿರುವ ಸರಕುಗಳ ಮೇಲೆ ಶೇಕಡ 25ರಷ್ಟು ಸುಂಕ ವಿಧಿಸಲಾಗುತ್ತದೆ ಎಂದು ಟ್ರಂಪ್ ಪ್ರಕಟಿಸಿದ್ದರು. ಪಾಕಿಸ್ತಾನದಲ್ಲಿ 'ತೈಲ ನಿಕ್ಷೇಪ' ಗಳನ್ನು ಅಭಿವೃದ್ಧಿ ಪಡಿಸಲು ಅಮೆರಿಕ ನೆರವಾಗಲಿದೆ ಎಂದೂ ಹೇಳಿಕೊಂಡಿದ್ದಾರೆ.
- ರಷ್ಯಾದಿಂದ ರಕ್ಷಣಾ ಸಾಮಗ್ರಿ ಮತ್ತು ತೈಲ ಖರೀದಿಸಿದ್ದಕ್ಕಾಗಿ ಟ್ರಂಪ್ ಅವರು ಇದಕ್ಕೂ ಮುನ್ನ ಭಾರತವನ್ನು ಟೀಕಿಸಿದ್ದರು.
- 'ನಾವು ಪಾಕಿಸ್ತಾನದ ಜತೆ ಒಪ್ಪಂದ ಮಾಡಿಕೊಂಡಿದ್ದೇವೆ. ಆ ಮೂಲಕ ಪಾಕಿಸ್ತಾನ ಮತ್ತು ಅಮೆರಿಕವು ಬೃಹತ್ ತೈಲ ನಿಕ್ಷೇಪಗಳನ್ನು ಅಭಿವೃದ್ಧಿಪಡಿಸಲು ಒಟ್ಟಾಗಿ ಕೆಲಸ ಮಾಡಲಿವೆ. ಈ ಪಾಲುದಾರಿಕೆಯನ್ನು ಮುನ್ನಡೆಸುವ ತೈಲ ಕಂಪನಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಯಾರಿಗೆ ಗೊತ್ತು, ಬಹುಶಃ ಮುಂದೊಂದು ದಿನ ಅವರು (ಪಾಕಿಸ್ತಾನ) ಭಾರತಕ್ಕೆ ತೈಲ ಮಾರಾಟ ಮಾಡಬಹುದು' ಎಂದು ಟ್ರಂಪ್ ರಾತ್ರಿ ತಮ್ಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

**ಟ್ರಂಪ್ ಹೇಳಿದ್ದು...**

* ನಾವು ಭಾರತದೊಂದಿಗೆ ಅತೀ ಕಡಿಮೆ ವ್ಯಾಪಾರ ಸಂಬಂಧ ಹೊಂದಿದ್ದೇವೆ. ಭಾರತವು ವಿಶ್ವದಲ್ಲೇ ಅಧಿಕ ಸುಂಕ ವಿಧಿಸುವ ದೇಶಗಳಲ್ಲೊಂದು

**6 ಕಂಪನಿಗಳಿಗೆ ನಿರ್ಬಂಧ**

- ಇರಾನ್ ಮೂಲದ ಕಂಪನಿಗಳ ಪೆಟ್ರೋಕೆಮಿಕಲ್ ಉತ್ಪನ್ನಗಳನ್ನು ಭಾರಿ ಪ್ರಮಾಣದಲ್ಲಿ ಖರೀದಿ ಮತ್ತು ಮಾರಾಟ ಮಾಡಿದ್ದಕ್ಕೆ ಭಾರತದ ಆರು ಕಂಪನಿಗಳ ಮೇಲೆ ಅಮೆರಿಕ ನಿರ್ಬಂಧ ಹೇರಿದೆ.
- ಕಾಂಚನ್ ಪಾಲಿಮರ್ಸ್, ಅಲ್‌ಕೆಮಿಕಲ್ ಸೊಲ್ಯುಷನ್ಸ್, ರಮ್ನಿಕ್‌ಲಾಲ್ ಎಸ್. ಗೋಸಾಲಿಯಾ ಕಂಪನಿ, ಜುಪಿಟರ್ ಡೈ ಕೆಮ್ ಪ್ರೈವೆಟ್ ಲಿಮಿಟೆಡ್, ಗ್ಲೋಬಲ್ ಇಂಡಸ್ಟ್ರೀಸ್ ಕೆಮಿಕಲ್ ಲಿಮಿಟೆಡ್ ಮತ್ತು ಪರ್ಸಿಸ್ಟೆಂಟ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳು ನಿರ್ಬಂಧಕ್ಕೆ ಒಳಗಾಗಿವೆ. ಭಾರತ ಅಲ್ಲದೆ ಯುಎಇ, ಟರ್ಕಿ ಮತ್ತು ಇಂಡೊನೇಷ್ಯಾದ ಕೆಲವು ಕಂಪನಿಗಳ ಮೇಲೂ ಅಮೆರಿಕ ನಿರ್ಬಂಧ ಹೇರಿದೆ.

## ❖ 2ನೇ ಅಧಿಕೃತ ಭಾಷೆಯಾಗಿ ತುಳು: ಸಮಿತಿ ರಚನೆ

- ತುಳುವನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸುವುದಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಲು, ಐದು ಮಂದಿಯನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.
- ಎರಡನೇ ಭಾಷೆಯಾಗಿ ಘೋಷಿಸಲು ಅನುಸರಿಸಲಾಗುವ ಮಾನದಂಡಗಳ ಬಗ್ಗೆ ಅಧ್ಯಯನ ನಡೆಸಲು ಈ ಸಮಿತಿಯು ಆಂಧ್ರಪ್ರದೇಶಕ್ಕೆ ತೆರಳಲಿದೆ. ತುಳು ಭಾಷೆಯನ್ನು ಕರ್ನಾಟಕ ರಾಜ್ಯದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸಬೇಕೆಂಬ ಬೇಡಿಕೆ ಇದೆ. ಈ ಬಗ್ಗೆ ಅನುಸರಿಸಲಾಗುವ ಮಾನದಂಡಗಳ ಬಗ್ಗೆ ಅಧ್ಯಯನ ನಡೆಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಆದೇಶ ಹೊರಡಿಸಿದೆ.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಗಾಯಿತ್ರಿ ಕೆ.ಎಂ. ಅವರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಕಾನೂನು ಇಲಾಖೆ ಉಪ ಕಾರ್ಯದರ್ಶಿ ವನಿತಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಉಪ ಕಾರ್ಯದರ್ಶಿ ಮೂರ್ತಿ ಕೆ.ಎನ್., ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ್ ಗಟ್ಟಿ ಕಾಪಿಕಾಡ್ ಹಾಗೂ ಕರ್ನಾಟಕ ಯಕ್ಷಗಾನ ಅಕಾಡೆಮಿ ಸದಸ್ಯ ಸುಧಾಕರ್ ಶೆಟ್ಟಿ ಅವರು ಸಮಿತಿಯ ಸದಸ್ಯರಾಗಿದ್ದಾರೆ.

## ❖ 'ರೋಹಿಂಗ್ಯಾಗಳು ಅಕ್ರಮ ನುಸುಳುಕೋರರೇ?'

- ರೋಹಿಂಗ್ಯಾ ಪ್ರಕರಣಗಳಲ್ಲಿ ಅವರು ನಿರಾಶ್ರಿತರೇ ಅಥವಾ ಅಕ್ರಮವಾಗಿ ದೇಶದೊಳಗೆ ಪ್ರವೇಶಿಸಿದವರೇ ಎಂದು ಮೊದಲು ನಿರ್ಧರಿಸಬೇಕಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತು.

- ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ದೀಪಂಕರ್ ದತ್ತಾ ಮತ್ತು ಎನ್.ಕೋಟೀಶ್ವರ ಸಿಂಗ್ ಅವರ ನೇತೃತ್ವದ ನ್ಯಾಯಪೀಠವು, ಈ ವಿಚಾರವು ನಿರ್ಧಾರವಾದರೆ, ಉಳಿದ ವಿಚಾರಗಳನ್ನು ಸುಲಭವಾಗಿ ಪರಿಹರಿಸಬಹುದು ಎಂದು ಹೇಳಿತು.
- ದೇಶದಲ್ಲಿನ ರೋಹಿಂಗ್ಯಾಗಳ ಬಗ್ಗೆ ಕಳವಳ ವ್ಯಕ್ತಪಡಿಸಿ ಸಲ್ಲಿಕೆಯಾದ ಅರ್ಜಿಗಳನ್ನು ನ್ಯಾಯಾಲಯವು ವಿಚಾರಣೆ ನಡೆಸಿತು.
- 'ರೋಹಿಂಗ್ಯಾಗಳನ್ನು ನಿರಾಶ್ರಿತರು ಎಂದು ಘೋಷಿಸುವ ಹಕ್ಕು ಇದೆಯೇ? ಇರುವುದೇ ಆದಲ್ಲಿ ಅವರಿಗೆ ಲಭ್ಯವಿರುವ ಸೌಲಭ್ಯಗಳು, ಹಕ್ಕುಗಳು ಯಾವುದು' ಎಂದು ನ್ಯಾಯಪೀಠ ಪ್ರಶ್ನಿಸಿತು.
- ರೋಹಿಂಗ್ಯಾಗಳು ಅಕ್ರಮವಾಗಿ ಪ್ರವೇಶಿಸಿದ್ದವರಾಗಿದ್ದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವರ ಗಡೀಪಾರಿಗೆ ಕ್ರಮ ಕೈಗೊಳ್ಳುವುದು ಸಮರ್ಥನೀಯವೇ ಎಂದು ನ್ಯಾಯಾಲಯ ಕೇಳಿತು.
- ರೋಹಿಂಗ್ಯಾಗಳು ಅಕ್ರಮ ನುಸುಳುಕೋರರಾಗಿದ್ದರೆಅವರನ್ನು ಅನಿರ್ದಿಷ್ಟಾವಧಿವರೆಗೆ ಬಂಧಿಸಬಹುದೇ ಅಥವಾ ಜಾಮೀನು ಮೂಲಕ ಬಿಡುಗಡೆ ಮಾಡಬಹುದೇ ಎಂದೂ ಪ್ರಶ್ನಿಸಿತು.

## ❖ ಕಿಸಾನ್ ಸಂಪದಕ್ಕೆ ₹1,920 ಕೋಟಿ

- ಆಹಾರ ಸಂಸ್ಕರಣಾ ವಲಯವನ್ನು ಉತ್ತೇಜಿಸಲು ಪ್ರಧಾನಮಂತ್ರಿ ಕಿಸಾನ್ ಸಂಪದ ಯೋಜನೆಗೆ (ಪಿಎಂಕೆಎಸ್‌ವೈ) 15ನೇ ಹಣಕಾಸು ಆಯೋಗದಡಿ ₹1,920 ಕೋಟಿ ಹೆಚ್ಚುವರಿ ಮೊತ್ತ ಸೇರಿದಂತೆ ₹6,520 ಕೋಟಿ ವ್ಯಯ ಮಾಡಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.
- ಈ ಹಣಕಾಸು ವರ್ಷದಲ್ಲಿ ನೀಡಲಾಗುವ ಹೆಚ್ಚುವರಿ ಹಣವನ್ನು 50 ಬಹು-ಉತ್ಪನ್ನ ಆಹಾರ ಉತ್ತೇಜನ ಘಟಕಗಳು ಮತ್ತು 100 ಆಹಾರ ಪರೀಕ್ಷಾ ಪ್ರಯೋಗಾಲಯಗಳಿಗೆ ಬಳಸಿಕೊಳ್ಳಲಾಗುವುದು ಎಂದು ಕೇಂದ್ರ ವಾರ್ತಾ ಹಾಗೂ ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.
- **2017ರಲ್ಲಿ ಪ್ರಾರಂಭಿಸಲಾದ ಈ ಯೋಜನೆಯನ್ನು 2025-26ರ ಆರ್ಥಿಕ ವರ್ಷದ ಅಂತ್ಯದವರೆಗೆ ವಿಸ್ತರಿಸಲಾಗಿದೆ.** ಆಹಾರ ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆಯಿಂದ ಆಹಾರ ಮಾದರಿಗಳ ಪರೀಕ್ಷೆ ಸುಲಲಿತವಾಗಲಿದೆ ಎಂದರು.
- ಎನ್‌ಸಿಡಿಸಿಗೆ ₹2 ಸಾವಿರ ಕೋಟಿ: ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಕ್ಕೆ (ಎನ್‌ಸಿಡಿಸಿ) ನಾಲ್ಕು ವರ್ಷಗಳ ಕಾಲ ₹2,000 ಕೋಟಿ ಅನುದಾನ ನೀಡಲು ಸಂಪುಟ ಅನುಮೋದನೆ ನೀಡಿದೆ. ಈ ಹಣಕಾಸಿನ ನೆರವಿನೊಂದಿಗೆ, ನಿಗಮವು ಮತ್ತಷ್ಟು ಸಾಲ ನೀಡಲು ಹೆಚ್ಚುವರಿಯಾಗಿ ₹20,000 ಕೋಟಿ ಸಂಗ್ರಹಿಸಲು ಸಾಧ್ಯವಾಗುತ್ತದೆ ಎಂದು ಸಚಿವರು ಹೇಳಿದರು.
- ಈ ತೀರ್ಮಾನದಿಂದ ಡೇರಿ, ಜಾನುವಾರು, ಮೀನುಗಾರಿಕೆ, ಸಕ್ಕರೆ, ಜವಳಿ, ಆಹಾರ ಸಂಸ್ಕರಣೆ, ಸಂಗ್ರಹಣೆ ಮತ್ತು ಶೀತಲೀಕರಣದಂತಹ ವಿವಿಧ ವಲಯಗಳ 13,288 ಸಹಕಾರ ಸಂಘಗಳ 2.9 ಕೋಟಿ ಸದಸ್ಯರಿಗೆ ಅನುಕೂಲವಾಗುವ ಸಾಧ್ಯತೆ ಇದೆ.

## ❖ ಸುಂಕ: ಬೆಳವಣಿಗೆ ಶೇ 0.30ರಷ್ಟು ಇಳಿಕೆ?

- ಭಾರತದ ಸರಕುಗಳ ಮೇಲೆ ಅಮೆರಿಕವು ವಿಧಿಸಿರುವ ಶೇಕಡ 25ರಷ್ಟು ಸುಂಕ ಹಾಗೂ ರಷ್ಯಾದಿಂದ ಕಚ್ಚಾತೈಲ ಮತ್ತು ಶಸ್ತ್ರಾಸ್ತ್ರ ಆಮದು ಮಾಡಿಕೊಳ್ಳುತ್ತಿರುವುದಕ್ಕೆ ವಿಧಿಸಿರುವ ದಂಡದ ಕಾರಣದಿಂದಾಗಿ ಭಾರತದ ಜಿಡಿಪಿ ಬೆಳವಣಿಗೆಯು ಈ ವರ್ಷದಲ್ಲಿ ಶೇ 0.30ರಷ್ಟು ಕಡಿಮೆ ಆಗಬಹುದು ಎಂದು ಬ್ರಿಟನ್ನಿನ ಬ್ಯಾಂಕಿಂಗ್ ಕಂಪನಿ ಬಾರ್ಕ್ಲೇಸ್ ಅಂದಾಜು ಮಾಡಿದೆ.
- ಭಾರತವು ದೇಶಿ ಬೇಡಿಕೆಯನ್ನು ಹೆಚ್ಚಾಗಿ ನೆಚ್ಚಿಕೊಂಡಿರುವ ಅರ್ಥ ವ್ಯವಸ್ಥೆಯನ್ನು ಹೊಂದಿರುವ ಕಾರಣಕ್ಕೆ ಅಮೆರಿಕದ ಸುಂಕವು ಗಣನೀಯ ಪ್ರಮಾಣದಲ್ಲಿ ಹಾನಿ ಉಂಟುಮಾಡಲಿಕ್ಕಿಲ್ಲ ಎಂದು ಅದು ಹೇಳಿದೆ.
- ಭಾರತದ ಅರ್ಥವ್ಯವಸ್ಥೆಯು ಹೆಚ್ಚು ತೆರೆದುಕೊಂಡಿಲ್ಲ. ದೇಶದ ಆಂತರಿಕ ಬೇಡಿಕೆಯೇ ಬೆಳವಣಿಗೆಗೆ ಪ್ರಮುಖ ಆಧಾರ. ಹೀಗಾಗಿ, ಶೇ 25ರಷ್ಟು ಸುಂಕ ವಿಧಿಸುವ ಕ್ರಮವು ಜಿಡಿಪಿ ಬೆಳವಣಿಗೆಯ ಮೇಲೆ ದೊಡ್ಡ

ಮಟ್ಟದಲ್ಲಿ ಪರಿಣಾಮ ಉಂಟುಮಾಡುವ ಸಾಧ್ಯತೆ ಕಾಣುತ್ತಿಲ್ಲ. ಭಾರತ ಮತ್ತು ಅಮೆರಿಕದ ನಡುವೆ ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ಮುಂದುವರಿದಿರುವ ಕಾರಣಕ್ಕೆ, ಅಂತಿಮವಾಗಿ ಸುಂಕದ ಪ್ರಮಾಣವು ಶೇ 25ಕ್ಕಿಂತ ಕಡಿಮೆ ಆಗುವ ನಿರೀಕ್ಷೆ ಇದೆ ಎಂದು ಸಂಸ್ಥೆ ಹೇಳಿದೆ.

- ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಅಂದಾಜಿನ ಪ್ರಕಾರ ಈ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 6.5ರಷ್ಟು ಇರಲಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಅಂದಾಜಿನ ಪ್ರಕಾರ ಇದು ಶೇ 6.4ರಷ್ಟು ಇರಲಿದೆ.
- ಬಾರ್ಕ್ಲೇಸ್ ಅಂದಾಜಿನ ಧಾಟಿಯಲ್ಲೇ ಅಭಿಪ್ರಾಯ ವ್ಯಕ್ತಪಡಿಸಿರುವ ಮೂಡಿಸ್ ಅನಾಲಿಟಿಕ್ಸ್‌ನ ಸಹಾಯಕ ಅರ್ಥಶಾಸ್ತ್ರಜ್ಞೆ ಅದಿತಿ ರಾಮನ್ ಅವರು 'ಭಾರತದ ಅರ್ಥ ವ್ಯವಸ್ಥೆಯು ಬಾಹ್ಯ ವ್ಯಾಪಾರದ ಮೇಲೆ ಬಹಳ ಕಡಿಮೆ ಅವಲಂಬನೆ ಹೊಂದಿದೆ. ಅರ್ಥ ವ್ಯವಸ್ಥೆಯು ದೇಶಿ ಬೇಡಿಕೆಯ ಮೇಲೆ ಹೆಚ್ಚು ಅವಲಂಬಿತವಾಗಿದೆ' ಎಂದು ಹೇಳಿದ್ದಾರೆ.
- ಚೀನಾ, ವಿಯೆಟ್ನಾಂ, ಪಾಕಿಸ್ತಾನ ಮತ್ತು ಥಾಯ್ಲೆಂಡ್‌ನಿಂದ ಆಮದಾಗುವ ಅಕ್ಕಿಯ ಮೇಲೆ ವಿಧಿಸಿರುವ ಸುಂಕಕ್ಕಿಂತ ಭಾರತದ ಅಕ್ಕಿಯ ಮೇಲೆ ವಿಧಿಸಿರುವ ಸುಂಕವು ಕಡಿಮೆ ಇದೆ ಎಂದು ಅವರು ತಿಳಿಸಿದ್ದಾರೆ.
- ಅರ್ಧ ಸಿದ್ಧಪಡಿಸಿದ ತಾಮ್ರ ಹಾಗೂ ತಾಮ್ರ ಆಧಾರಿತ ಉತ್ಪನ್ನಗಳ ಆಮದಿಗೆ ಆಗಸ್ಟ್ 1ರಿಂದ ಶೇ 50ರಷ್ಟು ತೆರಿಗೆ ಅನ್ವಯವಾಗಲಿದೆ ಎಂದು ಅಮೆರಿಕ ಹೇಳಿದೆ. ತಾಮ್ರದ ಮೇಲಿನ ಸುಂಕವು ಎಲ್ಲ ದೇಶಗಳಿಗೂ ಸಮಾನವಾಗಿ ಅನ್ವಯವಾಗಲಿದೆ. ಹೀಗಾಗಿ ಭಾರತವು ಇತರರಿಗಿಂತ ಹೆಚ್ಚು ತೊಂದರೆಗೆ ಗುರಿಯಾಗುವ ಸಾಧ್ಯತೆ ಇಲ್ಲ ಎಂದು ಜಿಟಿಆರ್‌ಐ ಸಂಸ್ಥೆ ಅಂದಾಜು ಮಾಡಿದೆ.
- ಶೇ 25ರಷ್ಟು ಸುಂಕವು ಭಾರದಿಂದ ಅಮೆರಿಕಕ್ಕೆ ಜವಳಿ ಉತ್ಪನ್ನಗಳನ್ನು ರಫ್ತು ಮಾಡುವವರಿಗೆ ಏಟು ನೀಡುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ. ಭಾರತದ ಜವಳಿ ಉತ್ಪನ್ನಗಳಿಗೆ ಅಮೆರಿಕವು ಅತಿದೊಡ್ಡ ವಿದೇಶಿ ಮಾರುಕಟ್ಟೆ. ವಿಯೆಟ್ನಾಂ ಮತ್ತು ಇಂಡೊನೇಷ್ಯಾಕ್ಕೆ ಹೋಲಿಸಿದರೆ ಭಾರತದಿಂದ ರಫ್ತಾಗುವ ಜವಳಿ ಉತ್ಪನ್ನಗಳ ಬೆಲೆಯು ಸುಂಕದ ಪರಿಣಾಮವಾಗಿ ಸ್ಪರ್ಧಾತ್ಮಕವಾಗಿ ಇರುವುದಿಲ್ಲ.
- ಮುತ್ತು ಹಾಗೂ ಆಭರಣ ಉದ್ಯಮವು ಸುಂಕ ಹೆಚ್ಚಳದ ಕ್ರಮದಿಂದಾಗಿ ಹಿನ್ನಡೆ ಅನುಭವಿಸಲಿದೆ. 'ನಮಗೆ ಅಮೆರಿಕವು ಅತಿದೊಡ್ಡ ಮಾರುಕಟ್ಟೆ. ಉದ್ಯಮವು ನಡೆಸುವ ಜಾಗತಿಕ ವಹಿವಾಟಿನಲ್ಲಿ ಅಮೆರಿಕದ ಮಾರುಕಟ್ಟೆಯ ಪಾಲು ಶೇ 30ರಷ್ಟು ಇದೆ.

## ❖ 'ನೌಕರರ ವೇತನ ಪರಿಷ್ಕರಣೆ 2027ಕ್ಕೆ'

- 'ಸಾರಿಗೆ ನಿಗಮಗಳ ನೌಕರರ ವೇತನವನ್ನು 2023ರ ಮಾರ್ಚ್‌ನಲ್ಲಿ ಶೇ 15ರಷ್ಟು ಏರಿಕೆ ಮಾಡಲಾಗಿತ್ತು. ಮುಂದಿನ ಪರಿಷ್ಕರಣೆ 2027ರ ನಂತರ ಮಾತ್ರ ಸಾಧ್ಯ.
- '2020ರಲ್ಲಿ ನಡೆಯಬೇಕಿದ್ದ ಪರಿಷ್ಕರಣೆಯು ಕೋವಿಡ್‌ನ ಕಾರಣದಿಂದ ಮುಂದಕ್ಕೆ ಹೋಗಿತ್ತು. ಪರಿಷ್ಕರಣೆ ಮೂರು ವರ್ಷ ತಡವಾಯಿತು ಎಂದೇ, ಆರ್ಥಿಕ ನಿಯಮಾವಳಿಗಳ ಪ್ರಕಾರ 2023ರಲ್ಲಿ ಶೇ 15ರಷ್ಟು ಏರಿಕೆ ಮಾಡಲಾಗಿತ್ತು. ಸರ್ಕಾರಿ ನೌಕರರಿಗೂ ಈ ಮಟ್ಟದ ವೇತನ ಏರಿಕೆ ನೀಡಿಲ್ಲ' ಎಂದು ಇಲಾಖೆಯ ಮೂಲಗಳು ಹೇಳಿವೆ.

## ❖ ಮರ್ಷಾನ್ ಚಿನ್ನದ ಬೇಟೆ ಆರಂಭ




ಚಿನ್ನ ಗೆದ್ದ ಸಂಭ್ರಮದಲ್ಲಿ ಫ್ರಾನ್ಸ್‌ನ ಲೆಯಾನ್ ಮರ್ಷಾನ್ ಎಎಫ್‌ಪಿ ಚಿತ್ರ

- ಫ್ರಾನ್ಸ್‌ನ ಈಜುತಾರೆ ಲೆಯಾನ್ ಮರ್ಷಾನ್ ಅವರು ಸಿಂಗಪುರದಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಬೇಟೆ ಆರಂಭಿಸಿದರು. ಮತ್ತೊಂದೆಡೆ ಕೆನಡಾದ ಸಮ್ಮರ್ ಮೆಕಿಂಟೋಷ್ ಹ್ಯಾಟ್ರಿಕ್ ಸ್ವರ್ಣ ಪದಕಕ್ಕೆ ಕೊರಳೊಡ್ಡಿದರು.
- ಪುರುಷರ 200 ಮೀಟರ್ ಮೆಡ್ಲೆಯ ಸೆಮಿಫೈನಲ್‌ನಲ್ಲಿ ವಿಶ್ವದಾಖಲೆ ನಿರ್ಮಿಸಿದ್ದ 23 ವರ್ಷದ ಮರ್ಷಾನ್, ನಡೆದ ಫೈನಲ್‌ನಲ್ಲಿ ನಿರೀಕ್ಷೆಯಂತೆ

ಅಗ್ರಸ್ಥಾನಿಯಾದರು. ಅವರು 1 ನಿಮಿಷ 53.68 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಇದು ಎರಡನೇ ಅತಿವೇಗದ ಅವಧಿ ಎನಿಸಿತು.

- ಮರ್ಷಾನ್ ಅವರು ಸೆಮಿಫೈನಲ್‌ನಲ್ಲಿ 1ನಿ.52.69 ಸೆ.ಗಳಲ್ಲಿ ಗುರಿ ಮುಟ್ಟುವ ಮೂಲಕ ಅಮೆರಿಕದ ರಯಾನ್ ಲಾಕ್ಟಿ 2011ರಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು (1:54.00) ಮುರಿದಿದ್ದರು. 400 ಮೀಟರ್ ಮೆಡ್ಲೆನಲ್ಲೂ ಮರ್ಷಾನ್ ಕಣಕ್ಕೆ ಇಳಿಯುವರು. ಈ ವಿಭಾಗದ ವಿಶ್ವದಾಖಲೆ ಅವರ ಹೆಸರಿನಲ್ಲೇ ಇದೆ.
- ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮರ್ಷಾನ್ ಅವರಿಗೆ ಇದು ಆರನೇ ಚಿನ್ನ. 2022ರ ಬುಡಾಪೆಸ್ಟ್‌ನಲ್ಲಿ ಎರಡು ಮತ್ತು 2023ರ ಫುಕುವೋಕಾ ದಲ್ಲಿ ಮೂರು ಸ್ವರ್ಣ ಗೆದ್ದಿದ್ದರು. ಕಳೆದ ವರ್ಷ ತವರಿನಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ನಾಲ್ಕು ಚಿನ್ನ ಸೇರಿದಂತೆ ಐದು ಪದಕ ತಮ್ಮದಾಗಿಸಿಕೊಂಡಿದ್ದರು. ಅಮೆರಿಕದ ಶೈನ್ ಕಾಸಸ್ (1:54.30) ಮತ್ತು ಹಂಗೇರಿಯ ಹ್ಯೂಬರ್ಟ್ ಕೋಸ್ (1:55.34) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.
- ಮೆಕಿಂಟೋಷ್ ಹ್ಯಾಟ್ರಿಕ್: 18 ವರ್ಷದ ಮೆಕಿಂಟೋಷ್ ಅವರು ಮಹಿಳೆಯರ 200 ಮೀಟರ್ ಬಟರ್ ಫ್ಲೈನಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದರು. ಅವರು 400 ಮೀ. ಬಟರ್‌ಫ್ಲೈ ಮತ್ತು 200 ಮೀ. ಮೆಡ್ಲೆನಲ್ಲಿ ಈಗಾಗಲೇ ಚಿನ್ನ ಗೆದ್ದಿದ್ದಾರೆ.

## ❖ ನೇಮಕ: ಸೇನಾಪಡೆಗಳ ಉಪ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಪುಷ್ಪೇಂದ್ರ ಸಿಂಗ್

- ನಿಯುಕ್ತಿ: ಲೆಫ್ಟಿನೆಂಟ್ ಜನರಲ್ ಪುಷ್ಪೇಂದ್ರ ಸಿಂಗ್ ಸೇನಾಪಡೆಗಳ ಉಪ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದರು.
- ಅನುಭವ: ಅವರು ಭಾರತೀಯ ಸೇನೆಯಲ್ಲಿ 38 ವರ್ಷಗಳ ಸೇವೆಯನ್ನು ಸಲ್ಲಿಸಿದ್ದು, ಈ ಅವಧಿಯಲ್ಲಿ ಹಲವು ಪ್ರಮುಖ ಹುದ್ದೆಗಳನ್ನು ವಹಿಸಿಕೊಂಡಿದ್ದಾರೆ.
- ಪ್ರಮುಖತೆ: ಉಪ ಮುಖ್ಯಸ್ಥರ ಹುದ್ದೆ ಸೇನೆಯ ನಿರ್ವಹಣಾ ಹಾಗೂ ಕಾರ್ಯತಂತ್ರದ ದೃಷ್ಟಿಯಿಂದ ಅತ್ಯಂತ ಪ್ರಮುಖವಾದದ್ದು. ಈ ನೇಮಕವು ಸೇನೆಯ ಮುಂದಿನ ಕಾರ್ಯಚಟುವಟಿಕೆಗಳ ಮೇಲೂ ಪ್ರಭಾವ ಬೀರುವ ಸಾಧ್ಯತೆ ಇದೆ.

## ❖ ಜಾಗತಿಕ ಅರ್ಥವ್ಯವಸ್ಥೆ ಮೇಲೆ ಪ್ರಹಾರ

**ಮುಖ್ಯ ಅಂಶಗಳು:**

- ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊಸ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ್ದು, ಭಾರತ ಸೇರಿದಂತೆ 70ಕ್ಕೂ ಹೆಚ್ಚು ದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳಿಗೆ ಭಾರಿ ಪ್ರಮಾಣದ ಆಮದು ಸುಂಕ (Import Tariff) ವಿಧಿಸಲಾಗಿದೆ.
- ಭಾರತದ ಸರಕುಗಳ ಮೇಲೆ ಶೇ. 25ರಷ್ಟು, ಕೆನಡಾ ಮೇಲೆ ಶೇ. 35ರಷ್ಟು ಸುಂಕ ವಿಧಿಸಲಾಗಿದೆ. ಈ ಕ್ರಮ ಜಾಗತಿಕ ಆರ್ಥಿಕ ವ್ಯವಸ್ಥೆಯ ಪುನರ್‌ಸಂಘಟನೆಗೆ ಕಾರಣವಾಗಲಿದೆ.
- ಅಮೆರಿಕ-ಭಾರತ ಸಂಬಂಧಗಳು, ಅತಿ ದೀರ್ಘಕಾಲದಿಂದ ಸಧೃಢವಾಗಿ ಬೆಳೆಯುತ್ತಿದ್ದ ಮಿತ್ರ ಬಾಂಧವ್ಯ, ಈ ಕ್ರಮದಿಂದ ಪರೀಕ್ಷೆಗೆ ಒಳಗಾಗುವ ಸಾಧ್ಯತೆ.

**ಭಾರತದ ಪ್ರತಿಕ್ರಿಯೆ:**

- ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ ಜೈಸ್ವಾಲ್ ಹೇಳಿಕೆ: "ಭಾರತ ಮತ್ತು ಅಮೆರಿಕ ಸಮಗ್ರ ಪಾಲುದಾರಿಕೆ ಹೊಂದಿವೆ. ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಸಾಮಾನ್ಯ ಹಿತಾಸಕ್ತಿಗಳ ಮೂಲಕ ಉಭಯ ರಾಷ್ಟ್ರಗಳು ಬಲವಾಗಿ ಬದ್ಧವಿವೆ."
- ಟ್ರಂಪ್ ಅವರ 'ಭಾರತ ಸತ್ತ ಆರ್ಥಿಕತೆ' ಎಂಬ ಹೇಳಿಕೆಗೆ ಭಾರತ ತೀಕ್ಷ್ಣವಾಗಿ ಪ್ರತಿಸ್ಪಂದಿಸಿದೆ.

ಅಮೆರಿಕದ ಹೊಸ ಸುಂಕ ನೀತಿ – ಪರಿಣಾಮ ಮತ್ತು ಪ್ರತಿಕ್ರಿಯ ಪ್ರಮುಖ ಅಂಶಗಳು:

ವ್ಯಾಪಾರ ಒಪ್ಪಂದದ ಗಡುವು ಮುಗಿದಿದೆ:

- ಭಾರತ ಸೇರಿದಂತೆ ಹಲವು ದೇಶಗಳೊಂದಿಗೆ ವ್ಯಾಪಾರ ಒಪ್ಪಂದಕ್ಕೆ ಕೊನೆಯ ದಿನ ಶುಕ್ರವಾರವಾಗಿತ್ತು. ಹೊಸ ಮಾತುಕತೆಗೆ ಅವಕಾಶ ಇರುವದಾದರೂ, ಆಗಸ್ಟ್ 7ರಿಂದ ಹೊಸ ಸುಂಕಗಳು ಜಾರಿಯಾಗಲಿವೆ.

**ಬ್ರೆಜಿಲ್ ಮೇಲಿನ ಸುಂಕ:**

- ಮೊದಲಿಗೆ ಟ್ರಂಪ್ ಶೇ.50 ರಷ್ಟು ಎಂದು ಘೋಷಿಸಿದ್ದರೂ, ಈಗ ಶೇ.10 ಮತ್ತು ಶೇ.40ರಷ್ಟು ದ್ವಿತೀಯ ದರ್ಜೆಯ ಸರಕುಗಳಿಗೆ ಸುಂಕ ವಿಧಿಸಲಾಗಿದೆ.

**ಕೆನಡಾ ಮೇಲೆ ಹೆಚ್ಚು ಒತ್ತಡ:**

- ಮೊದಲಿಗೆ ಶೇ.25ರಷ್ಟು ಎಂದು ಹೇಳಿ, ನಂತರ ಶೇ.35ಕ್ಕೆ ಹೆಚ್ಚಳ.

**ಭಾರತಕ್ಕೆ ಪ್ರಭಾವ:**

- ಶೇ.25ರಷ್ಟು ಹೊಂದಾಣಿಕೆ ಸುಂಕ ವಿಧಿಸಲಾಗಿದೆ.
- ರಷ್ಯಾದಿಂದ ಶಸ್ತ್ರಾಸ್ತ್ರ ಮತ್ತು ಇಂಧನ ಖರೀದಿಗೆ ಸಂಬಂಧಿಸಿದ ದಂಡದ ಬಗ್ಗೆ ಆದೇಶದಲ್ಲಿ ಸ್ಪಷ್ಟತೆಯಿಲ್ಲ.

**ವಿನಾಯಿತಿ – ತಾತ್ಕಾಲಿಕ ನಿಶ್ವಾಸ:**

- ಆಗಸ್ಟ್ 7ರ ಒಳಗಾಗಿ ಸಾಗುತ್ತಿರುವ ಸರಕುಗಳಿಗೆ ವಿನಾಯಿತಿ.
- ಅಕ್ಟೋಬರ್ 5ರ ಒಳಗಿನ ಉಪಯೋಗ ಸರಕುಗಳಿಗೂ ವಿನಾಯಿತಿ ನೀಡಲಾಗಿದೆ.


**ಅನ್ವಯಿಸುವಲ್ಲಿ ಕಷ್ಟಗಳು:**

- ವಿವಿಧ ದೇಶಗಳಿಗೆ ಸುಂಕದ ಪ್ರಮಾಣ ವ್ಯತ್ಯಾಸದಲ್ಲಿರುವ ಕಾರಣ, ಅಮೆರಿಕದ ಕಸ್ಟಮ್ಸ್ ಅಧಿಕಾರಿಗಳಿಗೆ ಅನುಷ್ಠಾನದಲ್ಲಿ ಸಮಸ್ಯೆ. ಸುಂಕದಿಂದ ಅಮೆರಿಕದ ಕಂಪನಿಗಳಿಗೂ ತೊಂದರೆಗಳು ಸಂಭವಿಸಬಹುದು.

**ಸಾರಾಂಶ:**

- ಅಮೆರಿಕ ಹೊಸ ರೀತಿಯ ವ್ಯಾಪಾರ ನೀತಿಯನ್ನು ಅನುಸರಿಸುತ್ತಿದ್ದು, ಇದು ಜಾಗತಿಕ ವ್ಯಾಪಾರ ಸಂಬಂಧಗಳಿಗೆ ಶಂಕೆಯ ಮಂಜು ಹೊದಿಸುತ್ತಿದೆ. ಭಾರತ, ಕೆನಡಾ, ಬ್ರೆಜಿಲ್ ಮೊದಲಾದ ದೇಶಗಳಿಗೆ ವಿಭಿನ್ನ ಪ್ರಮಾಣದ ಸುಂಕ ವಿಧಿಸಿ, ಟ್ರಂಪ್ ಆಡಳಿತ ತನ್ನ ಆರ್ಥಿಕ ರಾಷ್ಟ್ರೀಯತೆಯ ನಿಲುವು ಸ್ಪಷ್ಟಪಡಿಸಿದೆ. ಇದರಿಂದ ಹಲವು ದೇಶಗಳು ಹಾಗೂ ಕಂಪನಿಗಳಿಗೆ ಅಸ್ಥಿರತೆ ಮತ್ತು ಅನಿಶ್ಚಿತತೆ ಎದುರಾಗುವ ಸಾಧ್ಯತೆ ಇದೆ.

## ❖ ಟ್ರಂಪ್ 25% ಸುಂಕ: ಪರಿಣಾಮ ಏನು?


ಭಾರತದಿಂದ ಆಮದು ಮಾಡಿಕೊಳ್ಳುವ ಎಲ್ಲ ವಸ್ತುಗಳ ಮೇಲೆ ಶೇ 25ರಷ್ಟು ಸುಂಕ ಹೇರುವುದಾಗಿ ಅಮೆರಿಕ ಘೋಷಿಸಿರುವುದು ದೇಶದ ಉದ್ಯಮ ರಂಗದಲ್ಲಿ ಆತಂಕ ಮೂಡಿಸಿದೆ. ಇದರಿಂದ ಜುಲೈ ಮತ್ತು ಸೆಪ್ಟೆಂಬರ್ ನಡುವಿನ ದೇಶದ ಒಟ್ಟು ರಫ್ತಿನಲ್ಲಿ ಶೇ 10ರಷ್ಟು ಸರಕುಗಳ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಲಾಗುತ್ತಿದೆ. ಜತೆಗೆ, ಹರಳುಗಳು ಮತ್ತು ಆಭರಣ, ಔಷಧಗಳು, ಜವಳಿ, ಎಲೆಕ್ಟ್ರಾನಿಕ್ಸ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೆಚ್ಚು ಪರಿಣಾಮ ಉಂಟಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ. ದೇಶದ ಜಿಡಿಪಿ ಅಂದಾಜಿನಲ್ಲಿ ಶೇ 0.30ರಷ್ಟು ಕುಸಿತ ಉಂಟಾಗಬಹುದು ಎಂದು ಅಂದಾಜಿಸಲಾಗಿದೆ. ಇದು ಟ್ರಂಪ್ ಅವರ ಒತ್ತಡ ತಂತ್ರವಾಗಿದ್ದು, ಮುಂದಿನ ದಿನಗಳಲ್ಲಿ ಸುಂಕದ ಪ್ರಮಾಣ ಕಡಿಮೆ ಆಗಬಹುದು ಎನ್ನುವ ಮಾತುಗಳೂ ಕೇಳಿಬರುತ್ತಿವೆ

# ಟ್ರಂಪ್ 25% ಸುಂಕ: ಪರಿಣಾಮ ಏನು?



ಸುಂಕದ ಹೊರೆ: ಯಾರ ಮೇಲೆ ಎಷ್ಟು? (%ಗಳಲ್ಲಿ)

| ವಲಯ | ಭಾರತ (ರಫ್ತುದಾರ) | ಅಮೆರಿಕ (ಆಮದುದಾರ) | ಗ್ರಾಹಕ (ಅಮೆರಿಕನ್ನರು) |
|---|---|---|---|
| ಔಷಧ | 50-60 | 30 | 10-20 |
| ಜವಳಿ ಮತ್ತು ಉಡುಪು | 40-50 | 30-40 | 10-20 |
| ವಾಹನಗಳ ಬಿಡಿಭಾಗಗಳು | 30-40 | 40 | 20-30 |
| ಆಭರಣಗಳು | 30-40 | 30-40 | 20-30 |
| ಎಂಜಿನಿಯರಿಂಗ್ ಸರಕುಗಳು | 50-60 | 30 | 10-20 |
| ಐಟಿ ಹಾರ್ಡ್‌ವೇರ್/ಎಲೆಕ್ಟ್ರಾನಿಕ್ಸ್ | 30-40 | 30-40 | 20-30 |

## ❖ 'ಭಾರತಕ್ಕಿಂತ ಅಮೆರಿಕಕ್ಕೆ ಹೆಚ್ಚು ನಷ್ಟ'

- ಭಾರತದ ಮೇಲೆ ಅಮೆರಿಕ ವಿಧಿಸಿರುವ ಹೆಚ್ಚಿನ ಸುಂಕವು, ಭಾರತಕ್ಕಿಂತ ಅಮೆರಿಕದ ಜಿಡಿಪಿ ಮತ್ತು ಹಣದುಬ್ಬರದ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ. ಈ ಸುಂಕ ಹೇರಿಕೆಯು ಅಮೆರಿಕದ 'ಕೆಟ್ಟ ವ್ಯಾಪಾರ ನಿರ್ಧಾರವಾಗಿದೆ' ಎಂದು ಎಸ್‌ಬಿಐ ರಿಸರ್ಚ್ ತಿಳಿಸಿದೆ.
- ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದಿಂದ ಆಮದು ಮಾಡಿಕೊಳ್ಳಲಾಗುವ ಎಲ್ಲ ಸರಕುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಲು ತೀರ್ಮಾನಿಸಿದ್ದಾರೆ.
- ಭಾರತಕ್ಕೆ ಅಧಿಕ ಸುಂಕ ವಿಧಿಸಿ ರುವುದು, ಭಾರತಕ್ಕಿಂತ ಅಮೆರಿಕದ ಮೇಲೆಯೇ ಹೆಚ್ಚು ನಕಾರಾತ್ಮಕ ಪರಿಣಾಮ ಬೀರಲಿದೆ. ಅಮೆರಿಕದ ಆರ್ಥಿಕತೆ ಕುಂಠಿತಗೊಳ್ಳುವ, ಡಾಲರ್ ಮೌಲ್ಯವೂ ಕುಸಿಯುವ ಸಾಧ್ಯತೆ ಇದೆ. 2026ರ ವೇಳೆಗೆ ಅಮೆರಿಕದ ಹಣದುಬ್ಬರ ಶೇ 2ಕ್ಕಿಂತ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಎಸ್‌ಬಿಐ ರಿಸರ್ಚ್ ಹೇಳಿದೆ.
- ಸುಂಕ ಹೆಚ್ಚಳದಿಂದ ವಸ್ತುಗಳ ಬೆಲೆ ಏರಿಕೆಯಾಗಲಿದೆ. ಇದರಿಂದ ಅಲ್ಪಾವಧಿ ಯಲ್ಲಿ ಅಮೆರಿಕದ ಕುಟುಂಬವೊಂದಕ್ಕೆ ಸರಾಸರಿ ₹2.10 ಲಕ್ಷ ನಷ್ಟ ಉಂಟಾಗುವ ಅಂದಾಜಿದೆ. ಕಡಿಮೆ ಆದಾಯ ಹೊಂದಿರುವ ಕುಟುಂಬಗಳು ₹1.13 ಲಕ್ಷ ನಷ್ಟ ಅನುಭವಿಸಿದರೆ, ಹೆಚ್ಚಿನ ಆದಾಯ ಹೊಂದಿರುವ ಕುಟುಂಬಗಳು ₹4.37 ಲಕ್ಷ ನಷ್ಟ ಕಾಣುವ ನಿರೀಕ್ಷೆಯಿದೆ.
- ಈ ಮೊದಲು ಕೆಲವು ಸರಕುಗಳಿಗೆ ಅಮೆರಿಕವು ಕಡಿಮೆ ಸುಂಕ ವಿಧಿಸುತ್ತಿತ್ತು. ವಜ್ರ, ಸ್ಮಾರ್ಟ್‌ಫೋನ್‌ಗಳು, ಔಷಧ ಉತ್ಪನ್ನ ಹಾಗೂ ಇತರೆ ವಸ್ತುಗಳಿಗೆ ಗರಿಷ್ಠ ಸುಂಕ ಶೇ 10.8ರಷ್ಟಿತ್ತು. ಇದೀಗ ಈ ಎಲ್ಲ ಸರಕುಗಳ ಮೇಲೆ ಶೇ 25ರಷ್ಟು ಸುಂಕ ತೆರಬೇಕಿದೆ ಎಂದು ತಿಳಿಸಿದೆ.
- ಅಮೆರಿಕದ ಒಟ್ಟು ಔಷಧಗಳ ಬೇಡಿಕೆಯ ಪೈಕಿ, ಭಾರತ ಪೂರೈಸುವ ಔಷಧಗಳ ಪ್ರಮಾಣ ಶೇ 47ರಷ್ಟು. ಒಂದು ವೇಳೆ ಅಮೆರಿಕ, ಔಷಧಗಳ ತಯಾರಿಕೆಯನ್ನು ಬೇರೆ ದೇಶಗಳಿಗೆ ಅಥವಾ ದೇಶದಲ್ಲಿನ ಉತ್ಪಾದನಾ ಘಟಕಗಳಿಗೆ ವಹಿಸಿದಲ್ಲಿ, ಪೂರ್ಣ ಪ್ರಮಾಣದಲ್ಲಿ ಉತ್ಪಾದನಾ ಚಟುವಟಿಕೆಗಳು ಆರಂಭಗೊಳ್ಳುವುದಕ್ಕೆ ಕನಿಷ್ಠ 3ರಿಂದ 5 ವರ್ಷ ಬೇಕಾಗುತ್ತದೆ. ಇದು ಔಷಧಿ ಕೊರತೆಯನ್ನು ಹೆಚ್ಚಿಸುವುದಲ್ಲದೆ, ಅಮೆರಿಕದ ನಾಗರಿಕರು ಹೆಚ್ಚಿನ ದರ ನೀಡಿ ಔಷಧ ಖರೀದಿಸಬೇಕಾಗ ಬಹುದು. ಅಲ್ಲದೆ ಇದು ಔಷಧ ಕಂಪನಿಗಳ ಗಳಿಕೆಯ ಮೇಲೂ ಪರಿಣಾಮ ಬೀರಲಿದೆ.

## ❖ 'ಬೆಂಗಳೂರು ಡೀಪ್ ಟೆಕ್ ರಾಜಧಾನಿ'

- ಬೆಂಗಳೂರು ನಗರವನ್ನು ದಕ್ಷಿಣ ಏಷ್ಯಾದ ಡೀಪ್ ಟೆಕ್ ರಾಜಧಾನಿ ಯನ್ನಾಗಿ ಮಾಡಲು ರಾಜ್ಯ ಸರ್ಕಾರ ಕೆಲಸ ಮಾಡುತ್ತಿದೆ.
- ಭಾರತದಲ್ಲಿ ಎಂಜಿನಿಯರಿಂಗ್, ವಿಜ್ಞಾನ ಮತ್ತು ವಿನ್ಯಾಸ ಪ್ರತಿಭೆಗಳ ಅತ್ಯಧಿಕ ಸಾಂದ್ರತೆಯೊಂದಿಗೆ, ನಗರವು ಈಗ ಜಾಗತಿಕವಾಗಿ ಅಗ್ರ 5 ಎಐ ಪ್ರತಿಭಾನ್ವಿತ ನಗರಗಳಲ್ಲಿ ಸ್ಥಾನ ಪಡೆದಿದೆ. ಉದಯೋನ್ಮುಖ ಎಐ ಕೇಂದ್ರಗಳಲ್ಲಿ ಸ್ಯಾನ್ ಫ್ರಾನ್ಸಿಸ್ಕೋ ನಂತರ ಎರಡನೇ ಸ್ಥಾನದಲ್ಲಿದೆ ಎಂದು ಅವರು ಹೇಳಿದರು.
- 'ರಾಜ್ಯವು ಎಲ್ಲರನ್ನೊಳಗೊಳ್ಳುವ ಅಭಿವೃದ್ಧಿಯಲ್ಲಿ ಬದ್ಧತೆ ಹೊಂದಿದೆ. ನಮ್ಮ ಹೊಸ ಆವಿಷ್ಕಾರ ಜಿಲ್ಲೆಗಳಾದ ಬೆಂಗಳೂರು, ಮೈಸೂರು ಹಾಗೂ ಬೆಳಗಾವಿ ಸಂಶೋಧನೆ ಹಾಗೂ ಉದ್ಯೋಗದಲ್ಲಿ ಪ್ರಗತಿ ಕಾಣಲಿವೆ. ಮಂಗಳೂರಿನಲ್ಲಿ ಫಿನ್ ಟೆಕ್ ಯೋಜನೆ ಹಾಗೂ ಹುಬ್ಬಳ್ಳಿ- ಧಾರವಾಡದಲ್ಲಿ ಡ್ರೋನ್ ಅಭಿವೃದ್ಧಿ ಯೋಜನೆಗಳು ನಮ್ಮ ಸಮತೋಲಿತ ಬೆಳವಣಿಗೆಯಲ್ಲಿನ ದೂರದೃಷ್ಟಿಯನ್ನು ಬಿಂಬಿಸುತ್ತದೆ' ಎಂದರು.
- ಕರ್ನಾಟಕವು ಭಾರತದ ಐಟಿ ಕ್ಷೇತ್ರದ ರಫ್ತಿಗೆ ಸುಮಾರು 64 ಬಿಲಿಯನ್ ಡಾಲರ್‌ನಷ್ಟು ಕೊಡುಗೆ ನೀಡಿದೆ.ಇದು ರಾಷ್ಟ್ರದ ಒಟ್ಟು ರಫ್ತಿನ ಮೂರನೇ ಒಂದು ಭಾಗವಾಗಿದೆ ಎಂದರು.

## ❖ ನೌಕಾಪಡೆಗೆ 'ಹಿಮಗಿರಿ' ಹಸ್ತಾಂತರ

- ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್ ಲಿಮಿಟೆಡ್ (ಜಿಆರ್‌ಎಸ್‌ಇ) ತನ್ನ ಸುಧಾರಿತ ಮಾರ್ಗದರ್ಶಿ ಕ್ಷಿಪಣಿ ಯುದ್ಧ ನೌಕೆ 'ಹಿಮಗಿರಿ' ಅನ್ನು ಭಾರತೀಯ ನೌಕಾಪಡೆಗೆ ಹಸ್ತಾಂತರಿಸಿದೆ.
- ಭಾರತೀಯ ನೌಕಾ ಪಡೆಯ ಪ್ರಾಜೆಕ್ಟ್ 17ಎ ಅಡಿಯಲ್ಲಿ ಜಿಆರ್‌ಎಸ್‌ಇ ನಿರ್ಮಿಸುತ್ತಿರುವ ಮೂರು ಯುದ್ಧ ನೌಕೆಗಳಲ್ಲಿ 'ಹಿಮಗಿರಿ' ಯು ಮೊದಲನೆಯದ್ದಾಗಿದೆ.
- ಹಿಮಗಿರಿ, ಜಿಆರ್‌ಎಸ್‌ಇ ನಿರ್ಮಿಸಿ ಪೂರೈಸುತ್ತಿರುವ 801ನೇ ಹಡಗು. ಇವುಗಳಲ್ಲಿ 112 ಯುದ್ಧ ನೌಕೆಗಳಿವೆ. 149 ಮೀಟರ್ ಉದ್ದ, 6,670 ಟನ್ ತೂಕವನ್ನು ಹೊಂದಿವೆ. ಈ ಮೂರು ಹಡಗುಗಳ ಮೌಲ್ಯ ₹21,833 ಕೋಟಿಗೂ ಹೆಚ್ಚಾಗಿದೆ.
- ಈ ಯುದ್ಧನೌಕೆಯನ್ನು ಪೂರ್ವ ನೌಕಾ ಕಮಾಂಡ್‌ನ ಮುಖ್ಯ ಸಿಬ್ಬಂದಿ ಅಧಿಕಾರಿ (ತಾಂತ್ರಿಕ) ರಿಯರ್ ಅಡ್ಮಿರಲ್ ರವೀಶ್ ಸೇಠ್ ಸ್ವೀಕರಿಸಿದರು.

## ❖ ಶಾರುಕ್- ವಿಕ್ರಾಂತ್ 'ಅತ್ಯುತ್ತಮ ನಟ'

- 2023ನೇ ಸಾಲಿನ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಗಳನ್ನು ಘೋಷಿಸಲಾಗಿದ್ದು, ಬಾಲಿವುಡ್ ನಟ ಶಾರುಕ್ ಖಾನ್ ಮತ್ತು ವಿಕ್ರಾಂತ್ ಮೇಸಿ ಅವರು 'ಆತ್ಯುತ್ತಮ ನಟ' ಪ್ರಶಸ್ತಿಯನ್ನು ಹಂಚಿಕೊಂಡಿದ್ದಾರೆ.
- 'ಮಿಸ್ಟ್ರಸ್ ಚಟರ್ಜಿ ವರ್ಸಸ್ ನಾರ್ವೆ' ಚಿತ್ರದ ಅಭಿನಯಕ್ಕಾಗಿ ಬಾಲಿವುಡ್ ನಟಿ ರಾಣಿ ಮುಖರ್ಜಿ ಅವರು 'ಅತ್ಯುತ್ತಮ ನಟಿ' ಪ್ರಶಸ್ತಿ ಪಡೆದುಕೊಂಡಿದ್ದಾರೆ.
- ಶಾರುಕ್ ಅವರು ತಮ್ಮ 37 ವರ್ಷಗಳ ವೃತ್ತಿಜೀವನದಲ್ಲಿ ಅತ್ಯುತ್ತಮ ನಟನೆಗಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದಿರುವುದು ಇದೇ ಮೊದಲು. 'ಜವಾನ್' ಚಿತ್ರದ ಅಭಿನಯಕ್ಕಾಗಿ ಅವರಿಗೆ ಈ ಗೌರವ ಸಂದಿದೆ. ವಿಕ್ರಾಂತ್ ಅವರು 'ಟ್ವೆಲ್ತ್ ಫೇಲ್' ಚಿತ್ರದ ಅಭಿನಯಕ್ಕೆ ಈ ಪ್ರಶಸ್ತಿಗೆ ಭಾಜನ ರಾಗಿದ್ದಾರೆ.
- 71ನೇ ರಾಷ್ಟ್ರೀಯ ಪ್ರಶಸ್ತಿ ಇದಾಗಿದ್ದು, ಪುರಸ್ಕೃತರ ಪಟ್ಟಿಯನ್ನು ತೀರ್ಪುಗಾರರ ಮಂಡಳಿಯ ಅಧ್ಯಕ್ಷ, ಚಲನಚಿತ್ರ ನಿರ್ಮಾಪಕ ಅಶುತೋಷ್ ಗೋವಾರಿಕರ್ ಘೋಷಿಸಿದರು.
- ವಿಧು ವಿನೋದ್ ಚೋಪ್ರಾ ನಿರ್ದೇಶನದ 'ಟ್ವೆಲ್ತ್ ಫೇಲ್' ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಪಡೆದರೆ, 'ದಿ ಕೇರಳ ಸ್ಟೋರಿ' ಚಿತ್ರಕ್ಕಾಗಿ ಸುದಿಪ್ತೋ ಸೇನ್ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಯನ್ನು ಪಡೆದರು.
- ಚಿತ್ರ ನಿರ್ಮಾಪಕ ಕರಣ್ ಜೋಹರ್ ಅವರ 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಸಿನಿಮಾಗೆ ಅತ್ಯುತ್ತಮ ಮನರಂಜನಾ ಸಿನಿಮಾ ಪ್ರಶಸ್ತಿ ಲಭಿಸಿದೆ. ಮೇಘನಾ ಗುಲ್ಜಾರ್ ಅವರ 'ಸ್ಯಾಮ್ ಬಹಾದೂರ್' ಸಿನಿಮಾ ರಾಷ್ಟ್ರೀಯ, ಸಾಮಾಜಿಕ ಮತ್ತು ಪರಿಸರ ಮೌಲ್ಯಗಳನ್ನು ಉತ್ತೇಜಿಸುವ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಪಡೆದುಕೊಂಡಿದೆ.
- ಹಿಂದಿ ಸಿನಿಮಾಗಳು ಪ್ರಮುಖ ವಿಭಾಗಗಳಲ್ಲಿ ಪ್ರಾಬಲ್ಯ ಸಾಧಿಸಿದರೆ, ಪ್ರಾದೇಶಿಕ ಸಿನಿಮಾಗಳು ಅತ್ಯುತ್ತಮ ಪೋಷಕ ನಟ, ಪೋಷಕ ನಟಿ ಮತ್ತು ತಾಂತ್ರಿಕ ವಿಭಾಗಗಳಲ್ಲಿ ಹೆಚ್ಚು ಪ್ರಶಸ್ತಿ ಗಳನ್ನು ಗೆದ್ದುಕೊಂಡವು.
- ಮಲಯಾಳ ಸಿನಿಮಾ 'ಪೂಕ್ಕಳಂ' ನ ಅಭಿನಯಕ್ಕಾಗಿ ವಿಜಯರಾಘವನ್, ತಮಿಳು ಸಿನಿಮಾ 'ಪಾರ್ಕಿಂಗ್' ನ ಅಭಿನಯಕ್ಕಾಗಿ ಮುತ್ತುಪೆಟ್ಟೈ ಸೋಮು ಭಾಸ್ಕರ್ ಅತ್ಯುತ್ತಮ ಪೋಷಕ ನಟ ಪ್ರಶಸ್ತಿಯನ್ನು ಹಂಚಿಕೊಂಡರು.
- ಮಲಯಾಳ ಚಿತ್ರ 'ಉಳ್ಳೊಝುಕ್ಕು' ನ ಅಭಿನಯಕ್ಕಾಗಿ ಊರ್ವಶಿ ಮತ್ತು ಗುಜರಾತಿ ಸಿನಿಮಾ 'ವಶ್' ನ ಅಭಿನಯಕ್ಕಾಗಿ ಜಾನಕಿ ಬೋದೀವಾಲಾ ಅವರು ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಗೆದ್ದುಕೊಂಡರು.

### ಕನ್ನಡದ ಅತ್ಯುತ್ತಮ ಚಿತ್ರ 'ಕಂದೀಲು'

- ಕೆ.ಯಶೋಧ ಪ್ರಕಾಶ್ ನಿರ್ದೇಶನದ 'ಕಂದೀಲು' ಕನ್ನಡದ ಅತ್ಯುತ್ತಮ ಚಿತ್ರವಾಗಿ ಹೊರಹೊಮ್ಮಿದೆ. ಚಿದಾನಂದ ನಾಯ್ಕ ಅವರ 'ಸೂರ್ಯಕಾಂತಿ ಹೂಗೆ ಮೊದಲು ಗೊತ್ತಾಗಿದ್ದು' ಸಿನಿಮಾ ನಾನ್ ಫೀಚರ್ ವಿಭಾಗದಲ್ಲಿ 'ಅತ್ಯುತ್ತಮ ಚಿತ್ರಕಥೆ' ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

- ಅತ್ಯುತ್ತಮ ಪ್ರಾದೇಶಿಕ ಸಿನಿಮಾ ವಿಭಾಗದಲ್ಲಿ ಕನ್ನಡದ 'ಕಂದೀಲು' ಅಲ್ಲದೆ, ರೊಂಗಾಟಾಪು 1982 (ಅಸ್ಸಾಮಿ), ಡೀಪ್ ಫ್ರಿಜ್ (ಬೆಂಗಾಳಿ), ಪಾರ್ಕಿಂಗ್ (ತಮಿಳು), ಶ್ಯಾಮ್ಚಿ ಆಯಿ (ಮರಾಠಿ), ಪುಷ್ಕರ (ಒಡಿಯಾ), ಗಾಡ್ಡೆ ಗಾಡ್ಡೆ ಚಾ (ಪಂಜಾಬಿ) ಮತ್ತು ಭಗವಂತ್ ಕೇಸರಿ (ತೆಲುಗು) ಸಿನಿಮಾಗಳಿಗೆ ಪ್ರಶಸ್ತಿ ಲಭಿಸಿದವು.

## ❖ ಹೈಕೋರ್ಟ್ 4ನೇ ಪೀಠ – ಕೊಲ್ಹಾಪುರದಲ್ಲಿ ಸ್ಥಾಪನೆ

- ಪೀಠ: ಬಾಂಬೆ ಹೈಕೋರ್ಟ್‌ನ 4ನೇ ಪೀಠ
- ಕಾರ್ಯಾರಂಭ ದಿನಾಂಕ: ಆಗಸ್ಟ್ 18
- ಅಧಿಸೂಚನೆ: ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಅಲೋಕ್ ಆರಾಧೆ ಹೊರಡಿಸಿದ್ದಾರೆ.

**ಪ್ರಾಮುಖ್ಯತೆ:**

- ಇದು ಮಹಾರಾಷ್ಟ್ರದ ನ್ಯಾಯಾಂಗದಲ್ಲಿ ಮಹತ್ವದ ಬೆಳವಣಿಗೆಯಾಗಿದೆ.
- ಕೊಲ್ಹಾಪುರ ಸೇರಿದಂತೆ ಅದರ ಸುತ್ತಲಿನ ಜಿಲ್ಲೆಯವರಿಗೆ ನ್ಯಾಯಸೇವೆ ಸುಲಭವಾಗಿ ಲಭ್ಯವಾಗಲಿದ್ದು, ಮುಂಬೈಗೆ ಹೋಗುವ ಅವಶ್ಯಕತೆ ಕಡಿಮೆಯಾಗಲಿದೆ.

## ❖ ಸೆ.9ರಂದು ಉಪ ರಾಷ್ಟ್ರಪತಿ ಚುನಾವಣೆ

- 'ಜಗದೀಪ್ ಧನಕರ್ ರಾಜೀನಾಮೆಯಿಂದ ತೆರವಾಗಿರುವ ಉಪ ರಾಷ್ಟ್ರಪತಿ ಸ್ಥಾನಕ್ಕೆ ಸೆಪ್ಟೆಂಬರ್ 9ರಂದು ಮತದಾನ ನಡೆಯಲಿದೆ' ಎಂದು ಚುನಾವಣಾ ಆಯೋಗ ತಿಳಿಸಿದೆ.
- ***ಉಪರಾಷ್ಟ್ರಪತಿ ಆಯ್ಕೆಯ ಚುನಾವಣೆಯಲ್ಲಿ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ನಾಮ ನಿರ್ದೇಶನಗೊಂಡ ಸದಸ್ಯರು ಮತದಾನ ಮಾಡಲು ಅವಕಾಶವಿದೆ. ಅದರಂತೆ, ರಾಜ್ಯಸಭೆಯ 233 ಚುನಾಯಿತ ಸದಸ್ಯರು, 12 ನಾಮನಿರ್ದೇಶಿತ ಸದಸ್ಯರು ಹಾಗೂ ಲೋಕಸಭೆಯ 543 ಸಂಸದರು ಮತದಾನ ಮಾಡುವ ಅರ್ಹತೆ ಹೊಂದಿರುತ್ತಾರೆ.***
- ರಾಜ್ಯಸಭೆಯ ಐದು ಸ್ಥಾನಗಳು ಖಾಲಿ ಉಳಿದಿದ್ದು, ಪಶ್ಚಿಮ ಬಂಗಾಳದ ಬಶಿರ್‌ಹಾಟ್ ಲೋಕಸಭಾ ಕ್ಷೇತ್ರವು ಖಾಲಿ ಇರುವ ಕಾರಣ ಒಟ್ಟು ಸದಸ್ಯತ್ವವು 782ಕ್ಕೆ ಇಳಿದಿದೆ. ಆಡಳಿತಾರೂಢ ಎನ್‌ಡಿಎ ಒಕ್ಕೂಟ 422 ಸದಸ್ಯರನ್ನು ಹೊಂದಿದ್ದು, ಸರಳ ಬಹುಮತ ಹೊಂದಿದೆ.

## ❖ ಚೀನಾದ ಹಯಾಂಗ್‌ಗೆ ಎರಡನೇ ಚಿನ್ನ

- ವಿಶ್ವ ಈಜು ಚಾಂಪಿಯನ್‌ಷಿಪ್‌ನ ಐದು ಸ್ಪರ್ಧೆಗಳ ಚಿನ್ನದ ಪದಕಗಳು ಐದು ದೇಶಗಳಿಗೆ ಹಂಚಿಹೋದವು. ಫ್ರಾನ್ಸ್‌ನ ಲೆಯಾನ್ ಮರ್ಷಾನ್ ಮತ್ತು ಕೆನಡಾದ ಸಮ್ಮರ್ ಮೆಕಿಂಟೋಷ್ ಅವರಿಗೆ ಯಾವುದೇ ಫೈನಲ್ ಸ್ಪರ್ಧೆ ಇರಲಿಲ್ಲ.
- ಚೀನಾದ ಅನುಭವಿ ಈಜುಪಟು ಕಿನ್ ಹಯಾಂಗ್ ಅವರು ಎರಡನೇ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. 26 ವರ್ಷದ ಅವರು ಪುರುಷರ 200 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಫೈನಲ್‌ನಲ್ಲಿ 2 ನಿಮಿಷ 07.41 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು.

## ❖ ಮನರೇಗಾ ವ್ಯವಸ್ಥೆ ಕಣ್ಗಾವಲಿಗೆ ಆ್ಯಪ್

- 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಜಾರಿಯಲ್ಲಿ ಪಾರದರ್ಶಕತೆ ಹೆಚ್ಚಿಸಿ, ದೋಷಗಳನ್ನು ಸರಿಪಡಿಸಲು ಬಳ್ಳಾರಿ ಜಿಲ್ಲಾ ಪಂಚಾಯಿತಿಯು ಪ್ರತ್ಯೇಕ ಆ್ಯಪ್ ರೂಪಿಸಿ ಗಮನ ಸೆಳೆದಿದೆ.
- ಯೋಜನೆಯಡಿ ಕಾಮಗಾರಿಗಳಲ್ಲಿ ನುಸುಳುವ ಅಕ್ರಮಗಳನ್ನು ಮನಗಂಡ ಬಳ್ಳಾರಿ ಜಿಲ್ಲಾ ಪಂಚಾಯಿತಿಯು, ಮೇಲುಸ್ತುವಾರಿ ತಂಡದ ಕಾರ್ಯನಿರ್ವಹಣೆ ಮೇಲೆ ನಿಗಾ ವಹಿಸಲೆಂದೇ ಪ್ರತ್ಯೇಕ ಆ್ಯಪ್ ಪರಿಚಯಿಸಿತು. ಮನರೇಗಾ ಯೋಜನೆಯ ಅಧಿಕಾರಿ, ಸಿಬ್ಬಂದಿ ಈ ಆ್ಯಪ್ ಬಳಸುವುದನ್ನು ಕಳೆದ ಮೂರು ತಿಂಗಳಿಂದ ಕಡ್ಡಾಯಗೊಳಿಸಿದೆ.
- ಪ್ರತಿ ಅಧಿಕಾರಿ, ಸಿಬ್ಬಂದಿ ಆಯಾ ದಿನ ಕೆಲಸಕ್ಕೆ ಹಾಜರಾಗುತ್ತಲೇ ಮೊದಲಿಗೆ ಆ್ಯಪ್‌ನಲ್ಲಿ ಹಾಜರಾತಿ ಹಾಕಬೇಕು, ಬಳಿಕ ಅಂದು ನಿರ್ವಹಿಸಿದ ಕೆಲಸಗಳನ್ನು ನಮೂದು ಮಾಡಬೇಕು. ಕ್ಷೇತ್ರ ಪರಿಶೀಲನೆ, ಕಚೇರಿ ಕೆಲಸ, ಹೀಗೆ ಯಾವ ಕೆಲಸ ಮಾಡಲಾಗಿದೆ ಎಂಬುದನ್ನು ಜಿಪಿಎಸ್ ಫೋಟೊ ಸಹಿತ ಮೊಬೈಲ್ ಆ್ಯಪ್‌ಗೆ ಅಪ್ಲೋಡ್ ಮಾಡಬೇಕು. ಗ್ಯಾಲರಿಯಿಂದ ಹಳೆಯ ಫೋಟೊ ಅಪ್ಲೋಡ್‌ಗೆ ಅವಕಾಶವನ್ನೇ ಕೊಡಲಾಗಿಲ್ಲ. ಆ ಕ್ಷಣವೇ ಜಿಪಿಎಸ್ ಫೋಟೊ ತೆಗೆದು ಅಪ್ಲೋಡ್ ಮಾಡಬೇಕಾದ ವ್ಯವಸ್ಥೆಯನ್ನು ಆ್ಯಪ್ ನಲ್ಲಿ ರೂಪಿಸಲಾಗಿದೆ.
- ದಕ್ಷತೆ ಆಧರಿಸಿ ವೇತನ: ಪ್ರತಿಯೊಬ್ಬರ ನಿತ್ಯದ ದಿನಚರಿ ಆ್ಯಪ್‌ನಲ್ಲಿ ದಾಖಲಾಗಿರುತ್ತದೆ. ಉಸ್ತುವಾರಿಗೆ ನಿಯೋಜಿತವಾದ ಗುತ್ತಿಗೆ ಆಧಾರದ ನೇಮಕವಾಗಿರುವ ಅಧಿಕಾರಿ, ಸಿಬ್ಬಂದಿ ಮಾಸಿಕ ಡೈರಿ ಆಧರಿಸಿ, ಕಾರ್ಯಕ್ಷಮತೆ ಆಧರಿಸಿ ವೇತನ ಪಾವತಿ ಮಾಡುವ ವ್ಯವಸ್ಥೆ ಯನ್ನು ಬಳ್ಳಾರಿ ಜಿಲ್ಲಾ ಪಂಚಾಯಿತಿ ಅಳವಡಿಸಿ ಕೊಂಡಿದೆ. ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ಮನರೇಗಾ ಮೇಲುಸ್ತುವಾರಿ ಸಮಿತಿಯು ಕ್ರಿಯಾಶೀಲವಾಗಿ ಕೆಲಸ ಮಾಡಲಾರಂಭಿಸಿದೆ.


## ❖ 'ದೇವದಾಸಿ ಮಕ್ಕಳಿಗೆ ಪಿತೃತ್ವ ಹಕ್ಕು'

- ರಾಜ್ಯದಲ್ಲಿ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡುವ, ದೇವದಾಸಿಗೆ ಜನಿಸಿದ ಮಗು ತನ್ನ ತಂದೆಯನ್ನು ಗುರುತಿಸಲು (ಪಿತೃತ್ವ) ಹಕ್ಕು ಮತ್ತು ಸಮಗ್ರ ಪುನರ್ವಸತಿ ಕಲ್ಪಿಸಲು ಅವಕಾಶ ನೀಡುವ 'ಕರ್ನಾಟಕ ದೇವದಾಸಿ ಪದ್ಧತಿ (ತಡೆಗಟ್ಟುವಿಕೆ, ನಿಷೇಧ, ಪರಿಹಾರ ಮತ್ತು ಪುನರ್ವಸತಿ) ಮಸೂದೆ- 2025' ಅನ್ನು ರಾಜ್ಯ ಸರ್ಕಾರ ಸಿದ್ಧಪಡಿಸಿದೆ.
- ಆ ಮೂಲಕ, ದೇವದಾಸಿ ಮಹಿಳೆಯರನ್ನು ಎಲ್ಲ ರೀತಿಯ ಶೋಷಣೆಗಳಿಂದ ಹಾಗೂ ಅವರ ಮಕ್ಕಳನ್ನು ಸಾಮಾಜಿಕ ನಿಷೇಧದಿಂದ ಮುಕ್ತಗೊಳಿಸುವ ದಿಸೆಯಲ್ಲಿ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ.
- ರಾಷ್ಟ್ರೀಯ ಕಾನೂನು ಶಾಲೆಯ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ ಸಿದ್ಧಪಡಿಸಿರುವ ಕರಡು ಮಸೂದೆಗೆ ಸಂಬಂಧಿಸಿದಂತೆ 20 ಇಲಾಖೆಗಳ ಜೊತೆ ಸಮಾಲೋಚನೆ ನಡೆಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಈ ಮಸೂದೆಗೆ ಅಂತಿಮ ರೂಪ ನೀಡಿದೆ. ಕಾನೂನು ಮತ್ತು ಸಂಸದೀಯ ಇಲಾಖೆಯು ಈ ಮಸೂದೆಯನ್ನು ಪರಿಶೀಲನೆ ನಡೆಸಿದ್ದು, ಶೀಘ್ರದಲ್ಲೇ ಸಚಿವ ಸಂಪುಟ ಸಭೆಯಲ್ಲಿ ಮಂಡನೆಯಾಗಲಿದೆ.
- ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಸೂದೆಯನ್ನು ಮಂಡಿಸಲು ಚಿಂತನೆ ನಡೆದಿದೆ, **ಹೊಸ ಮಸೂದೆಯ ಕಾರಣಕ್ಕೆ 'ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಕಾಯ್ದೆ- 1982' ಮತ್ತು 'ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ಕಾಯ್ದೆ, 2009' ರದ್ದುಗೊಳ್ಳಲಿವೆ.**

### ಶಿಕ್ಷೆ ಮತ್ತು ದಂಡ

ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ಬಳಿಕ ದೇವದಾಸಿಯಾಗಿ ಮಹಿಳೆಯನ್ನು ಅರ್ಪಿಸುವ ಯಾವುದೇ ಸಮಾರಂಭ ಅಥವಾ ಕಾರ್ಯವನ್ನು ತನ್ನ ನಿಯಂತ್ರಣದಲ್ಲಿರುವ ಆವರಣದಲ್ಲಿ ನಿರ್ವಹಿಸಲು, ಅನುಮತಿಸಲು, ಭಾಗವಹಿಸಲು ಅಥವಾ ಪ್ರಚೋದಿಸಲು ಯಾರು ಅನುಮತಿ ನೀಡುತ್ತಾರೊ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಸಮಾರಂಭ ಅಥವಾ ಕೃತ್ಯವನ್ನು ಎಸಗುತ್ತಾರೊ ಅದನ್ನು ಅಪರಾಧವೆಂದು ಪರಿಗಣಿಸಿ ಎರಡು ವರ್ಷದಿಂದ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ₹1 ಲಕ್ಷಕ್ಕೆ ಕಡಿಮೆ ಇಲ್ಲದಂತೆ ದಂಡ ವಿಧಿಸಲು ಅವಕಾಶ ಆಗಲಿದೆ.

ದೇವದಾಸಿ ಪದ್ಧತಿಗೆ ಉತ್ತೇಜನ ಅಥವಾ ಪ್ರಚಾರ ಮಾಡಿದರೆ ಒಂದು ವರ್ಷದಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ /₹50 ಸಾವಿರಕ್ಕೆ ಕಡಿಮೆ ಇಲ್ಲದಂತೆ ದಂಡ ಅಥವಾ ಎರಡನ್ನೂ ವಿಧಿಸಲಾಗುವುದು. ಶಿಕ್ಷೆಗೆ ಒಳಗಾಗಿರುವವರು ಅಪರಾಧ ಪುನರಾವರ್ತಿಸಿದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ₹2 ಲಕ್ಷವರೆಗೆ ವಿಸ್ತರಿಸಬಹುದಾದ ದಂಡ ಶಿಕ್ಷೆಗೆ ಗುರಿಯಾಗಲಿದ್ದಾರೆ.




- **ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ವಿಜಯಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ಶಿವಮೊಗ್ಗ, ಯಾದಗಿರಿ, ವಿಜಯನಗರ ಈ ಜಿಲ್ಲೆಗಳಲ್ಲಿ ದೇವದಾಸಿಯರಿದ್ದಾರೆ.**
- ಮಸೂದೆಯಲ್ಲಿ ಏನಿದೆ?: ನಾಗರಿಕ ಸಮಾಜದಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ, ದಮನಿತ ದೇವದಾಸಿ ಮಹಿಳೆಯರನ್ನು ಎಲ್ಲ ರೀತಿಯ ಶೋಷಣೆಗಳಿಂದ, ಅವರ ಮಕ್ಕಳನ್ನು ಸಾಮಾಜಿಕ ನಿಷೇಧದಿಂದ ಮುಕ್ತಗೊಳಿಸಿ ಸಬಲೀಕರಣಗೊಳಿಸುವುದು ಮಸೂದೆಯ ಉದ್ದೇಶ. ಅಲ್ಲದೆ ಅಂತಹ ಮಕ್ಕಳ ಜೈವಿಕ ತಂದೆಯನ್ನು ವಿಶೇಷ ಕಾನೂನಿನಡಿ ಹೊಣೆಗಾರರನ್ನಾಗಿ ಮಾಡಲು ಸಾಕ್ಷ್ಯಗಳನ್ನು ಒದಗಿಸುವ ಪ್ರಸ್ತಾವ ಈ ಮಸೂದೆಯಲ್ಲಿದೆ. ದೇವದಾಸಿ ಕುಟುಂಬಕ್ಕೆ ಸಮಗ್ರ ಪುನರ್ವಸತಿ ಮತ್ತು ದೇವದಾಸಿ ಪದ್ಧತಿಯ ಸಂಪೂರ್ಣ ನಿರ್ಮೂಲನೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ವಿವರಿಸಲಾಗಿದೆ.
- ‘ದೇವದಾಸಿ ಕುಟುಂಬ’ ವು ದೇವದಾಸಿ ಮತ್ತು ದೇವದಾಸಿಯ ಎರಡನೇ ತಲೆಮಾರಿನವರೆಗಿನ ವಂಶಾವಳಿಯನ್ನು ಒಳಗೊಂಡಿದೆ ಮತ್ತು ಅವರಿಗೆ ಸೀಮಿತವಾಗಿ ಇರಲಿದೆ. ಅಂದರೆ, ದೇವದಾಸಿ ಮಕ್ಕಳು ಮತ್ತು ಆಕೆಯ ಮೊಮ್ಮಕ್ಕಳು. ಪ್ರತಿಯೊಬ್ಬ ದೇವದಾಸಿ ಮತ್ತು ಅವಳ ಮಗುವು ಎಲ್ಲ ರೀತಿಯಿಂದ ಮತ್ತು ನ್ಯಾಯಾಂಗ ಪ್ರಕ್ರಿಯೆಯ ಉದ್ದಕ್ಕೂ ಗೋಪ್ಯತೆ ಮತ್ತು ಗೋಪ್ಯತೆಯ ರಕ್ಷಣೆಯ ಹಕ್ಕು ಹೊಂದಿರುತ್ತಾರೆ ಎಂದೂ ಮಸೂದೆಯಲ್ಲಿದೆ.
- **ದೇವದಾಸಿಗೆ ಜನಿಸುವ ಮಗುವನ್ನು ಹಿಂದೂ ಧರ್ಮದ ವೈಯಕ್ತಿಕ ಕಾನೂನಿನ ಪ್ರಕಾರ ಕಾನೂನುಬದ್ಧ ಮಗು ಎಂದು ಪರಿಗಣಿಸಲಾಗುತ್ತದೆ. ಇಬ್ಬರೂ ಪೋಷಕರ ಆಸ್ತಿಯ ಉತ್ತರಾಧಿಕಾರಿ ಮತ್ತು ಉತ್ತರಾಧಿಕಾರ ಹೊಂದುವ ಅರ್ಹತೆ ಮಗುವಿಗೆ ಇರಲಿದೆ.**
- ದೇವದಾಸಿ ಮಗುವಿಗೆ ತನ್ನ ತಂದೆ ತಿಳಿದಿಲ್ಲ ಎಂಬ ಕಾರಣಕ್ಕೆ ತಾರತಮ್ಯ ಮಾಡಲು ಅವಕಾಶ ಇಲ್ಲ. ದೇವದಾಸಿಯ ಮಕ್ಕಳು ಶಿಕ್ಷಣ, ಆರೋಗ್ಯ ಮತ್ತು ಪರವಾನಗಿಗಳು, ಪಾಸ್‌ಪೋರ್ಟ್, ಪಾನ್ ಕಾರ್ಡ್, ಪಡಿತರ ಚೀಟಿ ಮತ್ತಿತರ ದಾಖಲೆಗಳಿಗೆ ಅರ್ಜಿ ಸಲ್ಲಿಸುವಾಗ ತನ್ನ ತಂದೆಯ ಹೆಸರು ಘೋಷಿಸುವುದು ಕಡ್ಡಾಯವಾಗಿದೆ. ಯಾವುದೇ ಅರ್ಜಿಯನ್ನು ಸಲ್ಲಿಸುವಾಗ ತಂದೆಯ ಹೆಸರಿನ ಭಾಗವು ಕಡ್ಡಾಯವಲ್ಲ ಎಂದು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರ ಆಡಳಿತಾತ್ಮಕ ಕ್ರಮ ತೆಗೆದುಕೊಳ್ಳಬೇಕು. ಪ್ರತಿಯೊಬ್ಬ ದೇವದಾಸಿ ಮಹಿಳೆಯು ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮದ ಹಕ್ಕು ಹೊಂದಲಿದ್ದು ಅದನ್ನು ಸರ್ಕಾರ ಒದಗಿಸಬೇಕು ಎಂದೂ ಮಸೂದೆಯಲ್ಲಿದೆ.
- ನಿಷೇಧ ಹೇಗೆ?: ದೇವದಾಸಿಯಾಗಿ ಮಹಿಳೆಯನ್ನು ಸಮರ್ಪಿಸುವುದು, ಆಕೆಯೇ ಸಮರ್ಪಿಸಿಕೊಳ್ಳುವುದನ್ನು ಈ ಮಸೂದೆಯು ಕಾನೂನುಬಾಹಿರವೆಂದು ಘೋಷಿಸಲಿದೆ. ಈ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡರೆ, ದೇವದಾಸಿ ನಿಷೇಧ ಮತ್ತು ಪುನರ್ವಸತಿ ಅಧಿಕಾರಿ ಅಥವಾ ತಾಲ್ಲೂಕು ಅಥವಾ ರಾಜ್ಯ ಸಮಿತಿಯು ಅಂತಹ ಸಮರ್ಪಣೆಯನ್ನು ನಿಷೇಧಿಸಿ ತಡೆಯಾಜ್ಞೆ ಹೊರಡಿಸಬಹುದು.
- ಈ ಕುರಿತು ಅರ್ಜಿ ಅಥವಾ ದೂರನ್ನು ವೈಯಕ್ತಿಕವಾಗಿ ಅಥವಾ ನಂಬಲರ್ಹ ವ್ಯಕ್ತಿ ಸಲ್ಲಿಸಬಹುದು. ಅಂತಹ ಸಮರ್ಪಣೆ ನಡೆಯುವ ಸಾಧ್ಯತೆಯ ಬಗ್ಗೆ ಸೂಕ್ತ ಮಾಹಿತಿ ಇರುವ ಸರ್ಕಾರೇತರ ಸಂಸ್ಥೆಯೂ ದೂರು ನೀಡಬಹುದು. ಸಮಿತಿಯು ಸ್ವಯಂಪ್ರೇರಿತವಾಗಿಯೂ ತನಿಖೆ ನಡೆಸಬಹುದು.
- ಜಾತ್ರೆಗಳ ಸಮಯದಲ್ಲಿ ಹುಣ್ಣಿಮೆಯಂಥ ಕೆಲವು ದಿನಗಳಲ್ಲಿ ದೇವದಾಸಿಯರಾಗಿ ಸಾಮೂಹಿಕ ಸಮರ್ಪಣೆಯನ್ನು ತಡೆಗಟ್ಟಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ ಯನ್ನು ದೇವದಾಸಿ ನಿಷೇಧ ಮತ್ತು ಪುನರ್ವಸತಿ ಅಧಿಕಾರಿ ಎಂದು ಪರಿಗಣಿಸಲಾಗುವುದು. ಯಾವುದೇ ಸಮರ್ಪಣೆಯನ್ನು ದೇವಾಲಯದ ಆವರಣದಲ್ಲಿ ನಡೆಸಲಾಗಿದೆ ಎಂದು ಕಂಡುಬಂದರೆ, ತಾಲ್ಲೂಕು ಸಮಿತಿಯು ಸಂಬಂಧಪಟ್ಟ ದೇವಾಲಯ ಸಮಿತಿಗೆ ನೋಟಿಸ್ ನೀಡಲಿದೆ ಎಂದೂ ಮಸೂದೆಯಲ್ಲಿ ತಿಳಿಸಲಾಗಿದೆ.

ಪಿತೃತ್ವ ಹಕ್ಕು, ಜೀವನಾಂಶ, ಪುನರ್ವಸತಿ

- **ದೇವದಾಸಿಗೆ ಜನಿಸಿದ ಯಾವುದೇ ಮಗುವು ತಂದೆಯ ಗುರುತು ಖಚಿತಪಡಿಸಿಕೊಳ್ಳುವ ಹಕ್ಕನ್ನು ಈ ಮಸೂದೆ ಕಲ್ಪಿಸಿದೆ. ಅಂತಹ ಮಗುವು ತಂದೆಯ ಬಂಧದ ಮಾನ್ಯತೆಗಾಗಿ ತಾಲ್ಲೂಕು ಸಮಿತಿಗೆ ಅರ್ಜಿ ಸಲ್ಲಿಸಬಹುದು.**
- ಜೈವಿಕ ತಂದೆ ಒಪ್ಪಿಕೊಂಡರೆ ಆ ಬಗ್ಗೆ ಲಿಖಿತವಾಗಿ ಜಿಲ್ಲಾ ಸಮಿತಿಯ ಮುಂದೆ ಅರ್ಜಿ ಸಲ್ಲಿಸಬಹುದು. ಅಲ್ಲಿ ತಂದೆ ಮತ್ತೊಮ್ಮೆ ಬಹಿರಂಗವಾಗಿ ಮತ್ತು ಲಿಖಿತವಾಗಿ ಅಂತಹ ಸಂಬಂಧವನ್ನು ಒಪ್ಪಿಕೊಳ್ಳಬೇಕು. ತಂದೆಯು ಒಪ್ಪಿಕೊಳ್ಳಲು ನಿರಾಕರಿಸಿದರೆ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು. ಮಗುವು ತನ್ನ ಜೈವಿಕ ತಂದೆ ಎಂದು ಭಾವಿಸುವ ವ್ಯಕ್ತಿಯ ಪಿತೃತ್ವವನ್ನು ಖಚಿತಪಡಿಸಿಕೊಳ್ಳಲು ನ್ಯಾಯಾಲಯವು **ಡಿಎನ್ಎ ಪರೀಕ್ಷೆ** ನಡೆಸಬಹುದು. ಅಂತಹ ಮಗುವಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಉಚಿತ ಕಾನೂನು ನೆರವು ಒದಗಿಸಬೇಕು.
- ದೇವದಾಸಿಯ ಮಗು ಕಾನೂನಿನ ಅಡಿಯಲ್ಲಿ ಜೀವನಾಂಶ ಪಡೆಯಲು ಹಕ್ಕು ಹೊಂದಿರುತ್ತದೆ. ಅಂತಹ ಅರ್ಜಿಗಳನ್ನು ನ್ಯಾಯಾಲಯದ ಮುಂದೆ ಪ್ರಸ್ತುತಪಡಿಸುವ ಸಾಕ್ಷ್ಯಗಳು ಮತ್ತು ಸಂದರ್ಭಗಳ ಆಧಾರದಲ್ಲಿ ಕಾನೂನು ಪ್ರಕಾರ ಪರಿಗಣಿಸಲಾ ಗುತ್ತದೆ. ಗಂಡು ಮಗುವು ಪ್ರೌಢಾವಸ್ಥೆವರೆಗೆ ಮತ್ತು ಹೆಣ್ಣು ಮಗುವು ಪ್ರೌಢಾವಸ್ಥೆವರೆಗೆ ಅಥವಾ ವಿವಾಹವಾಗುವವರೆಗೆ ಜೀವನಾಂಶದ ಹಕ್ಕು ಪಡೆಯಬಹುದು. ಪುನರ್ವಸತಿ ಪ್ರಕ್ರಿಯೆಯಡಿ ದೇವದಾಸಿ ಕುಟುಂಬಕ್ಕೆ ಎಲ್ಲ ಅಗತ್ಯ ಮೂಲಸೌಲಭ್ಯಗಳಿರುವ ವಸತಿ ವ್ಯವಸ್ಥೆ ಕಲ್ಪಿಸಬೇಕು ಎಂದು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

## ❖ ಹೆಚ್ಚಿದ ಜಲವಿದ್ಯುತ್ ಉತ್ಪಾದನೆ

- ರಾಜ್ಯದಲ್ಲಿ ಜಲ ವಿದ್ಯುತ್ ಉತ್ಪಾದನೆಯ ಪ್ರಮಾಣ ಹೆಚ್ಚಾಗಿದ್ದು, ಜುಲೈ ತಿಂಗಳ ಮೂರನೇ ವಾರದಲ್ಲೇ 1227.28 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಿದೆ. ಕಳೆದ ವರ್ಷ ಇಡೀ ತಿಂಗಳ ವಿದ್ಯುತ್ ಉತ್ಪಾದನೆ 1136.31 ದಶಲಕ್ಷ ಯೂನಿಟ್‌ನಷ್ಟಿತ್ತು.



ಜುಲೈ ತಿಂಗಳ ವಿದ್ಯುತ್ ಉತ್ಪಾದನೆ (ದಶಲಕ್ಷ ಯೂನಿಟ್‌ಗಳಲ್ಲಿ)

| ಸ್ಥಾವರ | 2023 | 2024 | 2025 |
|---|---|---|---|
| ಶರಾವತಿ | 195.26 | 306.60 | 355.24 |
| ನಾಗ್ಝರಿ | 235.82 | 273.35 | 260.36 |
| ವಾರಾಹಿ | 95.90 | 185.11 | 161.84 |
| ಇತರೆ | 229.61 | 371.25 | 449.84 |
| ಒಟ್ಟು | 756.59 | 1136.31 | 1227.28 |

- ಮುಂಗಾರು ಉತ್ತಮವಾಗಿರುವ ಕಾರಣ ಲಿಂಗನಮಕ್ಕಿ, ಸೂಪಾ ಮತ್ತು ಮಾಣಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಪ್ರಸ್ತುತ ಮೂರು ಜಲಾಶಯಗಳಲ್ಲಿ ಒಟ್ಟು 5,963.27 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸುವಷ್ಟು ನೀರು ಸಂಗ್ರಹವಾಗಿದೆ. ಸುಮಾರು ಆರು ತಿಂಗಳಿಗಾಗುವಷ್ಟು ವಿದ್ಯುತ್ ಉತ್ಪಾದಿಸಬಹುದು ಎಂದು ಇಂಧನ ಇಲಾಖೆ ಮೂಲಗಳು ತಿಳಿಸಿವೆ.
- ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಿಂದ (ಕೆಪಿಸಿಎಲ್) ಲಭ್ಯವಾಗಿರುವ ಮಾಹಿತಿ ಪ್ರಕಾರ, ಲಿಂಗನಮಕ್ಕಿ ಜಲಾಶಯದಲ್ಲಿ ಪ್ರಸ್ತುತ 550.118(1804.85 ಅಡಿ)ಮೀಟರ್‌ನಷ್ಟು ನೀರಿದೆ. ಒಟ್ಟು ಸಾಮರ್ಥ್ಯದಲ್ಲಿ ಶೇ 70.84ರಷ್ಟು ಭರ್ತಿಯಾಗಿದೆ. 3527.42 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಬಹುದು.
- ಸೂಪಾದಲ್ಲಿ 547.45 ಮೀಟರ್ ನಷ್ಟು(ಶೇ 57.27ರಷ್ಟು ಭರ್ತಿ) ನೀರು ಸಂಗ್ರಹವಿದೆ. 1809.35ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಹುದು 'ಮಾಣಿ' ಯಲ್ಲಿ 588.02 ಮೀಟರ್‌ನಷ್ಟು (ಶೇ 64.40ರಷ್ಟು ಭರ್ತಿ)ನೀರು ತುಂಬಿದೆ. 626.5 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಬಹುದು. ಈ ಮೂರು ಜಲಾಶಯಗಳಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಶೇ 10 ರಿಂದ 15ರಷ್ಟು ನೀರಿನ ಸಂಗ್ರಹ ಹೆಚ್ಚಾಗಿದೆ.

- ಕಳೆದ ವರ್ಷ ಈ ಅವಧಿಯಲ್ಲೂ ಉತ್ತಮ ಮಳೆಯಾಗಿತ್ತು, ಒಳ ಹರಿವು ಹೆಚ್ಚಿತ್ತು. ಆದರೆ, ಜಲಾಶಯಗಳಲ್ಲಿ ನೀರು ಕಡಿಮೆ ಇತ್ತು. ಆದರೆ, ಈ ಬಾರಿ ಬೇಸಿಗೆಯಲ್ಲಿ ಮಳೆ ಬೇಗ ಆರಂಭವಾಗಿದ್ದರಿಂದ, ವಿದ್ಯುತ್ ಬೇಡಿಕೆಯೂ ಕಡಿಮೆಯಾಯಿತು. ಜೂನ್-ಜುಲೈ ತಿಂಗಳಲ್ಲಿ ಉತ್ತಮ ಮಳೆಯಾಗಿದ್ದು ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ.

**ವಿದ್ಯುತ್ ಉತ್ಪಾದನೆ ಹೆಚ್ಚಳ**

ರಾಜ್ಯದಲ್ಲಿ ಕಳೆದ ವರ್ಷ ಜುಲೈನಲ್ಲಿ ನಿತ್ಯ ಸರಾಸರಿ 226.25 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿತ್ತು. ಈಗ ಪ್ರತಿನಿತ್ಯ 264.25 ದಶಲಕ್ಷ ಯೂನಿಟ್ ಉತ್ಪಾದನೆಯಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ವಿದ್ಯುತ್ ಉತ್ಪಾದನೆಯು 38 ದಶಲಕ್ಷ ಯೂನಿಟ್‌ನಷ್ಟು ಹೆಚ್ಚಳವಾಗಿದೆ.

- ಹಿಂದಿನ ವರ್ಷ ಜುಲೈನಲ್ಲಿ ಜಲವಿದ್ಯುತ್ ಘಟಕಗಳಿಂದ ಪ್ರತಿನಿತ್ಯ ಸರಾಸರಿ 58.17 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿತ್ತು. ಈಗ ಸರಾಸರಿ 68 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.ಸದ್ಯ ರಾಜ್ಯದ ದೈನಂದಿನ ವಿದ್ಯುತ್ ಬೇಡಿಕೆಯು 264 ದಶಲಕ್ಷ ಯೂನಿಟ್ ಇದ್ದು, ಇಷ್ಟು ವಿದ್ಯುತ್ ಬೇರೆ ಬೇರೆ ಮೂಲಗಳಿಂದ ಲಭ್ಯವಾಗುತ್ತಿದೆ.

## ❖ ತೈಲ ಉತ್ಪಾದನೆ ಹೆಚ್ಚಳಕ್ಕೆ ಒಪೆಕ್+ ನಿರ್ಧಾರ

- ಕಚ್ಚಾ ತೈಲ ಉತ್ಪಾದನೆಯನ್ನು ಪ್ರತಿನಿತ್ಯ 5.47 ಲಕ್ಷ ಬ್ಯಾರೆಲ್‌ನಷ್ಟು ಹೆಚ್ಚಿಸಲು ಒಪೆಕ್+ ಒಕ್ಕೂಟದ ಎಂಟು ರಾಷ್ಟ್ರಗಳು ಸಭೆಯಲ್ಲಿ ನಿರ್ಧರಿಸಿವೆ. ಸೆಪ್ಟೆಂಬರ್‌ನಲ್ಲಿ ಈ ಹೆಚ್ಚಳ ಆಗಲಿದೆ.
- **ಒಪೆಕ್+ ಒಕ್ಕೂಟದ ಸದಸ್ಯ ರಾಷ್ಟ್ರಗಳಾದ ಸೌದಿ ಅರೇಬಿಯಾ, ರಷ್ಯಾ, ಇರಾಕ್, ಯುಎಇ, ಕುವೈತ್, ಕಜಕಸ್ತಾನ್, ಅಲ್ಜೀರಿಯಾ ಮತ್ತು ಒಮಾನ್** ಉತ್ಪಾದನೆ ಹೆಚ್ಚು ಮಾಡಲು ತೀರ್ಮಾನಿಸಿವೆ. ಈ ರಾಷ್ಟ್ರಗಳು ಈಗ ಪ್ರತಿದಿನ 4.1 ಕೋಟಿಯಿಂದ 4.2 ಕೋಟಿ ಬ್ಯಾರೆಲ್‌ನಷ್ಟು ಕಚ್ಚಾತೈಲ ಉತ್ಪಾದನೆ ಮಾಡುತ್ತಿವೆ. ಉತ್ಪಾದನೆಯನ್ನು ಶೇ 1.5ರಷ್ಟು ಹೆಚ್ಚಳ ಮಾಡುವುದಾಗಿ ತಿಳಿಸಿವೆ.
- **ಈ ರಾಷ್ಟ್ರಗಳು ಜಗತ್ತಿನ ಒಟ್ಟು ತೈಲ ಉತ್ಪಾದನೆಯಲ್ಲಿ ಶೇ 50ರಷ್ಟು ಪಾಲು ಹೊಂದಿವೆ.** ಮಾರುಕಟ್ಟೆಯಲ್ಲಿ ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳುವ ಗುರಿಯೊಂದಿಗೆ ಉತ್ಪಾದನೆ ಹೆಚ್ಚಿಸುವ ತೀರ್ಮಾನ ತೆಗೆದುಕೊಂಡಿವೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.
- ಬ್ರೆಂಟ್ ಕಚ್ಚಾ ತೈಲದ ಬೆಲೆಯು ಈಗ ಬ್ಯಾರೆಲ್‌ಗೆ 70 ಡಾಲರ್‌ನಷ್ಟು ಇದೆ. ಉತ್ಪಾದನೆ ಹೆಚ್ಚಳವು ದರದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಕಡಿಮೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

## ಸರ್ಕಾರದ ನೆರವು ಕೇಳಿದ ರಫ್ತುದಾರರು

- ಭಾರತದ ಸರಕುಗಳ ಮೇಲೆ ಅಮೆರಿಕ ಹೇರಿರುವ ಶೇಕಡ 25ರಷ್ಟು ಸುಂಕದ ಹೊರೆಯನ್ನು ನಿಭಾಯಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಬೇಕು, ಹಣಕಾಸಿನ ನೆರವು ಒದಗಿಸಬೇಕು ಎಂದು ಆಹಾರ ಉತ್ಪನ್ನಗಳು, ಸಮುದ್ರ ಉತ್ಪನ್ನಗಳು, ಜವಳಿ ಉತ್ಪನ್ನಗಳ ರಫ್ತು ವಹಿವಾಟಿನಲ್ಲಿ ತೊಡಗಿರುವವರು ಕೇಂದ್ರ ಸರ್ಕಾರವನ್ನು ಕೋರಿದ್ದಾರೆ.
- ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಮಾದರಿಯಲ್ಲಿ ತಮಗೂ ನೆರವು ಕೊಡಿಸಬೇಕು ಎಂದು ಮನವಿ ಮಾಡಿದ್ದಾರೆ.
- **ಭಾರತದಲ್ಲಿ ಸಾಲದ ಮೇಲಿನ ಬಡ್ಡಿ ದರವು ಶೇ 8ರಿಂದ ಶೇ 12ರವರೆಗೆ ಇದೆ**. ಕೆಲವು ಸಂದರ್ಭಗಳಲ್ಲಿ ಇದು ಇನ್ನೂ ಹೆಚ್ಚಿರು ವುದೂ ಇದೆ. ಆದರೆ ಭಾರತಕ್ಕೆ ಅಮೆರಿಕದ ಮಾರುಕಟ್ಟೆಯಲ್ಲಿ ಸ್ಪರ್ಧೆ ಒಡ್ಡುತ್ತಿರುವ **ಚೀನಾ, ಮಲೇಷ್ಯಾ, ಥಾಯ್ಲೆಂಡ್, ವಿಯೆಟ್ನಾಂ ದೇಶಗಳಲ್ಲಿ** ಬಡ್ಡಿ ದರವು ಕಡಿಮೆ ಇದೆ ಎಂದು ರಫ್ತುದಾರರು ಹೇಳಿದ್ದಾರೆ.

## ❖ ಲಾಂಗ್‌ಜಂಪ್: ಶ್ರೀಶಂಕರ್‌ಗೆ ಪ್ರಶಸ್ತಿ

- ಭಾರತದ ಅಗ್ರಮಾನ್ಯ ಲಾಂಗ್‌ಜಂಪ್ ಸ್ಪರ್ಧಿ ಮುರಳಿ ಶ್ರೀಶಂಕರ್ ಅವರು ಕಜಕಸ್ತಾನದ ಅಲ್ಮಾಟಿಯಲ್ಲಿ ನಡೆದ ಕೊಸನೊವ್ ಸ್ಮರಣಾರ್ಥ ಅಥ್ಲೆಟಿಕ್ಸ್ ಕೂಟದಲ್ಲಿ ಪ್ರಶಸ್ತಿ ಗೆದ್ದುಕೊಂಡರು.
- ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ ಕಂಚಿನ ಪದಕ ಮಟ್ಟದ ಕೂಟ ಇದಾಗಿದೆ. ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಶ್ರೀಶಂಕರ್ ಅವರು ಶನಿವಾರ ನಡೆದ ಪುರುಷರ ವಿಭಾಗದ ಲಾಂಗ್ ಜಂಪ್‌ನಲ್ಲಿ 7.94 ಮೀಟರ್ಸ್ ದೂರ ಜಿಗಿದು ಪ್ರಶಸ್ತಿ ಗಳಿಸಿದರು.

## ❖ ಪ್ರಾಬಲ್ಯ ಮೆರೆದ ಮೆಕಿಂಟೋಷ್, ಮರ್ಷಾನ್



ಪ್ರಶಸ್ತಿಯೊಂದಿಗೆ ಕೆನಡಾದ ಈಜು ತಾರೆ ಸಮ್ಮರ್ ಮೆಕಿಂಟೋಷ್ (ಎಡ) ಹಾಗೂ ಫ್ರಾನ್ಸ್ ಲಿಯಾನ್ ಮರ್ಷಾನ್ ಎಎಫ್‌ಪಿ ಚಿತ್ರ

- ಸೂಪರ್‌ಸ್ಟಾರ್ ಗಳಾದ ಲಿಯಾನ್ ಮರ್ಷಾನ್ ಮತ್ತು ಸಮ್ಮರ್ ಮೆಕಿಂಟೋಷ್ ಅವರು ವಿಶ್ವ ಈಜು ಚಾಂಪಿಯನ್ ಷಿಪ್‌ನ ಕೊನೆಯ ದಿನವಾದ ಭಾನುವಾರ ತಮ್ಮ ಸ್ಪರ್ಧೆಗಳನ್ನು ಅಧಿಕಾರಯುತವಾಗಿ ಗೆದ್ದುಕೊಂಡರು. ಅಮೆರಿಕ ತಂಡವು ರಿಲೆಯಲ್ಲಿ ವಿಶ್ವದಾಖಲೆ ಸ್ಥಾಪಿಸಿತು.
- ಮಹಿಳೆಯರ 400 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯನ್ನು 18 ವರ್ಷ ವಯಸ್ಸಿನ ಸಮ್ಮರ್ 4 ನಿ.25.7 ಸೆ.ಗಳಲ್ಲಿ ಪೂರೈಸಿದರು. ಇದು ಚಾಂಪಿಯನ್ ಷಿಪ್‌ನ ದಾಖಲೆಯಾಯಿತು. ಕೆನಡಾದ ತಾರೆ ಎಂಟು ದಿನಗಳ ಈ ಕೂಟದಲ್ಲಿ ಗೆದ್ದ ನಾಲ್ಕನೇ ಸ್ವರ್ಣ ಇದು.
- ಆಸ್ಟ್ರೇಲಿಯಾದ ಜೆನ್ನಾ ಫಾರಿಸ್ಟರ್ ಮತ್ತು ಜಪಾನ್‌ನ ಮಿಯೊ ನರಿಟಾ (4ನಿ 33.26 ಸೆ.) ಅವರು ಏಕಕಾಲದಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಹಂಚಿಕೊಂಡರು. ಚೀನಾದ 12 ವರ್ಷ ವಯಸ್ಸಿನ ಪ್ರತಿಭಾನ್ವಿತೆ ಯು ಝಿದಿ (4ನಿ.33.76 ಸೆ.) ಕೂದಲೆಳೆಯಿಂದ ಪದಕ ಕಳೆದುಕೊಂಡರು.
- ಇದಕ್ಕೆ ಮೊದಲು 200 ಮೀ. ಮೆಡ್ಲೆ, 200 ಮೀ. ಬಟರ್‌ಫ್ಲೈ ಮತ್ತು 400 ಮೀ. ಫ್ರೀಸ್ಟೈಲ್ ಸ್ಪರ್ಧೆಗಳಲ್ಲಿ ಮೊದಲಿಗರಾಗಿದ್ದ ಮೆಕಿಂಟೋಷ್, ಈ ಕೂಟದ ತಮ್ಮ ಕೊನೆಯ ಸ್ಪರ್ಧೆಯಲ್ಲೂ ಯಾವ ಹಂತದಲ್ಲೂ ಹಿನ್ನಡೆ ಕಾಣಲಿಲ್ಲ.
- ಮಿಂಚಿದ ಮರ್ಷಾನ್: 200 ಮೀ. ಮೆಡ್ಲೆಯಲ್ಲಿ ಕಳೆದ ವಾರ ಚಿನ್ನ ಗೆದ್ದಿದ್ದ ಫ್ರಾನ್ಸ್‌ನ ಮರ್ಷಾನ್, 400 ಮೀ. ವೈಯಕ್ತಿಕ ಮೆಡ್ಲೆಯಲ್ಲೂ ಮೊದಲಿಗರಾದರು. 23 ವರ್ಷ ವಯಸ್ಸಿನ ಮರ್ಷಾನ್ 4ನಿ.04.73 ಸೆ.ಗಳಲ್ಲಿ ಈಜಿ, ಜಪಾನ್‌ನ ಟೊಮೊಯುಕಿ ಮಾತ್ಸುಶಿಟಾ (4ನಿ.08.32 ಸೆ.) ಅವರಿಗಿಂತ ಮೂರು ಸೆಕೆಂಡು ಮೊದಲೇ ಗುರಿ ತಲುಪಿದರು. ರಷ್ಯಾದ ಇಲ್ಯಾ ಬೊರೊಡಿನ್ (4ನಿ.09.16 ಸೆ.) ಕಂಚು ಗೆದ್ದರು.
- ಈ ಕೂಟದ ಆರಂಭದಲ್ಲಿ ಅಮೆರಿಕ ತಂಡದ ಸ್ಪರ್ಧಿಗಳು ಹೊಟ್ಟೆಕೆಟ್ಟು ಸಮಸ್ಯೆ ಎದುರಿಸಿದ್ದರು. ದಿಗ್ಗಜರಾದ ಮೈಕೆಲ್ ಫೆಲ್ಪ್ಸ್ ಮತ್ತು ಲಾಕ್ಟಿ ಅವರಿಂದ ಟೀಕೆಗೂ ಒಳಗಾಗಿದ್ದರು. ಆದರೆ 4x100 ಮೀ. ಮೆಡ್ಲೆ ರಿಲೆಯಲ್ಲಿ ಮಹಿಳೆಯರ ತಂಡ ತಮ್ಮದೇ ವಿಶ್ವ ದಾಖಲೆ ಸುಧಾರಿಸುವ ಮೂಲಕ ಟೀಕಾಕಾರರ ಬಾಯಿ ಮುಚ್ಚಿಸಿತು.
- ಅಮೆರಿಕ ತಂಡವು 3ನಿ.49.34 ಸೆ.ಗಳಲ್ಲಿ ಗುರಿತಲುಪಿ, ವರ್ಷದ ಹಿಂದೆ ಪ್ಯಾರಿಸ್‌ನಲ್ಲಿ ಸ್ಥಾಪಿಸಿದ್ದ ತಮ್ಮದೇ ವಿಶ್ವದಾಖಲೆ (3ನಿ.49.63ಸೆ.) ಮುರಿಯಿತು.
- ಅಮೆರಿಕಕ್ಕೆ 9 ಚಿನ್ನ: ಕಾಡಿದ ಆರೋಗ್ಯ ಸಮಸ್ಯೆಗಳ ನಡುವೆಯೂ ಅಮೆರಿಕ ತಂಡ ಈಜುಪಟುಗಳು ಒಟ್ಟು 9 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು. ಆಸ್ಟ್ರೇಲಿಯಾ ಎಂಟು ಚಿನ್ನ, ಫ್ರಾನ್ಸ್ ಮತ್ತು ಕೆನಡಾ ತಲಾ ನಾಲ್ಕು ಚಿನ್ನ ಗಳಿಸಿದವು. ಕೆನಡಾಕ್ಕೆ ಎಲ್ಲ ಚಿನ್ನಗಳನ್ನು ಮೆಕಿಂಟೋಷ್ ಗೆದ್ದುಕೊಟ್ಟಿದ್ದು ವಿಶೇಷ.
- ಶಾನ್‌ಗೆ 28ನೇ ಸ್ಥಾನ: ಕೂಟದಲ್ಲಿ ಭಾರತದ ಅಭಿಯಾನ ನಿರಾಶೆಯೊಂದಿಗೆ ಅಂತ್ಯಗೊಂಡಿತು. ಪುರುಷರ 400 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ ಶಾನ್ ಗಂಗೂಲಿ 28ನೇ ಸ್ಥಾನ ಪಡೆದರು.
- 20 ವರ್ಷ ವಯಸ್ಸಿನ ಗಂಗೂಲಿ ಟ್ರಯಲ್ಸ್‌ನಲ್ಲಿ 4ನಿ.30.40 ಸೆ.ಗಳಲ್ಲಿ ದೂರ ಕ್ರಮಿಸಿದರು. ಆದರೆ ಎಂಟು ಮಂದಿಯ ಅಂತಿಮ ಸುತ್ತಿಗೆ ಅರ್ಹತೆ ಪಡೆಯವಲು ವಿಫಲರಾದರು.

## ❖ ಎಡಗೈಗೆ ಶೇ 6, ಬಲಗೈಗೆ ಶೇ 5

- ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ 101 ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿ, ಲಭ್ಯ ಶೇಕಡಾ 17 ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಮಾನದಂಡಗಳ ಅನ್ವಯ ಹಂಚಿಕೆ ಮಾಡಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗ, ಆರು ಶಿಫಾರಸು ಗಳನ್ನೂ ಮಾಡಿದೆ.
- ಪರಿಶಿಷ್ಟ ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿರುವ ಆಯೋಗವು, **ಗುಂಪು 1ರಲ್ಲಿ ಅತೀ ಹಿಂದುಳಿದ ಜಾತಿಗಳನ್ನು ಪಟ್ಟಿ ಮಾಡಿದೆ. ಈ ಗುಂಪಿನಲ್ಲಿರುವ ಜಾತಿಗಳ ಒಟ್ಟು ಜನಸಂಖ್ಯೆ ಸುಮಾರು 5 ಲಕ್ಷ. ಈ ಗುಂಪಿಗೆ ಶೇ 1ರಷ್ಟು ಮೀಸಲಾತಿ ಹಂಚಿಕೆ ಮಾಡಿದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ತೀರಾ ವಂಚಿತ ಜಾತಿಗಳಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ಜಾತಿಗಳನ್ನು ಗುಂಪು 1ರಲ್ಲಿ ಸೇರಿಸಲಾಗಿದೆ.**
- **'ಜಾತಿಗಳಲ್ಲಿರುವ 'ಸಾಮ್ಯತೆ' ಗಳನ್ನು ಗುರುತಿಸಿ ಗುಂಪುಗಳನ್ನು ಆಯೋಗವು ಮರು ವರ್ಗೀಕರಿಸಿದೆ. ಗುಂಪು- 2ರಲ್ಲಿ ಎಡಗೈ ಜಾತಿಗಳಿದ್ದು ಅದಕ್ಕೆ ಶೇ 6, ಗುಂಪು 3ರಲ್ಲಿ ಬಲಗೈ ಜಾತಿಗಳಿದ್ದು ಅದಕ್ಕೆ ಶೇ 5, ಗುಂಪು 4ರಲ್ಲಿ ಬಂಜಾರ, ಬೋವಿ, ಕೊರಚ, ಕೊರಮ ಜಾತಿಗಳಿದ್ದು (ಅಸ್ಪೃಶ್ಯರಲ್ಲದವರು) ಈ ಗುಂಪಿಗೆ ಶೇಕಡಾ 4, ಗುಂಪು 5ರಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ನಮೂದಿಸಿದವರಿದ್ದು ಈ ಗುಂಪಿಗೆ ಶೇಕಡಾ 1ರಷ್ಟು ಮೀಸಲಾತಿಯನ್ನು ಆಯೋಗವು ಹಂಚಿಕೆ ಮಾಡಿದೆ**.
- ಸಮೀಕ್ಷೆಯಲ್ಲಿ **ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ** ಎಂದು ಗುರುತಿಸಿಕೊಂಡವರು ಸುಮಾರು 5 ಲಕ್ಷದಷ್ಟು ಇದ್ದಾರೆ. ಅವರು ಮೂಲ ಜಾತಿಯನ್ನು ಗುರುತಿಸದ ಕಾರಣ 'ಪ್ರತ್ಯೇಕ ಗುಂಪು' ಮಾಡಲಾಗಿದೆ ಎಂದೂ ಗೊತ್ತಾಗಿದೆ.
- ಒಳ ಮೀಸಲಾತಿ ವರ್ಗೀಕರಣಕ್ಕೆ ಜಾತಿಗಳ ಶೈಕ್ಷಣಿಕ ಹಿಂದುಳಿದಿರುವಿಕೆ, ಸರ್ಕಾರಿ ಉದ್ಯೋಗದಲ್ಲಿ ಅಗತ್ಯ ಪ್ರಾತಿನಿಧ್ಯದ ಕೊರತೆ, ಸಾಮಾಜಿಕ ಹಿಂದುಳಿದಿರುವಿಕೆಯ ಮಾನದಂಡಗಳನ್ನು ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆ ಮಾನದಂಡಗಳ ಆಧಾರದಲ್ಲಿಯೇ ಮೀಸಲಾತಿಯನ್ನು ಹಂಚಿಕೆ ಮಾಡಲಾಗಿದೆ ಎಂದು ಮೂಲಗಳು ವಿವರಿಸಿವೆ.
- **ಹಿಂದಿನ ವರದಿ-ಅನುಷ್ಠಾನ**: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ನೀಡಲು 2005ರಲ್ಲಿ ಸರ್ಕಾರ ರಚಿಸಿದ್ದ ನ್ಯಾಯಮೂರ್ತಿ ಎ.ಜೆ. ಸದಾಶಿವ ನೇತೃತ್ವದ ಆಯೋಗವು, ಆಗ ಪರಿಶಿಷ್ಟ ಜಾತಿಗಳಿಗೆ ಇದ್ದ ಶೇ 15ರ ಮೀಸಲಾತಿಯನ್ನು ಎಡಗೈಗೆ ಶೇ 6, ಬಲಗೈಗೆ ಶೇ 5, ಸ್ಪೃಶ್ಯ ಉಪಜಾತಿಗಳಿಗೆ ಶೇ 3 ಹಾಗೂ ಈ ಮೂರೂ ಗುಂಪುಗಳಿಗೆ ಸೇರದ ಜಾತಿಗಳವರಿಗೆ ಶೇ 1ರಷ್ಟು ಮೀಸಲಾತಿ ನೀಡಬಹುದು ಎಂದು ಶಿಫಾರಸು ಮಾಡಿತ್ತು.

### ಆಯೋಗದ ಶಿಫಾರಸುಗಳೇನು

- ಪಟ್ಟಿಯಲ್ಲಿ ಗುರುತಿಸಿಕೊಳ್ಳದ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ಜಾತಿ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಕ್ರಮ ತೆಗದುಕೊಳ್ಳಬೇಕು
- ಆದಿ, ದ್ರಾವಿಡ, ಆದಿ ಕರ್ನಾಟಕ, ಆದಿ ಆಂದ್ರ ಎಂದು ನಮೂದಿಸಿದವರಿಗೆ ಅದೇ ಹೆಸರಿನಲ್ಲಿ ಜಾತಿ ಪ್ರಮಾಣಪತ್ರ ನೀಡಬೇಕು
- ಉದ್ಯೋಗದಲ್ಲಿ ರೋಸ್ಟರ್ ಬಿಂದುಗಳನ್ನು 'ಗುಂಪು'ಗಳ ಆಧಾರದಲ್ಲಿ ಗುರುತಿಸಬೇಕು. ಅದೇ ಆಧಾರದಲ್ಲಿ ಮೀಸಲಾತಿ ನೀಡಬೇಕು
- ಆದಿ, ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಎಂದು ನಮೂದಿಸುವ ಜೊತೆಗೆ ಮೂಲ ಜಾತಿಯನ್ನೂ ಗುರುತಿಸಿದ್ದರೆ, ಅಂಥವರಿಗೆ ಅವರ ಮೂಲ ಜಾತಿಯ ಹೆಸರಿನಲ್ಲಿಯೇ ಜಾತಿ ಪ್ರಮಾಣಪತ್ರ ನೀಡಬೇಕು

### ನಾಗಮೋಹನ್‌ದಾಸ್ ಆಯೋಗದ ವರ್ಗೀಕರಣ

ಗುಂಪು 1; ಅತೀ ಹಿಂದುಳಿದ ಜಾತಿಗಳು ಶೇ 1
ಗುಂಪು 2; ಎಡಗೈ ಜಾತಿಗಳು ಶೇ 6
ಗುಂಪು 3; ಬಲಗೈ ಜಾತಿಗಳು ಶೇ 5
ಗುಂಪು 4; ಬಂಜಾರ, ಬೋವಿ, ಕೊರಚ, ಕೊರಮ (ಅಸ್ಪೃಶ್ಯರಲ್ಲದ ಜಾತಿಗಳು) ಶೇ 4
ಗುಂಪು 5; ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಜಾತಿ ಶೇ 1

### 1.07 ಕೋಟಿ ಜನರು ಭಾಗಿ

ರಾಜ್ಯದಾದ್ಯಂತ ಮೇ 5ರಿಂದ ಜುಲೈ 6ರವರೆಗೆ ನಡೆದ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯ 27.24 ಲಕ್ಷ ಕುಟುಂಬಗಳ 1.07 ಕೋಟಿ ಜನರು ಭಾಗಿಯಾಗಿದ್ದಾರೆ. ಪರಿಶಿಷ್ಟ ಕುಟುಂಬಗಳ ಸಮೀಕ್ಷೆ ಮತ್ತು ಸರ್ಕಾರದ ವಿವಿಧ ಇಲಾಖೆ, ನಿಗಮ- ಮಂಡಳಿಗಳಿಂದ ಸಂಗ್ರಹಿಸಿದ ದತ್ತಾಂಶವನ್ನು ಆಯೋಗ ವಿಶ್ಲೇಷಿಸಿದೆ. ಅದರ ಆಧಾರದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳ ಜಾತಿಗಳನ್ನು ವರ್ಗೀಕರಿಸಿ ಮೀಸಲಾತಿಯನ್ನು ಆಯೋಗ ಹಂಚಿಕೆ ಮಾಡಿದೆ.

### 5 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯ 70 ಜಾತಿ



ಸಮೀಕ್ಷೆಯ ಸಂದರ್ಭದಲ್ಲಿ ಕೆಲವು ವಿಶೇಷ ಸಂಗತಿಗಳು ಬಹಿರಂಗವಾಗಿವೆ. ಈವರೆಗೂ ಸರ್ಕಾರದ ಯಾವುದೇ ಸೌಲಭ್ಯಗಳು ತಲುಪದ, ವಂಚಿತವಾದ ಜಾತಿಗಳನ್ನು ವರದಿಯಲ್ಲಿ ಆಯೋಗ ಪಟ್ಟಿ ಮಾಡಿದೆ. ಐದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ 70 ಜಾತಿಗಳನ್ನು ಗುರುತಿಸಲಾಗಿದೆ. 1 ಲಕ್ಷ ಜನಸಂಖ್ಯೆ ಇರುವ ಏಳೆಂಟು ಜಾತಿಗಳನ್ನು ವರದಿಯಲ್ಲಿ ಪಟ್ಟಿ ಮಾಡಲಾಗಿದೆ ಎಂದೂ ಸರ್ಕಾರ ಮೂಲಗಳು ತಿಳಿಸಿವೆ.

- ಆದರೆ, ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಒಳಮೀಸಲಾತಿ ಕುರಿತು ಪರಿಶೀಲಿಸಿ ಶಿಫಾರಸು ಮಾಡಲು ಅಂದಿನ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಿತ್ತು. ಈ ಸಮಿತಿಯು 2011ರ ಜನಗಣತಿಯಂತೆ ಒಟ್ಟು 101 ಪರಿಶಿಷ್ಟ ಜಾತಿಗಳ ಜಾತಿವಾರು ಜನಸಂಖ್ಯೆಯನ್ನು ಪರಿಗಣಿಸಿ ನಾಲ್ಕು ಗುಂಪುಗಳಾಗಿ ವರ್ಗೀಕರಿಸಿತ್ತು. ಆಗ ಪರಿಶಿಷ್ಟ ಜಾತಿಗಳಿಗೆ ಇದ್ದ ಮೀಸಲಾತಿಯನ್ನು ಶೇ 17ಕ್ಕೆ ಹೆಚ್ಚಿಸುವ ತೀರ್ಮಾನ ತೆಗೆದುಕೊಂಡಿತ್ತು. ಎಡಗೈಗೆ ಶೇ 6, ಬಲಗೈಗೆ ಶೇ 5.5, ಲಂಬಾಣಿ, ಬೋವಿ, ಕೊರಮ, ಕೊರಚ ಜಾತಿಗಳಿರುವ ಗುಂಪಿಗೆ ಶೇ 4.5 ಹಾಗೂ ಈ ಮೇಲಿನ ಗುಂಪುಗಳಿಗೆ ಸೇರದ ಜಾತಿಗಳಿಗೆ ಶೇ 1 ಮೀಸಲಾತಿ ಹಂಚಿಕೆ ಮಾಡಿತ್ತು.
- ಸದಾಶಿವ ಆಯೋಗ ಪಟ್ಟಿ ಮಾಡಿದ್ದ ಎಡಗೈ ಗುಂಪಿನಲ್ಲಿ 29 ಜಾತಿಗಳಿದ್ದವು, ಆದರೆ, ಮಾಧುಸ್ವಾಮಿ ಸಮಿತಿ ಪಟ್ಟಿ ಮಾಡಿದ್ದ ಎಡಗೈ ಗುಂಪಿನಲ್ಲಿ ಕೇವಲ ಆರು ಜಾತಿಗಳಿದ್ದವು. ಇನ್ನು ಸದಾಶಿವ ಆಯೋಗ ಪಟ್ಟಿ ಮಾಡಿದ್ದ ಬಲಗೈ ಗುಂಪಿನಲ್ಲಿ 26 ಜಾತಿಗಳಿದ್ದವು, ಆದರೆ, ಮಾಧುಸ್ವಾಮಿ ಸಮಿತಿ ಪಟ್ಟಿ ಮಾಡಿದ್ದ ಬಲಗೈ ಗುಂಪಿನಲ್ಲಿ ಕೇವಲ ನಾಲ್ಕು ಜಾತಿಗಳಿದ್ದವು. ಗುಂಪಿನಲ್ಲಿದ್ದ ಜಾತಿಗಳ ಸಂಖ್ಯೆಯನ್ನು ಕಡಿಮೆ ಮಾಡಿ ಮಾಧುಸ್ವಾಮಿ ಸಮಿತಿಯು ಮೀಸಲಾತಿ ಪ್ರಮಾಣವನ್ನು ಮರು ಹಂಚಿಕೆ ಮಾಡಿತ್ತು.
- ಆದರೆ, ನಾಗಮೋಹನ್‌ದಾಸ್ ಆಯೋಗವು ಹೊಸತಾಗಿ ಸಮೀಕ್ಷೆ ನಡೆಸಿ, ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದ್ದ ಮಾನದಂಡಗಳ ಆಧಾರದಲ್ಲಿಯೇ ವೈಜ್ಞಾನಿಕವಾಗಿ ಜಾತಿಗಳನ್ನು ವರ್ಗೀಕರಿಸಿದೆ ಎಂದು ವರದಿಯಲ್ಲಿ ಸಮರ್ಥನೆ ನೀಡಲಾಗಿದೆ.

## ❖ ಚಾವಣಿಯಷ್ಟೇ ಅಲ್ಲ, ನೆಲದ ಮೇಲೂ ‘ಸೌರಶಕ್ತಿ’

- ಅಪಾರ್ಟ್‌ಮೆಂಟ್‌ನಲ್ಲಿರುವ ಫ್ಲಾಟ್‌ಗೆ ಸೌರವಿದ್ಯುತ್ ಅಳವಡಿಸಿಕೊಳ್ಳ ಬೇಕು. ಆದರೆ, ಚಾವಣಿಯಲ್ಲಿ ಸೌರಫಲಕ ಗಳನ್ನು ಅಳವಡಿಸಲು ಸಾಕಷ್ಟು ಜಾಗವಿಲ್ಲ, ಏನ್ಮಾಡೋದು?
- ಚಿಂತಿಸಬೇಡಿ. ಇನ್ನು ಮುಂದೆ ಚಾವಣಿಯಷ್ಟೇ ಅಲ್ಲ, ಮನೆಯ ಅಂಗಳ, ಕಾರು ಪಾರ್ಕಿಂಗ್ ತಾಣ, ಗೋಡೆಗಳು ಅಷ್ಟೇ ಅಲ್ಲದೇ ಚಾವಣಿ ಲಭ್ಯವಿರುವ ಬೇರೆ ಕಟ್ಟಡಗಳ ಮೇಲೂ ಸೌರಫಲಕಗಳನ್ನು ಅಳವಡಿಸಿ, ವಿದ್ಯುತ್ ಉತ್ಪಾದಿಸಬಹುದು(ನೆಲದ ಮೇಲಾದರೆ, ನೆಲದಿಂದ 8 ಅಡಿ ಎತ್ತರದಲ್ಲಿ ಫಲಕ ಅಳವಡಿಸಬೇಕು). ಗ್ರಾಹಕರು ವಿದ್ಯುತ್ ಅನ್ನು ಬಳಸಿ, ಉಳಿದರೆ ಗ್ರಿಡ್‌ಗೆ ಮಾರಾಟ ಮಾಡಬಹುದು.
- **ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ(ಕೆಇಆರ್‌ಸಿ) ಇಂಥದ್ದೊಂದು ಅವಕಾಶವನ್ನು ಕಲ್ಪಿಸಿ, ಜುಲೈ 9ರಂದು ಆದೇಶ ಹೊರಡಿಸಿದೆ.** ಇದಕ್ಕಾಗಿ ಹಿಂದೆ ಇದ್ದ ಚಾವಣಿ ಸೌರ ವಿದ್ಯುತ್ ಯೋಜನೆಯ (ಎಸ್‌ಆರ್‌ಟಿಪಿವಿ) ನಿಯಮಗಳನ್ನು ಪರಿಷ್ಕರಿಸಿ, **ಡಿಸ್ಟ್ರಿಬ್ಯೂಟೆಡ್ ಸೋಲಾರ್ ಫೋಟೊವೊಲ್ಟಾಯಿಕ್ (ಡಿಎಸ್‌ಪಿವಿ)** ಎಂದು ಮರು ನಾಮಕರಣ ಮಾಡಿದೆ.
- ***ಎಸ್‌ಆರ್‌ಟಿಪಿವಿ ಯೋಜನೆಯ ಅನ್ವಯ ಎಲ್ಲಿ ಸೌರವಿದ್ಯುತ್ ಬಳಸುತ್ತೀರೊ, ಅಲ್ಲಿಯೇ ಸೌರಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸಬೇಕಿತ್ತು. ಆದರೆ, ಡಿಎಸ್‌ಪಿವಿ ಯೋಜನೆಗಳಲ್ಲಿ ವರ್ಚುವಲ್ ನೆಟ್ ಮೀಟರಿಂಗ್ (VNM) ಮತ್ತು ಗ್ರೂಪ್ ನೆಟ್ ಮೀಟರಿಂಗ್ (GNM) ವ್ಯವಸ್ಥೆಯನ್ನು ಆಯೋಗ ಅನುಮತಿಸಿದ್ದು, ಚಾವಣಿಯಲ್ಲದೇ ಬೇರೆ ಕಡೆಯೂ ಸೌರಫಲಕ ಅಳವಡಿಸಿ ವಿದ್ಯುತ್ ಉತ್ಪಾದಿಸಬಹುದು.***
- ವಿಎನ್‌ಎಂ ಅಡಿಯಲ್ಲಿ ಒಬ್ಬರಿಗಿಂತ ಹೆಚ್ಚು ಗ್ರಾಹಕರು ತಮ್ಮ ಎಸ್ಕಾಂ ವ್ಯಾಪ್ತಿಯಲ್ಲಿ ಲಭ್ಯವಿರುವ ಜಾಗದಲ್ಲಿ ಸೌರಫಲಕಗಳನ್ನು ಅಳವಡಿಸಿ, ವಿದ್ಯುತ್ ಉತ್ಪಾದಿಸಬಹುದು. ಅಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಪೂರ್ಣ ಪ್ರಮಾಣದಲ್ಲಿ ಗ್ರಿಡ್‌ಗೆ ಕೊಡಬೇಕು. ಉತ್ಪಾದಿತ ವಿದ್ಯುತ್‌ನಿಂದ ಗ್ರಾಹಕರು ತಮ್ಮ ಮನೆಗಳಲ್ಲಿ ಬಳಸಿದ ವಿದ್ಯುತ್‌ಗೆ ಹೊಂದಾಣಿಕೆ ಮಾಡುತ್ತಾರೆ. ಇದರಲ್ಲಿ ಹೆಚ್ಚುವರಿ ವಿದ್ಯುತ್ ಉಳಿದಿದ್ದರೆ, ಅದಕ್ಕೆ ಬೆಸ್ಕಾಂ ಹಣ ನೀಡುತ್ತದೆ. ಈ ಯೋಜನೆಗೆ ಸೇರುವ ಮುನ್ನ ಗ್ರಾಹಕರು ಉತ್ಪಾದಿತ ವಿದ್ಯುತ್ ಎಷ್ಟು ಶೇಕಡಾವಾರು ಹಂಚಿಕೆಯಾಗಬೇಕು ಎಂದು ಒಪ್ಪಂದ ಮಾಡಿಕೊಂಡು, ಅದನ್ನು ಬೆಸ್ಕಾಂಗೆ ಸಲ್ಲಿಸಿರಬೇಕು. ಆ ಪ್ರಕಾರ ಬೆಸ್ಕಾಂನವರು ಉತ್ಪಾದನೆಯಾದ ವಿದ್ಯುತ್ ಅನ್ನು ಗ್ರಾಹಕರ ಮನೆಯ ವಿದ್ಯುತ್ ಬಿಲ್‌ಗಳಿಗೆ ಹೊಂದಾಣಿಕೆ ಮಾಡುತ್ತಾರೆ.

- **ಈ ವಿಎನ್‌ಎಂ ಸೌಲಭ್ಯ, ಎಸ್ಕಾಂ ವ್ಯಾಪ್ತಿಯ ಗೃಹ ಬಳಕೆದಾರರು, ಹೌಸಿಂಗ್ ಸೊಸೈಟಿಗಳ ಸಮೂಹ, ಚಾರಿಟಬಲ್ ಟ್ರಸ್ಟ್‌ಗಳು ನಡೆಸುವ ಸಂಸ್ಥೆಗಳು, ಸರ್ಕಾರಿ ಶಾಲೆಗಳು, ಸ್ಥಳೀಯ ಸಂಸ್ಥೆಗಳ ಕಟ್ಟಡಗಳು, ಸರ್ಕಾರಿ ಕಟ್ಟಡಗಳಷ್ಟೇ ಅರ್ಹವಾಗಿರುತ್ತವೆ.**
- **ಯಾರಿಗೆಲ್ಲ ಅನುಕೂಲ?**: ಸೌರಫಲಕಗಳನ್ನು ಅಳವಡಿಸಲು ಪೂರಕವಾದ ಚಾವಣಿ ಇಲ್ಲದ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಸಣ್ಣ ಅಳತೆಯ ನಿವೇಶನದಲ್ಲಿ ಕಟ್ಟಿದ ಮನೆಗಳ ಚಾವಣಿಯಲ್ಲಿ ಸೌರಫಲಕ ಅಳವಡಿಕೆಗೆ ಜಾಗದ ಕೊರತೆ ಇರುತ್ತದೆ. ಆದರೆ ಮನೆ ಹಿಂದೆ ಅಥವಾ ಮುಂದೆ ಜಾಗವಿರುತ್ತದೆ. ಇಂಥ ನಿವಾಸಿಗಳಿಗೆ ಈ ಆದೇಶದಿಂದ ಅನುಕೂಲವಾಗಲಿದೆ. ಚಾವಣಿ ಇದ್ದೂ ಬಿಸಿಲಿನ ಅಭಾವವಿರುವವರಿಗೆ ಇದರಿಂದ ಅನುಕೂಲವಾಗುತ್ತದೆ. 'ಅಪಾರ್ಟ್‌ಮೆಂಟ್‌ನಲ್ಲಿರುವ ಕಾರು, ಸೈಕಲ್ ಪಾರ್ಕಿಂಗ್‌ನಂತಹ ತಾಣಗಳಲ್ಲಿ ಸೌರಫಲಕ ಅಳವಡಿಸಿಕೊಂಡರೆ, ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್, ಕಾಮನ್ ಏರಿಯಾದಲ್ಲಿನ ವಿದ್ಯುತ್ ಬಳಕೆಗೂ ಅನುಕೂಲವಾಗುತ್ತದೆ' ಎಂಬುದು ತಜ್ಞರ ವಿಶ್ಲೇಷಣೆ.
- ನೆಲದ ಮೇಲೂ ಸೌರಫಲಕ ಅಳವಡಿಸಲು ಅನುಮತಿ ನೀಡಿರುವುದರಿಂದ, ಸೌರವಿದ್ಯುತ್ ಉತ್ಪಾದನೆ ಹೆಚ್ಚಿಸಲು ಸಹಾಯವಾಗುತ್ತದೆ. ಇದರಿಂದ ಎಸ್ಕಾಂ ಪೂರೈಸುವ ವಿದ್ಯುತ್ ಮೇಲಿನ ಅವಲಂಬನೆ ತಗ್ಗುತ್ತದೆ. ಇದು ಪರೋಕ್ಷವಾಗಿ ಇಂಧನ ಕ್ಷೇತ್ರಕ್ಕೆ ಸಹಕಾರಿಯಾಗುತ್ತದೆ

## ❖ ಸುಸ್ಥಿರ ನಾಳೆಗೆ ಜೈವಿಕ ಇಂಧನ

- ಪಳೆಯುಳಿಕೆ ಇಂಧನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಶುದ್ಧ ಮತ್ತು ನವೀಕರಿಸಬಹುದಾದ ಇಂಧನದ ಬಳಕೆಯ ಮಾತು ಬಂದಾಗಲೆಲ್ಲ 'ಜೈವಿಕ ಇಂಧನ' ನೆನಪಾಗುತ್ತದೆ.
- 19ನೇ ಶತಮಾನದ ಕೊನೆಯ ವೇಳೆಗೆ ಜರ್ಮನ್ ಸಂಶೋಧಕ ಸರ್ ರುಡಾಲ್ಫ್ ಡೀಸೆಲ್, ಕಡಲೆಕಾಯಿ ಎಣ್ಣೆಯನ್ನು ಬಳಸಿ ಡೀಸೆಲ್ ಎಂಜಿನ್ ಅನ್ನು ಯಶಸ್ವಿಯಾಗಿ ಚಲಾಯಿಸಿ ತೋರಿಸಿದ್ದರು. ಅದು ಪರ್ಯಾಯ ಇಂಧನಗಳ ಸಾಧ್ಯತೆಗಳನ್ನು ಜಗತ್ತಿಗೆ ಪರಿಚಯಿಸಿತ್ತು. ಆ ಮಹತ್ವದ ಘಟನೆಯು ಅಚ್ಚರಿ ಹುಟ್ಟಿಸುವುದರ ಜೊತೆಗೆ ಭವಿಷ್ಯದ ಇಂಧನ ಮೂಲಗಳ ಕುರಿತು ಹೊಸ ದೃಷ್ಟಿಕೋನವನ್ನೇ ನೀಡಿತು. ಕೆಲವು ದೇಶಗಳಲ್ಲಿ ಜೈವಿಕ ಇಂಧನ ತಯಾರಿಕೆ ಮತ್ತು ಬಳಕೆ ಕುರಿತು ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳು ಶುರುವಾದವು.
- ಸಸ್ಯಗಳು, ಪ್ರಾಣಿಗಳ ಕೊಬ್ಬು, ಕೃಷಿ ತ್ಯಾಜ್ಯ, ಸಕ್ಕರೆ ಕಾರ್ಖಾನೆಗಳ ಉಪ ಉತ್ಪನ್ನಗಳು ಮತ್ತು ಪಾಚಿಗಳಿಂದ ಜೈವಿಕ ಇಂಧನಗಳನ್ನು ಉತ್ಪಾದಿಸ ಲಾಗುತ್ತದೆ.
- ಜೈವಿಕ ಇಂಧನ ತಯಾರಿಕೆಯ ಪ್ರಕ್ರಿಯೆ ಸಂಕೀರ್ಣವಾದರೂ ಪರಿಣಾಮಕಾರಿ. ಜೈವಿಕ ಡೀಸೆಲ್ ತಯಾರಿಕೆಗೆ ಬಳಸುವ ಹೊಂಗೆ, ಹಿಪ್ಪೆ, ಬೇವಿನ ಎಣ್ಣೆ ಅಥವಾ ಬಳಸಿದ ಅಡುಗೆ ಎಣ್ಣೆಯನ್ನು **'ಟ್ರಾನ್ಸ್ ಎಸ್ಟರಿಫಿಕೇಷನ್' (ಪರ್ಯಾಂತರೀಕರಣ)** ರಾಸಾಯನಿಕ ಪ್ರಕ್ರಿಯೆ ಮೂಲಕ ಪರಿವರ್ತಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ತೈಲವನ್ನು ಆಲ್ಕೋಹಾಲ್ ಜೊತೆ ಸಂಯೋಜಿಸಿ, ಗ್ಲಿಸರಿನ್ ಬೇರ್ಪಡಿಸಿ, ಶುದ್ಧ ಜೈವಿಕ ಡೀಸೆಲ್ ಪಡೆಯ ಲಾಗುತ್ತದೆ. ಇದನ್ನು ಪೆಟ್ರೋಲಿಯಂ, ಡೀಸೆಲ್ ಜೊತೆ ಮಿಶ್ರಣ ಮಾಡಿ ವಾಹನಗಳಲ್ಲಿ ಬಳಸಬಹುದು.
- ಅದೇ ರೀತಿ, ಜೈವಿಕ ಎಥೆನಾಲ್ ತಯಾರಿಕೆಗೆ ಕಬ್ಬು, ಜೋಳ, ಬೀಟ್‌ರೂಟ್ ಮತ್ತು ಬಾರ್ಲಿಯಂತಹ ಸಕ್ಕರೆ ಅಂಶ ಹೆಚ್ಚಿರುವ ಬೆಳೆಗಳನ್ನು ಹುದುಗು ಬರುವ ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಯೀಸ್ಟ್‌ಗಳು ಸಕ್ಕರೆಯನ್ನು ಎಥೆನಾಲ್ ಆಗಿ ಪರಿವರ್ತಿಸುತ್ತವೆ. ನಂತರ ಅದನ್ನು ಶುದ್ಧೀಕರಿಸಿ ಪೆಟ್ರೋಲ್ ಜೊತೆ ಮಿಶ್ರಣ ಮಾಡಿ ಬಳಸಲಾಗುತ್ತದೆ.
- ಜೈವಿಕ ಇಂಧನಗಳ ಬಳಕೆಯಿಂದ ಪರಿಸರದ ಮೇಲೆ ಗಂಭೀರವಾದ ಅಡ್ಡ ಪರಿಣಾಮಗಳಾಗುವುದಿಲ್ಲ. ಪಳೆಯುಳಿಕೆ ಇಂಧನಗಳು ಇಂಗಾಲದ ಡೈಆಕ್ಸೈಡ್ ಅನ್ನು ವಾತಾವರಣಕ್ಕೆ ಸೇರಿಸುವ ಮೂಲಕ ಶಾಖವರ್ಧಕ ಅನಿಲಗಳ ಪ್ರಮಾಣವನ್ನು ಹೆಚ್ಚಿಸಿದರೆ, ಜೈವಿಕ ಇಂಧನಗಳನ್ನು ಉತ್ಪಾದಿಸುವ ಸಸ್ಯಗಳು ತಮ್ಮ ಬೆಳವಣಿಗೆ ಸಮಯದಲ್ಲಿ ವಾತಾವರಣದಿಂದ ಇಂಗಾಲದ ಡೈಆಕ್ಸೈಡ್ ಹೀರಿಕೊಳ್ಳುತ್ತವೆ. ಇದು ಇಂಗಾಲದ ಚಕ್ರವನ್ನು ಸಮತೋಲನದಲ್ಲಿ ಇಡಲು ಮತ್ತು ಒಟ್ಟು ಇಂಗಾಲದ ಹೊರಸೂಸುವಿಕೆ ಕಡಿಮೆಯಾಗಲು ಸಹಕಾರಿ.

- ಇದರ ಜೊತೆಗೆ, ಜೈವಿಕ ಇಂಧನಗಳಲ್ಲಿ ಗಂಧಕ ಮತ್ತು ಇತರೆ ವಿಷಕಾರಿ ರಾಸಾಯನಿಕಗಳ ಪ್ರಮಾಣ ಬಹಳ ಕಡಿಮೆ ಇರುತ್ತದೆ. ಇದರಿಂದಾಗಿ, ವಾಯುಮಾಲಿನ್ಯ ಗಣನೀಯವಾಗಿ ಕಡಿಮೆಯಾಗುತ್ತದೆ. ಜೈವಿಕ ಇಂಧನ ಬಳಕೆಯಾದಾಗ ಅಪಾಯಕಾರಿ ತೇಲುಕಣಗಳ ಮತ್ತು ನೈಟ್ರಸ್ ಆಕ್ಸೈಡ್‌ಗಳ ಹೊರಸೂಸುವಿಕೆಯು, ಪಳೆಯುಳಿಕೆ ಇಂಧನಗಳು ಹೊಮ್ಮಿಸುವುದಕ್ಕಿಂತ ಹಲವು ಪಟ್ಟು ಕಡಿಮೆ ಇರುತ್ತದೆ.
- ಈ ಇಂಧನಗಳು ಪಳೆಯುಳಿಕೆ ಇಂಧನಗಳ ಆಮದನ್ನು ಕಡಿಮೆ ಮಾಡಲು ಸಹಾಯ ಮಾಡುವುದರಿಂದ ವಿದೇಶಿ ವಿನಿಮಯದ ಉಳಿತಾಯವಾಗುತ್ತದೆ.
- ಕಬ್ಬಿನಿಂದ ತಯಾರಾದ ಎಥೆನಾಲ್ ಅನ್ನು ಬ್ರೆಜಿಲ್ ತನ್ನ ಆರ್ಥಿಕತೆಯ ಪ್ರಮುಖ ಭಾಗವನ್ನಾಗಿ ಮಾಡಿಕೊಂಡಿದೆ. ಅಲ್ಲಿನ ಬಹುತೇಕ ವಾಹನಗಳು 'ಫ್ಲೆಕ್ಸ್ ಫ್ಯೂಯಲ್' ಎಂಜಿನ್‌ಗಳನ್ನು ಹೊಂದಿದ್ದು, ಎಥೆನಾಲ್ ಅಥವಾ ಪೆಟ್ರೋಲ್ ಬಳಸುವ ಸಾಮರ್ಥ್ಯವನ್ನು ಹೊಂದಿವೆ. ಅಮೆರಿಕವು ಜೋಳ ವನ್ನು ಮುಖ್ಯ ಮೂಲವನ್ನಾಗಿ ಬಳಸಿಕೊಂಡು ಎಥೆನಾಲ್ ಉತ್ಪಾದನೆಯಲ್ಲಿ ವಿಶ್ವದಲ್ಲಿಯೇ ಮುಂಚೂಣಿಯಲ್ಲಿದೆ. ಯುರೋಪಿಯನ್ ಒಕ್ಕೂಟವು ಕಟ್ಟುನಿಟ್ಟಾದ ನೀತಿಗಳ ಮೂಲಕ ಜೈವಿಕ ಇಂಧನ ಬಳಕೆಯನ್ನು ಉತ್ತೇಜಿಸುತ್ತಿದೆ. ಈ ಬೆಳವಣಿಗೆಗಳು ಜೈವಿಕ ಇಂಧನಗಳು ಪರಿಸರಸ್ನೇಹಿ ಆಯ್ಕೆಯಷ್ಟೇ ಅಲ್ಲ, ಭವಿಷ್ಯದ ಆರ್ಥಿಕತೆಯ ನಿರ್ಣಾಯಕ ಭಾಗವೂ ಆಗಿವೆ ಎಂಬುದನ್ನು ತೋರಿಸುತ್ತವೆ.
- ಜೈವಿಕ ಇಂಧನ ಕ್ಷೇತ್ರದಲ್ಲಿ **ಭಾರತ ಮಹತ್ವದ ಹೆಜ್ಜೆಗಳನ್ನು** ಇಟ್ಟಿದೆ. ***2018ರಲ್ಲಿ ಜಾರಿಗೆ ತಂದ 'ಜೈವಿಕ ಇಂಧನಗಳ ರಾಷ್ಟ್ರೀಯ ನೀತಿ' ಅಡಿಯಲ್ಲಿ, ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣದ ಪ್ರಮಾಣವನ್ನು ಹೆಚ್ಚಿಸುವ ಗುರಿ ನಿಗದಿಪಡಿಸಲಾಗಿದೆ. ಆರಂಭದಲ್ಲಿ ಶೇ 10ರ ಮಿಶ್ರಣದ ಗುರಿ ಹೊಂದಿದ್ದರೂ, ಅದನ್ನು ಶೇ 20ಕ್ಕೆ ಹೆಚ್ಚಿಸುವ ಮಹತ್ವಾಕಾಂಕ್ಷೆಯ ಯೋಜನೆ ರೂಪಿಸಲಾಗಿದೆ.***
- ಈ ಕಾರ್ಯಕ್ರಮ ಯಶಸ್ವಿಯಾಗಿ ಜಾರಿಯಲ್ಲಿದ್ದು, ತೈಲ ಆಮದು ವೆಚ್ಚ ಕಡಿಮೆಯಾಗಲು ಸಹಾಯ ಮಾಡುತ್ತಿದೆ. ಇದಲ್ಲದೆ, ಅಡುಗೆಗೆ ಬಳಕೆಯಾದ ಎಣ್ಣೆಯಿಂದ ಮತ್ತು ಹೊಂಗೆ, ಹಿಪ್ಪೆಗಳಿಂದ ಜೈವಿಕ ಡೀಸೆಲ್ ಉತ್ಪಾದನೆಗೆ ಒತ್ತು ನೀಡಲಾಗಿದೆ. ಅನೇಕ ರಾಜ್ಯಗಳಲ್ಲಿ ಜೈವಿಕ ಡೀಸೆಲ್ ಉತ್ಪಾದನಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಕರ್ನಾಟಕವು 'ಜೈವಿಕ ಇಂಧನ ಅಭಿವೃದ್ಧಿ ಮಂಡಳಿ' ಯನ್ನು ರಚಿಸಿದ ಮೊದಲ ರಾಜ್ಯವಾಗಿದೆ. ಜೈವಿಕ ಇಂಧನಗಳ ಅಭಿವೃದ್ಧಿಯು ದೇಶದ ಆರ್ಥಿಕತೆಗೆ ಲಾಭ ತರುವುದಲ್ಲದೆ, ಕೃಷಿ ವಲಯದಲ್ಲಿ ಹೆಚ್ಚುವರಿ ಆದಾಯದ ಮೂಲವನ್ನು ಸೃಷ್ಟಿಸುವ ಸಾಧ್ಯತೆಗಳಿವೆ.
- <u>ಆಹಾರ ಬೆಳೆಗಳನ್ನು ಜೈವಿಕ ಇಂಧನ ಉತ್ಪಾದನೆಗಾಗಿ ಬಳಸುವುದು ಸರಿಯೇ</u> ಎಂಬ ಪ್ರಶ್ನೆ ಮೊದಲಿನಿಂದಲೂ ಇದೆ.
    - ✓ ಆಹಾರ ಬೆಳೆಗಳನ್ನು ಜೈವಿಕ ಇಂಧನಕ್ಕಾಗಿ ಬಳಸುವುದರಿಂದ ರೈತರಿಗೆ ಉತ್ತಮ ಬೆಲೆ ಸಿಗುತ್ತದೆ. ಅದರಿಂದಾಗಿ, ಕೃಷಿ ಕ್ಷೇತ್ರದ ಆರ್ಥಿಕತೆ ಸುಧಾರಿಸುತ್ತದೆ ಮತ್ತು ಮಾರಾಟವಾಗದ ಹೆಚ್ಚುವರಿ ಕೃಷಿ ಉತ್ಪನ್ನಗಳು ವ್ಯರ್ಥವಾಗುವುದು ತಪ್ಪುತ್ತದೆ. ಆದರೆ, ಆಹಾರ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಜೈವಿಕ ಇಂಧನಕ್ಕಾಗಿ ಬಳಸಿದರೆ ಆಹಾರದ ಬೆಲೆಗಳು ಹೆಚ್ಚಾಗಿ, ಬಡ ದೇಶಗಳಲ್ಲಿ ಆಹಾರ ಭದ್ರತೆಗೆ ಅಪಾಯ ತರುವ ಸಾಧ್ಯತೆ ಇದೆ. ಜಾಗತಿಕವಾಗಿಯೂ ಆಹಾರದ ಕೊರತೆ ಉಂಟಾಗಬಹುದು.
    - ✓ ಈ ಸಮಸ್ಯೆ ಪರಿಹರಿಸಿಕೊಳ್ಳಲು ಜನ- ಜಾನುವಾರು ಸೇವಿಸುವ ಆಹಾರಕ್ಕೆ ಪೈಪೋಟಿ ನೀಡದ ಬೆಳೆಗಳಿಂದ ಜೈವಿಕ ಇಂಧನಗಳನ್ನು ಉತ್ಪಾದಿಸುವುದು ಸೂಕ್ತ. ಹೊಂಗೆ, ಹಿಪ್ಪೆ, ಜಟ್ರೋಫಾದಂತಹ ಕೃಷಿಯೇತರ ಬೆಳೆಗಳು, ಪಾಚಿ, ವ್ಯರ್ಥ ಆಹಾರ, ಅವಧಿ ಮೀರಿದ ಪ್ಯಾಕ್ ಮಾಡಿದ ಆಹಾರ, ಕೃಷಿ ತ್ಯಾಜ್ಯ ಮತ್ತು ನಗರ ತ್ಯಾಜ್ಯಗಳನ್ನು ಜೈವಿಕ ಇಂಧನ ಉತ್ಪಾದಿಸಲು ಬಳಸುವುದರಿಂದ ಆಹಾರ ಭದ್ರತೆಗೆ ಧಕ್ಕೆಯಾಗುವುದಿಲ್ಲ ಮತ್ತು ಪರಿಸರಕ್ಕೂ ಹಾನಿ ಇರುವುದಿಲ್ಲ.
    - ✓ ಭಾರತವು ಈ ನಿಟ್ಟಿನಲ್ಲಿ ಸುಧಾರಿತ ನೀತಿಗಳನ್ನು ಅಳವಡಿಸಿಕೊಂಡು ಮುನ್ನಡೆಯುತ್ತಿರುವುದು, 2070ರ ವೇಳೆಗೆ ಶೂನ್ಯ ಇಂಗಾಲ ಉತ್ಸರ್ಜನೆಯ ಗುರಿ ತಲುಪಲು ನೆರವಾಗಲಿದೆ.

- ಜೈವಿಕ ಇಂಧನ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆಗಳು ಮತ್ತು ಪ್ರಯೋಗಗಳು ನಡೆದಿವೆ. ಪ್ರಖ್ಯಾತ ಗಾಂಧೀವಾದಿ ವಿಜ್ಞಾನಿ ಡಾ. ರಘುನಾಥ್ ಅನಂತ ಮಾಶೇಲ್ಕರ್ ಭಾರತದ ಜೈವಿಕ ಇಂಧನ ನೀತಿಗಳಿಗೆ ವೈಜ್ಞಾನಿಕ ಮತ್ತು ಸಾಮಾಜಿಕ ಆಯಾಮಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.
- ವಿಜ್ಞಾನಿಗಳಾದ ಡಾ. ಅನಿಲ್ ಕುಮಾರ್ ಸಿನ್ಹಾ, ಡಾ. ಸಲೀಂ ಅಖ್ತರ್ ಫರೂಕಿ, ಡಾ. ನೀರಜ್ ಅತ್ರೇ, ಡಾ. ಜಯತಿ ತ್ರಿವೇದಿ ಮತ್ತು ಅವರ ತಂಡವು ಸೇರಿದಂತೆ ಹಲವು ವಿಜ್ಞಾನಿಗಳು, ಕೃಷಿ ತ್ಯಾಜ್ಯ ಮತ್ತು ಅಡುಗೆ ಎಣ್ಣೆಯಿಂದ ಜೈವಿಕ ಇಂಧನ ಉತ್ಪಾದಿಸುವ ವಿಧಾನಗಳ ಬಗ್ಗೆ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ' , 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' ಮತ್ತು ಇತರ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ.
- ಜೈವಿಕ ಇಂಧನ, ತಂತ್ರಜ್ಞಾನಗಳ ಸುಧಾರಣೆ ಮತ್ತು ವಾಣಿಜ್ಯ ಬಳಕೆಗೆ ಪ್ರಮುಖ ಕೊಡುಗೆ ನೀಡಿದ್ದಾರೆ. ವಿಜ್ಞಾನಿ ಡಾ. ಎ.ಕೆ. ಸಿಂಗ್ ಅವರು ಸೆಣಬು ಮತ್ತು ಕೆನಾಫ್ (ದಾಸವಾಳ ಸೆಣಬು) ರೀತಿಯ ಬೆಳೆಗಳ ಕೃಷಿ ತ್ಯಾಜ್ಯದಿಂದ ಜೈವಿಕ ಎಥೆನಾಲ್ ಉತ್ಪಾದಿಸುವ ಸಾಧ್ಯತೆಗಳ ಕುರಿತು ಅಧ್ಯಯನ ನಡೆಸಿದ್ದಾರೆ. ಈ ಸಂಶೋಧನೆಗಳು ಯಶಸ್ವಿಯಾದರೆ ಆಹಾರ ಬೆಳೆಗಳ ಮೇಲಿನ ಒತ್ತಡ ತನ್ನಿಂತಾನೇ ಕಡಿಮೆಯಾಗುತ್ತದೆ.
- ತಮಿಳುನಾಡು ಕೃಷಿ ವಿಶ್ವವಿದ್ಯಾಲಯವು ಹೊಂಗೆ, ಲಕ್ಷ್ಮೀತರು (ಸಿಮರೂಬಾ), ಕಾಸಿಗಿಡ (ಜಟ್ರೋಫಾ) ಮತ್ತು ಇತರ ಎಣ್ಣೆಬೀಜಗಳಿಂದ ತೈಲವನ್ನು ಹೊರತೆಗೆಯುವ ವಿಧಾನಗಳು, ಆ ತೈಲವನ್ನು ಜೈವಿಕ ಡೀಸೆಲ್ ಆಗಿ ಪರಿವರ್ತಿಸುವ ಪ್ರಕ್ರಿಯೆಗಳು ಮತ್ತು ಅದರ ಇಂಧನ ಗುಣಮಟ್ಟದ ಬಗ್ಗೆ ವ್ಯಾಪಕ ಸಂಶೋಧನೆ ನಡೆಸಿದೆ.
- ಜೈವಿಕ ಇಂಧನಗಳು ಬರೀ ಪರಿಸರಸ್ನೇಹಿ ಇಂಧನಗಳಾಗಿರದೆ, ದೇಶದ ಆರ್ಥಿಕತೆ, ರೈತರ ಜೀವನಮಟ್ಟ ಮತ್ತು ಇಂಧನ ಭದ್ರತೆಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ವಿಶ್ವದ ಸುಸ್ಥಿರ ಭವಿಷ್ಯಕ್ಕಾಗಿ ಪರ್ಯಾಯ ಇಂಧನದ ರೂಪದಲ್ಲಿ ಜೈವಿಕ ಇಂಧನ ಸಿಕ್ಕಿದೆ. ರೈತರ ಹಿತ ಕಡೆಗಣಿಸದೆ ತಂತ್ರಜ್ಞಾನ ಹಾಗೂ ನೀತಿಗಳ ಸಮರ್ಥ ಅನುಷ್ಠಾನದಿಂದ ಜೈವಿಕ ಇಂಧನಗಳನ್ನು ಭವಿಷ್ಯದ ಇಂಧನ ಮೂಲವನ್ನಾಗಿ ಮಾಡಬಹುದು.

## ❖ ಪ್ರಯತ್ನಿಸಿದ್ದು ಟಿಪ್ಪು, ನಿರ್ಮಿಸಿದ್ದು ನಾಲ್ವಡಿ!



ಆಣೆಕಟ್ಟೆ ದಕ್ಷಿಣ ದ್ವಾರದಲ್ಲಿ ಇರುವ ಟಿಪ್ಪು ಸುಲ್ತಾನ್ ಚಿತ್ರಸಹಿತ ಫಲಕ (ಎಡಚಿತ್ರ). ಕೆಆರ್‌ಎಸ್ ಬೃಂದಾವನದ ದಕ್ಷಿಣದಲ್ಲಿ, 1940ರ ನಂತರ ಸ್ಥಾಪಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ

- ಕನ್ನಂಬಾಡಿ ಗ್ರಾಮದ ಬಳಿ ಕಾವೇರಿ ನದಿಗೆ ಅಣೆಕಟ್ಟೆ ಕಟ್ಟಲು ಟಿಪ್ಪು ಸುಲ್ತಾನ್ 18ನೇ ಶತಮಾನದ ಅಂತ್ಯದಲ್ಲಿ ಪ್ರಯತ್ನಿಸಿದ್ದರಾದರೂ ಅದೇ ಸ್ಥಳದಲ್ಲಿ ಅಣೆಕಟ್ಟೆ ನಿರ್ಮಿಸಿ ದವರು ನಾಲ್ವಡಿ ಕೃಷ್ಣರಾಜ ಒಡೆಯರ್.
- ಕೃಷ್ಣರಾಜ ಸಾಗರ ಅಣೆಕಟ್ಟೆಯ ದಕ್ಷಿಣ ದ್ವಾರದ ಪೂರ್ವ ಭಾಗದ ಗೋಡೆಯ ಮೇಲಿರುವ ಫಲಕಗಳ ಪ್ರಕಾರ ಟಿಪ್ಪು 1794ರಲ್ಲಿ, 70 ಅಡಿ ಎತ್ತರದ ಅಣೆಕಟ್ಟೆ ನಿರ್ಮಿಸಲು ಅಸ್ತಿಭಾರ ಹಾಕಿಸಿದ್ದರು. ಇಲ್ಲಿರುವ ಪರ್ಷಿಯನ್, ಇಂಗ್ಲಿಷ್ ಮತ್ತು ಕನ್ನಡ ಭಾಷೆಯ ಶಿಲಾ ಫಲಕಗಳಲ್ಲಿ ಈ ಉಲ್ಲೇಖಗಳಿವೆ.
- 'ಚರಿತ್ರೆಯ ಪುಟಗಳಲ್ಲಿರುವ ಲಿಖಿತ ಮಾಹಿತಿಯನ್ನು ಆಧರಿಸಿ ಈ ಶಿಲಾ ಫಲಕ ಕೆತ್ತಿರುವ ಸಾಧ್ಯತೆ ಇದೆ ' ಎಂಬುದು ಇತಿಹಾಸಕಾರ ಪ್ರೊ.ಪಿ.ವಿ. ನಂಜರಾಜ ಅರಸು ಅವರ ಮಾತು.
- 'ಟಿಪ್ಪು ಕಾಲದಲ್ಲಿ ಕನ್ನಂಬಾಡಿ ಬಳಿ ಅಣೆಕಟ್ಟೆ ನಿರ್ಮಾಣ ಕಾರ್ಯ ಆರಂಭವಾಗಿತ್ತು' ಎನ್ನಲು ಫಲಕ ಹೊರತುಪಡಿಸಿ ಇತರ ಯಾವುದೇ ಕುರುಹು ಸಿಕ್ಕಿಲ್ಲ.
- ವಿಶೇಷವೆಂದರೆ, ಅಣೆಕಟ್ಟೆಗೆ ಹೊಂದಿಕೊಂಡ ಬೃಂದಾವನದ ದಕ್ಷಿಣ ತುದಿಯಲ್ಲಿ, 1940ರ ನಂತರ ಸ್ಥಾಪಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿಯ ಪೀಠದಲ್ಲಿಯೂ 'ಪರ್ಷಿಯನ್' ಭಾಷೆಯ ಫಲಕ ಹಾಕಲಾಗಿದೆ. 'ಈ ಫಲಕ ಹೇಗೆ ಬಂತು' ಎಂಬ ಪ್ರಶ್ನೆಗೆ ಅಧಿಕಾರಿಗಳ ಬಳಿ ಉತ್ತರವಿಲ್ಲ.
- **ಸರ್ ಎಂ.ವಿ. ನೀಲನಕ್ಷೆ:** 1799ರಲ್ಲಿ ಟಿಪ್ಪು ಸುಲ್ತಾನ್ ಅಂತ್ಯಗೊಂಡ 112 ವರ್ಷದ ಬಳಿಕ, 1911ರಲ್ಲಿ ಟಿಪ್ಪು ಅಡಿಗಲ್ಲು ಹಾಕಿದ್ದರು ಎನ್ನಲಾದ ಸ್ಥಳದ ಸಮೀಪವೇ ನಾಲ್ವಡಿ ಅವರ ಕಾಲದಲ್ಲಿ ಕಾವೇರಿ ನದಿಗೆ

ಕಟ್ಟೆ ಕಟ್ಟುವ ಕಾರ್ಯ ಆರಂಭವಾಯಿತು. ಮೈಸೂರು ಸಂಸ್ಥಾನದ ಮುಖ್ಯ ಎಂಜಿನಿಯರ್ ಸರ್ ಎಂ.ವಿಶ್ವೇಶ್ವರಯ್ಯ 1910ರಲ್ಲಿ ನೀಲನಕ್ಷೆ ರೂಪಿಸಿದ್ದರು.

- ₹2.53 ಕೋಟಿ ವೆಚ್ಚದ ಬೃಹತ್ ಯೋಜನೆಗೆ 1911ರ ಅಕ್ಟೋಬರ್ 12ರಂದು ಮೈಸೂರು ಸರ್ಕಾರ ಅಧಿಕೃತ ಆದೇಶವನ್ನೂ (ಸರ್ಕಾರದ ಆದೇಶ ಸಂಖ್ಯೆ: ಸಿ.–13198490)ಹೊರಡಿಸಿತು.
- 'ನಿರ್ಮಾಣಕ್ಕೆ ಹಣಕಾಸಿನ ಕೊರತೆ ಉಂಟಾದಾಗ, ನಾಲ್ವಡಿ ಅವರು ಖಾಸಗಿ ಭಂಡಾರದಲ್ಲಿದ್ದ 3 ಮೂಟೆ ಚಿನ್ನಾಭರಣ ಮತ್ತು ವಜ್ರ ವೈಢೂರ್ಯಗಳನ್ನು ಮುಂಬೈ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ಕೊಟ್ಟರು' ಎಂಬ ಅಂಶ ಇತಿಹಾಸಕಾರ ಪ್ರೊ.ಪಿ.ವಿ. ನಂಜರಾಜ ಅರಸು ಅವರ 'ನಾನು ಕನ್ನಂಬಾಡಿ ಕಟ್ಟೆ' ಪುಸ್ತಕ ಸೇರಿದಂತೆ ವಿವಿಧ ಕೃತಿಗಳಲ್ಲಿ ದಾಖಲಾಗಿದೆ.
- 1915ರ ವೇಳೆಗೆ 65 ಅಡಿ ಎತ್ತರದ ಅಣೆಕಟ್ಟೆ ನಿರ್ಮಾಣವಾಗಿತ್ತು. 1931ರ ಹೊತ್ತಿಗೆ 130 ಅಡಿ ಎತ್ತರದ (ನೀರು ನಿಲ್ಲುವ ಎತ್ತರ- 124.80 ಅಡಿ) ಅಣೆಕಟ್ಟೆ ನಿರ್ಮಾಣ ಕಾರ್ಯ ಪೂರ್ಣಗೊಂಡಿತು.

ಫಲಕದಲ್ಲಿ ಏನಿದೆ...?

- 'ಪೈಗಂಬರ್ ಮಹಮ್ಮದರ ಜನ್ಮದಿನದಿಂದ ಪ್ರಾರಂಭವಾದ ಸೌರಮಾನ ಶಕೆ ಸಾವಿರದ ಇನ್ನೂರ ಇಪ್ಪತ್ತೊಂದನೆ ಸಂವತ್ಸರವಾದ, ಷಾದಾಬ್ ಶುಭ ವರ್ಷದ ತಕಿ ಮಾಸದ ಇಪ್ಪತ್ತೊಂದನೆ ತೇದಿಯಾದ ಶುಭ ದಿವಸ...' ಎಂದು ಫಲಕದ ಸಾಲು ಆರಂಭವಾಗುತ್ತದೆ.
- 'ಭಗವಂತನ ಛಾಯಾ ಸ್ವರೂಪರಾದ ಹಜರತ್ ಟಿಪ್ಪು ಸುಲ್ತಾನರಾದ ನಾವು, ರಾಜಧಾನಿಗೆ ಪಶ್ಚಿಮ ದಿಕ್ಕಿನಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಚಿರಸ್ಥಾಯಿಯಾದ ಅಣೆಕಟ್ಟೆಯನ್ನು ಕಟ್ಟಿಸಲು ಶಂಕುಸ್ಥಾಪನೆ ಮಾಡಿಸಿದ್ದೇವೆ' ಎಂದೂ ಬರೆಯಲಾಗಿದೆ.

## ❖ ಭೂ ಉಪಯೋಗ ಬದಲಾವಣೆಗೂ ಶುಲ್ಕ

- ರಾಜ್ಯದ ಎಲ್ಲಾ ಸ್ಥಳೀಯ ಯೋಜನಾ ಪ್ರಾಧಿಕಾರಗಳಲ್ಲಿ ಭೂ ಉಪಯೋಗ ಬದಲಾವಣೆಗೆ ಶುಲ್ಕವನ್ನು ನಿಗದಿಪಡಿಸಲು ನಗರಾಭಿವೃದ್ಧಿ ಇಲಾಖೆ ಮುಂದಾಗಿದೆ.
- ಕರ್ನಾಟಕ ನಗರ ಮತ್ತು ಗ್ರಾಮಾಂ ತರ ಯೋಜನಾ (ಕೆಟಿಸಿಪಿ) ಕಾಯ್ದೆ 1961ರ (ಕರ್ನಾಟಕ ಕಾಯ್ದೆ 11–1963) ಸೆಕ್ಷನ್ 68 (4)ಕ್ಕೆ ತಿದ್ದುಪಡಿ ತಂದು, 'ಕರ್ನಾಟಕ ಯೋಜನಾ ಪ್ರಾಧಿ ಕಾರಗಳ (ತಿದ್ದುಪಡಿ) ನಿಯಮಗಳು- 2025'ರ ಅಡಿ ಕರಡು ಪ್ರಕಟಿಸಲಾಗಿದೆ.
- ಸೆಕ್ಷನ್ 17ರಲ್ಲಿ ತಿದ್ದುಪಡಿ ತಂದು, ಏಕ ನಿವೇಶನ, ಬಹು ನಿವೇಶನ, ಬಡಾವಣೆ ಅಭಿವೃದ್ಧಿ ನಕ್ಷೆ ಪಡೆಯಲು ಅಭಿವೃದ್ಧಿ ಶುಲ್ಕ ನಿಗದಿಪಡಿಸಿ 2021ರ ಜೂನ್ 21ರಂದು ಅಂತಿಮ ಆದೇಶ ಹೊರಡಿಸಲಾಗಿತ್ತು. ಭೂ ಉಪಯೋಗ ಬದಲಾವಣೆಗೂ ಅದೇ ಅಭಿವೃದ್ಧಿ ಶುಲ್ಕವನ್ನು ಪಾವತಿಸಲಾಗುತ್ತಿತ್ತು. ಹೀಗಾಗಿ, ಕೆಟಿಸಿಪಿ ಕಾಯ್ದೆಯ ಸೆಕ್ಷನ್ 14–ಎ ಮತ್ತು ಸೆಕ್ಷನ್ 68(4)ಕ್ಕೆ ತಿದ್ದುಪಡಿ ತಂದು, ಭೂ ಉಪಯೋಗ ಬದಲಾವಣೆಗೆ ಪ್ರತ್ಯೇಕ ಶುಲ್ಕ ನಿಗದಿಪಡಿಸಿ ಕರಡು ಅಧಿಸೂಚನೆ ಹೊರಡಿಸಲಾಗಿದೆ. ಅಭಿವೃದ್ಧಿ ನಕ್ಷೆ ಪಡೆಯಲು ಪಾವತಿಸ ಬೇಕಿರುವ ಅಭಿವೃದ್ಧಿ ಶುಲ್ಕಕ್ಕಿಂತ ದುಪ್ಪಟ್ಟು ಶುಲ್ಕವನ್ನು ಭೂ ಉಪ ಯೋಗ ಬದಲಾವಣೆಗೆ ಶುಲ್ಕವಾಗಿ ನಿಗದಿ ಪಡಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು 30 ದಿನ ಅವಕಾಶ ನೀಡಲಾಗಿದೆ.
- ಕೃಷಿಯೇತರ ಜಮೀನಿನಲ್ಲಿ ವಸತಿ, ಕೈಗಾರಿಕೆ, ವಾಣಿಜ್ಯದ ಉದ್ದೇಶ ಕ್ಕಾಗಿ ಭೂ ಉಪಯೋಗದ ಬದ ಲಾವಣೆ ಮಾಡಿಕೊಳ್ಳಲು ಶುಲ್ಕ ಪಾವತಿಸ ಬೇಕಾಗುತ್ತದೆ. ಎಲ್ಲ ಪ್ರಕ್ರಿಯೆ ಮುಗಿದ ಮೇಲೆ, ಏಕ ನಿವೇಶನ, ಬಹು ನಿವೇಶನ, ಬಡಾವಣೆ ಅಭಿವೃದ್ಧಿ ನಕ್ಷೆಗೆ ಅಭಿವೃದ್ಧಿ ಶುಲ್ಕವನ್ನು ಮಾರ್ಗಸೂಚಿ ದರದನ್ವಯ ಪಾವತಿಸಿ ಪ್ರಮಾಣ ಪತ್ರ ಪಡೆದುಕೊಳ್ಳ ಬೇಕಾಗುತ್ತದೆ ಎಂದು ನಗರ ಯೋಜನೆ ಅಧಿಕಾರಿಗಳು ಮಾಹಿತಿ ನೀಡಿದರು.

- ಬೆಂಗಳೂರು ನಗರ, ದಕ್ಷಿಣ ಹಾಗೂ ಗ್ರಾಮಾಂತರ ಜಿಲ್ಲೆಗಳ ಜನಸಂಖ್ಯೆಯನ್ನು ಪರಿಗಣಿಸದೆ 'ಬೆಂಗಳೂರು ಮೆಟ್ರೊ ಪಾಲಿಟನ್ ವಲಯ' ದ ಸ್ಥಳೀಯ ಯೋಜನಾ ಪ್ರಾಧಿಕಾರ ಎಂದು ವರ್ಗೀ ಕರಿಸಲಾಗಿದೆ. ಉಳಿದ, ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ಅವು ಗಳ ಜನಸಂಖ್ಯೆಕ್ಕೆ ಅನುಗುಣವಾಗಿ ವರ್ಗೀಕರಿಸಲಾಗಿದೆ.

## ❖ ರಫ್ತುದಾರರಿಗೆ ಕೇಂದ್ರ ನೆರವು ಸಾಧ್ಯತೆ

- ಜವಳಿ, ರಾಸಾಯನಿಕಗಳ ವಲಯದ ರಫ್ತುದಾರರಿಗೆ ನೆರವಾಗುವ ದಿಸೆಯಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರವು ಮುಂದಡಿ ಇರಿಸಿದೆ ಎಂದು ಮೂಲಗಳು ಹೇಳಿವೆ.
- ಅಮೆರಿಕವು ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಿದ್ದು, ಅದರ ದುಷ್ಪರಿಣಾಮದಿಂದ ಈ ವಲಯಗಳನ್ನು ರಕ್ಷಿಸಲು ಕೇಂದ್ರವು ಕ್ರಮಕ್ಕೆ ಮುಂದಾಗಿದೆ ಎಂದು ತಿಳಿಸಿವೆ.
- ಅಮೆರಿಕ ವಿಧಿಸಿರುವ ಸುಂಕವು ಆಗಸ್ಟ್ 7ರಿಂದ ಜಾರಿಗೆ ಬರಲಿದೆ. ವಿವಿಧ ರಫ್ತು ವಲಯಗಳ ಪ್ರತಿನಿಧಿಗಳ ಜೊತೆ ಕೇಂದ್ರ ವಾಣಿಜ್ಯ ಸಚಿವಾಲಯದ ಅಧಿಕಾರಿಗಳು ಸಭೆ ನಡೆಸಿದ್ದಾರೆ. ಉಕ್ಕು, ಆಹಾರ ಸಂಸ್ಕರಣೆ, ಎಂಜಿನಿಯರಿಂಗ್, ಸಾಗರ ಉತ್ಪನ್ನಗಳು, ಕೃಷಿ ವಲಯದ ಪ್ರತಿನಿಧಿಗಳು ಸಭೆಯಲ್ಲಿ ಇದ್ದರು. ಹೆಚ್ಚುವರಿ ಸುಂಕದಿಂದಾಗಿ ಆಗುವ ಪರಿಣಾಮಗಳ ಬಗ್ಗೆ ತಿಳಿಯಲು ಸಭೆ ಕರೆಯಲಾಗಿತ್ತು ಎಂದು ಮೂಲವೊಂದು ಹೇಳಿದೆ.
- ವಿವಿಧ ವಲಯಗಳ ರಫ್ತುದಾರರು ಸರ್ಕಾರದಿಂದ ಹಣಕಾಸಿನ ನೆರವು ಕೇಳಿದ್ದಾರೆ. ಕಡಿಮೆ ಬಡ್ಡಿ ದರಕ್ಕೆ ಸಾಲ ಕೊಡಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ. ರಫ್ತು ಮಾಡಲಾದ ಉತ್ಪನ್ನ ಗಳಿಗೆ ವಿಧಿಸುವ ಸುಂಕಗಳನ್ನು ಮರುಪಾವತಿ ಮಾಡುವ ಯೋಜನೆಯನ್ನು ವಿಸ್ತರಿಸಬೇಕು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ತೆರಿಗೆಗಳಲ್ಲಿ ವಿನಾಯಿತಿ ಕೊಡುವ ಯೋಜನೆಯನ್ನು ಕೂಡ ವಿಸ್ತರಿಸಬೇಕು ಎಂದು ಅವರು ಕೋರಿದ್ದಾರೆ.
- ಇವಲ್ಲದೆ, ಬಾಕಿ ಪಾವತಿಗಳು ಸಕಾಲದಲ್ಲಿ ಆಗುವಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು ಹಾಗೂ ಅಮೆರಿಕಕ್ಕೆ ಸರಕುಗಳನ್ನು ರಫ್ತು ಮಾಡಲು ನೇರ ಜಲ ಮಾರ್ಗವನ್ನು ಗುರುತು ಮಾಡಿಕೊಡಬೇಕು ಎಂದೂ ಅವರು ಆಗ್ರಹ ಮಂಡಿಸಿದ್ದಾರೆ ಎಂದು ಗೊತ್ತಾಗಿದೆ. ಈ ಎಲ್ಲ ಮನವಿಗಳನ್ನು ಸಚಿವಾಲಯವು ಪರಿಗಣಿಸಿದೆ. ರಫ್ತುದಾರರಿಗೆ ನೆರವಿನ ಹಸ್ತ ಚಾಚಲು ಸಚಿವಾಲಯವು ರಾಜ್ಯಗಳ ಜೊತೆಯೂ ಮಾತುಕತೆ ನಡೆಸಲಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.
- ಅಮೆರಿಕವು ವಿಧಿಸಿರುವ ಹೆಚ್ಚುವರಿ ಸುಂಕದ ಪರಿಣಾಮವು ಜಾಸ್ತಿ ಇರುವ ವಲಯಗಳ ಪಟ್ಟಿಯಲ್ಲಿ ಜವಳಿ, ಮುತ್ತು ಮತ್ತು ಆಭರಣ, ಸೀಗಡಿ, ಚರ್ಮೋತ್ಪನ್ನಗಳು ಹಾಗೂ ಪಾದರಕ್ಷೆ, ರಾಸಾಯನಿಕಗಳು, ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಯಂತ್ರೋಪಕರಣಗಳು ಇವೆ.
- **ಜವಳಿ, ರಾಸಾಯನಿಕರು ಹಾಗೂ ಸೀಗಡಿ ರಫ್ತು ವಲಯವು** ಇತರ ವಲಯಗಳಿಗಿಂತ ಹೆಚ್ಚು ಸಂಕಷ್ಟ ಎದುರಿಸಬೇಕಾ ಗುತ್ತದೆ. ಏಕೆಂದರೆ **ಭಾರತಕ್ಕೆ ಅಮೆರಿಕದ ಮಾರುಕಟ್ಟೆಯಲ್ಲಿ ಸ್ಪರ್ಧೆ ನೀಡುವ ಬಾಂಗ್ಲಾದೇಶ, ವಿಯೆಟ್ನಾಂ, ಥಾಯ್ಲೆಂಡ್ ದೇಶಗಳಿಗೆ ಕಡಿಮೆ ಪ್ರಮಾಣದ ಸುಂಕ ನಿಗದಿ** ಮಾಡಲಾಗಿದೆ ಎಂದು ರಫ್ತುದಾರರ ಪ್ರತಿನಿಧಿಗಳು ವಿವರಿಸಿದ್ದಾರೆ.
- 'ಭಾರತದಿಂದ ಆಮದು ಮಾಡಿಕೊಳ್ಳುವ ಎಲ್ಲ ಸರಕುಗಳಿಗೂ ಶೇಕಡ 25ರಷ್ಟು ಸುಂಕ ವಿಧಿಸಲಾಗುವುದು' ಎಂದು ಟ್ರಂಪ್ ಅವರು ಕಳೆದ ವಾರ ಘೋಷಿಸಿದ್ದರು. ಬೃಹತ್ ಪ್ರಮಾಣದಲ್ಲಿ ರಷ್ಯಾದ ಸೇನಾ ಉಪಕರಣಗಳು, ಕಚ್ಚಾ ತೈಲ ಖರೀದಿಸುತ್ತಿರುವ ಭಾರತದ ಮೇಲೆ ದಂಡ ವಿಧಿಸಲಾಗುವುದು ಎಂದು ಹೇಳಿದ್ದರು. ಆದರೆ, ಯಾವ ದಿನಾಂಕದಿಂದ ಈ ನಿರ್ಧಾರ ಜಾರಿಗೆ ಬರಲಿದೆ ಎಂದು ತಿಳಿಸಿರಲಿಲ್ಲ.
- 'ಭಾರತವು ದೊಡ್ಡ ಪ್ರಮಾಣದಲ್ಲಿ ರಷ್ಯಾದ ತೈಲವನ್ನು ಮಾತ್ರ ಖರೀದಿಸುತ್ತಿಲ್ಲ, ಖರೀದಿಸಿದ ತೈಲವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ, ದೊಡ್ಡ ಪ್ರಮಾಣದ ಲಾಭ ಮಾಡಿ ಕೊಳ್ಳುತ್ತಿದೆ' ಎಂದು ಟ್ರಂಪ್ ಸಾಮಾಜಿಕ ಜಾಲತಾಣ 'ಟ್ರುಥ್' ನಲ್ಲಿ ಬರೆದುಕೊಂಡಿದ್ದಾರೆ.

- ‘ರಷ್ಯಾದ ಯುದ್ಧ ಟ್ಯಾಂಕರ್‌ಗಳಿಂದ ಉಕ್ರೇನ್‌ನಲ್ಲಿ ಹಲವು ಜನರು ಸಾಯುತ್ತಿದ್ದರೂ ಕೂಡ ಅವರು ಹೆದರುತ್ತಿಲ್ಲ. ಈ ಕಾರಣದಿಂದಲೇ, ಭಾರತದಿಂದ ಖರೀದಿಸುವ ಎಲ್ಲ ಸರಕುಗಳಿಗೂ ಸುಂಕವನ್ನು ಗಣನೀಯವಾಗಿ ಏರಿಕೆ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.
- ದೊಡ್ಡ ಖರೀದಿದಾರ: **ರಷ್ಯಾದಿಂದ ಭಾರತವು ದೇಶಕ್ಕೆ ಅಗತ್ಯವಿರುವ ಕಚ್ಚಾತೈಲದ ಪೈಕಿ ಶೇಕಡ 35ರಿಂದ 40ರಷ್ಟು ಖರೀದಿಸುತ್ತಿದೆ. ಉಕ್ರೇನ್ ಜೊತೆಗಿನ ಯುದ್ಧ ಆರಂಭಕ್ಕೂ ಮುನ್ನ ಹೋಲಿಸಿದರೆ, ಆಮದು ಪ್ರಮಾಣವು ಭಾರಿ ಏರಿಕೆಯಾಗಿದೆ. ರಷ್ಯಾದಿಂದ ಕಚ್ಚಾತೈಲ ಖರೀದಿಯಲ್ಲಿ ಚೀನಾವು ಮೊದಲ ಸ್ಥಾನದಲ್ಲಿದ್ದರೆ, ಭಾರತವು ನಂತರದ ಸ್ಥಾನದಲ್ಲಿದೆ.**

## ❖ ಟೀಕೆ ನ್ಯಾಯಸಮ್ಮತವಲ್ಲ: ಎಂಇಎ ಪ್ರತಿಕ್ರಿಯೆ

- ರಷ್ಯಾದಿಂದ ಕಚ್ಚಾತೈಲ ತರಿಸಿಕೊಳ್ಳುತ್ತಿರುವ ಕಾರಣಕ್ಕೆ ಅಮೆರಿಕ ಹಾಗೂ ಐರೋಪ್ಯ ಒಕ್ಕೂಟವು ‘ನ್ಯಾಯಸಮ್ಮತವಲ್ಲದ ಹಾಗೂ ಅಸಮಂಜಸವಾದ’ ರೀತಿಯಲ್ಲಿ ಭಾರತವನ್ನು ಗುರಿಯಾಗಿಸುತ್ತಿವೆ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ) ಪ್ರತಿಕ್ರಿಯಿಸಿದೆ.
- ಅಮೆರಿಕ ಹಾಗೂ ಐರೋಪ್ಯ ಒಕ್ಕೂಟ ರಷ್ಯಾ ಜೊತೆ ವ್ಯಾಪಾರ ಒಪ್ಪಂದವನ್ನು ಮುಂದುವರಿಸಿವೆ. ಭಾರತವೂ ಅದನ್ನೇ ಮಾಡುತ್ತಿದೆಯಷ್ಟೆ. ಇದರಲ್ಲಿ ಟೀಕಿಸುವಂತಹದ್ದು ಏನೂ ಇಲ್ಲ ಎಂದು ಎಂಇಎ ಹೇಳಿಕೆ ಬಿಡುಗಡೆ ಮಾಡಿದೆ.
- ರಷ್ಯಾದಿಂದ ಕಚ್ಚಾತೈಲ ತರಿಸಿಕೊಳ್ಳುತ್ತಿರುವ ಭಾರತದ ಸರಕುಗಳ ಮೇಲೆ ಸುಂಕವನ್ನು ಇನ್ನಷ್ಟು ಹೆಚ್ಚಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ ಕೆಲವೇ ಗಂಟೆಗಳಲ್ಲಿ ಎಂಇಎ ಈ ಹೇಳಿಯನ್ನು ಬಿಡುಗಡೆ ಮಾಡಿದೆ.
- ಮಾಸ್ಕೋದಿಂದ ಕಚ್ಚಾತೈಲವನ್ನು ಭಾರತ ಆಮದು ಮಾಡಿಕೊಳ್ಳುತ್ತಿರುವುದನ್ನು, ಉಕ್ರೇನ್ ಜೊತೆಗೆ ರಷ್ಯಾ ಸಂಘರ್ಷ ಶುರುವಾದ ನಂತರದಿಂದ ಅಮೆರಿಕ ಹಾಗೂ ಐರೋಪ್ಯ ಒಕ್ಕೂಟ ಟೀಕಿಸುತ್ತಾ ಬಂದಿವೆ. ಸಾಂಪ್ರದಾಯಿಕ ಪೂರೈಕೆದಾರರು ವ್ಯಾಪಾರ ಒಪ್ಪಂದದಿಂದ ವಿಮುಖರಾದ ಕಾರಣದಿಂದಾಗಿ ಭಾರತವು ರಷ್ಯಾದಿಂದ ಕಚ್ಚಾ ತೈಲ ತರಿಸಿಕೊಳ್ಳುತ್ತಿದೆ. ಜಾಗತಿಕವಾಗಿ ಇಂತಹ ವ್ಯಾಪಾರ ಒಪ್ಪಂದವನ್ನು ಈ ಮೊದಲು ಅಮೆರಿಕವೇ ಉತ್ತೇಜಿಸಿತ್ತು ಎಂದು ಸ್ಪಷ್ಟನೆ ನೀಡಿದೆ.
- ‘ರಷ್ಯಾದಿಂದ ಯುರೇನಿಯಂ ಹೆಕ್ಸಾಫ್ಲೋರೈಡ್ ಅನ್ನು ಅಮೆರಿಕ ಆಮದು ಮಾಡಿಕೊಳ್ಳುತ್ತಿದ್ದು, ಪರಮಾಣು ಯೋಜನೆಗೆ ಬಳಸಿಕೊಳ್ಳುತ್ತಿದೆ. ಇ.ವಿ ಉದ್ಯಮಕ್ಕೆ ಅಗತ್ಯವಿರುವ ಪಲೇಡಿಯಂ ಅನ್ನೂ ರಷ್ಯಾದಿಂದಲೇ ಅಮೆರಿಕ ಆಮದು ಮಾಡಿಕೊಳ್ಳು ತ್ತಿದೆ. ಇದಷ್ಟೇ ಅಲ್ಲದೆ, ಕೆಲವು ಕೀಟನಾಶಕಗಳು ಹಾಗೂ ರಾಸಾಯನಿಕಗಳನ್ನೂ ಆ ದೇಶದಿಂದ ಆಮದು ಮಾಡಿಕೊಳ್ಳುವುದನ್ನು ಅಮೆರಿಕ ಮುಂದು ವರಿಸಿದೆ. ನಮ್ಮನ್ನು ಟೀಕಿಸುತ್ತಿರುವ ದೇಶಗಳು ರಷ್ಯಾ ಜತೆಗೆ ವ್ಯಾಪಾರ ಒಪ್ಪಂದ ಮುಂದುವರಿಸಿವೆ ಎನ್ನುವುದಕ್ಕೆ ಇವೆಲ್ಲ ಉದಾಹರಣೆಗಳಷ್ಟೆ ಎಂದು ತಿಳಿಸಿದೆ.

## ❖ ‘ಆಲಮಟ್ಟಿ ಎತ್ತರ ಹೆಚ್ಚಳ- ಕರ್ನಾಟಕವನ್ನು ತಡೆಯಿರಿ’

- ಕೃಷ್ಣಾ ನದಿಗೆ ನಿರ್ಮಿಸಿರುವ ಆಲಮಟ್ಟಿ ಅಣೆಕಟ್ಟು ಎತ್ತರವನ್ನು ಹೆಚ್ಚಿಸುವ ಕರ್ನಾಟಕದ ನಿರ್ಧಾರವನ್ನು ತಡೆಯಬೇಕು ಎಂದು ಕೋರಿ ಮಹಾರಾಷ್ಟ್ರ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಅಣೆಕಟ್ಟೆಯ ಎತ್ತರ ಹೆಚ್ಚಳವಾದರೆ ಹಿನ್ನೀರಿನಿಂದ ಸಾಂಗ್ಲಿ, ಸತಾರಾ, ಕೊಲ್ಹಾಪುರ ಜಿಲ್ಲೆಯಲ್ಲಿ ಪ್ರವಾಹ ಉಂಟಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದೆ.
- ನವದೆಹಲಿಯ ಜಲಶಕ್ತಿ ಸಚಿವಾಲಯದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರನ್ನು ನಿಯೋಗದೊಂದಿಗೆ ಭೇಟಿಯಾಗಿ ಮನವಿ ಸಲ್ಲಿಸಿದ ಮಹಾರಾಷ್ಟ್ರ ಜಲಸಂಪನ್ಮೂಲ ಸಚಿವ ರಾಧಾಕೃಷ್ಣ ವಿಖೆ-ಪಾಟೀಲ, ‘ಕರ್ನಾಟಕ ಸರ್ಕಾರವು ಅಣೆಕಟ್ಟಿನ ಎತ್ತರವನ್ನು 519.60 ಮೀಟರ್‌ನಿಂದ 524.256 ಮೀಟರ್‌ಗೆ ಏರಿಸಲು ಪ್ರಸ್ತಾಪಿಸಿದೆ. ಇದರಿಂದ ಗಂಭೀರ ಪರಿಣಾಮ ಎದುರಾಗಲಿದೆ. ಇದಕ್ಕೆ ಸಂಬಂಧಿಸಿ, ಅಂಕಿಅಂಶ ಗಳನ್ನು ನಿಮ್ಮ ಮುಂದಿಡುತ್ತಿದ್ದೇವೆ. ಹೀಗಾಗಿ, ಕೇಂದ್ರ ಸರ್ಕಾರವು ಮಧ್ಯಪ್ರವೇಶಿಸಿ, ಅಣೆಕಟ್ಟೆ ಹೆಚ್ಚಳ ಪ್ರಸ್ತಾಪ ವನ್ನು ರದ್ದುಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

## ❖ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ನಿಧನ

- ಜಾರ್ಖಂಡ್ ರಾಜ್ಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಬುಡಕಟ್ಟು ಸಮುದಾಯದ ಹಿರಿಯ ಮುಖಂಡ, ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಸಂಸ್ಥಾಪಕ ಶಿಬು ಸೊರೇನ್(81) ಅವರು ನಿಧನರಾದರು.

**ಸಿಂಗ್ ಸರ್ಕಾರದ ಪಾಲಿಗೆ ಅಪತ್ಬಾಂದವ!**

- ಭಾರತ- ಅಮೆರಿಕ ಪರಮಾಣು ಒಪ್ಪಂದ ವಿರೋಧಿಸಿ 2008 ರಲ್ಲಿ ಎಡಪಕ್ಷಗಳು ಬೆಂಬಲವನ್ನು ಹಿಂಪಡೆದ ವೇಳೆ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರವು ಅಲ್ಪಮತಕ್ಕೆ ಕುಸಿದು ಸಂಸತ್ತಿನಲ್ಲಿ ವಿಶ್ವಾಸಮತ ಎದುರಿಸುವಂತಾಯಿತು. ಸಮ್ಮಿಶ್ರ ಸರ್ಕಾರ ಉಳಿಸಲು ಪ್ರತಿ ಮತವೂ ಮುಖ್ಯವಾಗಿತ್ತು.
- ಅವಿಶ್ವಾಸ ನಿರ್ಣಯಕ್ಕೂ ಕೆಲದಿನಗಳ ಮುನ್ನ ಜೆಎಂಎಂ ಸಂಸ್ಥಾಪಕ ಶಿಬು ಸೊರೇನ್ ಹಾಗೂ ಪಕ್ಷದ ನಾಲ್ವರು ಸಂಸದರ ಜೊತೆ ದಿಢೀರ್ ನಾಪತ್ತೆಯಾಗಿದ್ದರು. ಐದು ಮಂದಿ ಎಲ್ಲಿದ್ದಾರೆ ಎಂಬುದು ಕೇಂದ್ರ ತನಿಖಾ ಸಂಸ್ಥೆಗಳಿಗೂ ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ. ಎಲ್ಲರೂ ಅಜ್ಞಾತವಾಗಿಯೇ ಉಳಿದಿದ್ದರು. ಅವಿಶ್ವಾಸ ಮತದಾನದ ಹಿಂದಿನ ದಿನ ದೆಹಲಿಯ ಗೋಲ್ ಮಾರುಕಟ್ಟೆಯ ಹಿಂಭಾಗದ ಮನೆಯಲ್ಲಿ ಕಾಣಿಸಿಕೊಂಡಿದ್ದ ಅವರು, ಯುಪಿಎ ಸರ್ಕಾರಕ್ಕೆ ಬೆಂಬಲ ಮುಂದುವರಿಸುವುದಾಗಿ ಪುನರುಚ್ಚರಿಸಿದ್ದರು. ಮರುದಿನ ನಡೆದ ವಿಶ್ವಾಸಮತ ಯಾಚನೆಯಲ್ಲಿ ಯುಪಿಎ ಸರ್ಕಾರ ಬೆಂಬಲಿಸಿ, ಸಿಂಗ್ ಸರ್ಕಾರ ಉಳಿಸಿದ್ದರು.




## ❖ ಮೇಘಸ್ಫೋಟ: ಕೊಚ್ಚಿಹೋದ ಊರು

- ಮೇಘಸ್ಫೋಟ ಪರಿಣಾಮ ಉತ್ತರಾಖಂಡದ ಉತ್ತರಕಾಶಿಯಲ್ಲಿ ದಿಢೀರ್ ಪ್ರವಾಹ ಉಂಟಾಗಿದ್ದು, ಐವರು ಮೃತಪಟ್ಟು, ಇತರ 50 ಮಂದಿ ನಾಪತ್ತೆಯಾಗಿದ್ದಾರೆ
- ಧಾರಾಲಿ ಖೀರಗರ್ದ್ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಮಣ್ಣು ಮಿಶ್ರಿತ ನೀರು ರಭಸದಿಂದ ಹರಿಯುತ್ತಿದ್ದ ಪರಿಣಾಮ, ಹಲವಾರು ಮನೆಗಳು ಕೊಚ್ಚಿ ಹೋಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.
- **ಖೀರಗಂಗಾ ನದಿಯ ಜಲಾನಯನ ಪ್ರದೇಶದಲ್ಲಿ** ಮೇಘಸ್ಫೋಟ ಸಂಭವಿಸಿದ್ದರಿಂದ ದಿಢೀರ್ ಪ್ರವಾಹ ಕಂಡುಬಂದಿದೆ ಎಂದು ಸ್ಥಳೀಯರು ಹೇಳಿದ್ದಾರೆ.

## ❖ ಕೇಂದ್ರ-ರಾಜ್ಯ ಸಂಘರ್ಷ

- ಜನರಿಗೆ ಆರೋಗ್ಯ ಭರವಸೆ ಒದಗಿಸುವ 'ಆಯುಷ್ಮಾನ್ ಭಾರತ್' ಯೋಜನೆಯ ಅನುದಾನಕ್ಕೆ ಸಂಬಂಧಿಸಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವೆ ಸಂಘರ್ಷ ಏರ್ಪಟ್ಟಿದೆ.
- ಕೇಂದ್ರದಿಂದ ಹೆಚ್ಚಿನ ನೆರವು ಸಿಗದ ಕಾರಣ ಸದ್ಯ ರಾಜ್ಯ ಸರ್ಕಾರವೇ ಯೋಜನೆಯ ಶೇಕಡ 75ರಷ್ಟು ವೆಚ್ಚ ಭರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.
- ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಅನುಷ್ಠಾನಗೊಂಡಿರುವ ಕೇಂದ್ರ ಸರ್ಕಾರದ ಈ ಯೋಜನೆಯಡಿ, ಐದು ವರ್ಷಗಳಲ್ಲಿ ₹7,239 ಕೋಟಿ ಬಳಕೆ ಮಾಡಲಾಗಿದೆ.




### ಕೋಟಿ ದಾಟಿದ ಪ್ರಕರಣ

- ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆಯಡಿ ಚಿಕಿತ್ಸೆ ಪಡೆದು ಕೊಳ್ಳುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.
- 2020ರಲ್ಲಿ ಯೋಜನೆಯಡಿ ಚಿಕಿತ್ಸೆ ಪಡೆದವರ ವಾರ್ಷಿಕ ಸಂಖ್ಯೆ ಎಂಟು ಲಕ್ಷದ ಆಸುಪಾಸಿನಲ್ಲಿದ್ದರೆ, ಆ ಸಂಖ್ಯೆ 2024ರಲ್ಲಿ 35 ಲಕ್ಷ ದಾಟಿದೆ. ಐದು ವರ್ಷಗಳಲ್ಲಿ 1.09 ಕೋಟಿ ಪ್ರಕರಣ ಗಳಲ್ಲಿ ಚಿಕಿತ್ಸೆ ಒದಗಿಸಲಾಗಿದೆ.
- ಕೇಂದ್ರದಿಂದ ₹2,056.60 ಕೋಟಿ ಅನುದಾನ ಬಿಡುಗಡೆಯಾಗಿದ್ದರೆ, ಉಳಿದ ₹5,183.19 ಕೋಟಿ ಹಣವನ್ನು ರಾಜ್ಯ ಸರ್ಕಾರವೇ ಭರಿಸಿದೆ.
- **ಯೋಜನೆಯ ನಿಯಮದ ಪ್ರಕಾರ, ಕೇಂದ್ರ ಸರ್ಕಾರ ಶೇ 60ರಷ್ಟು ಹಾಗೂ ರಾಜ್ಯ ಸರ್ಕಾರ ಶೇ 40ರಷ್ಟು ಅನುದಾನ ಒದಗಿಸಬೇಕು.**

- ***ಆಯುಷ್ಮಾನ್ ಮಿಷನ್ ಅಡಿ 2018ರಲ್ಲಿ ಪ್ರಾರಂಭವಾಗಿರುವ ಈ ಯೋಜನೆಯನ್ನು, ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಹೆಸರಿನಲ್ಲಿ ಅನುಷ್ಠಾನ ಮಾಡಲಾಗಿದೆ.***
- ***ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ.***
- ***ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು 'ಆಯುಷ್ಮಾನ್ ಭಾರತ್' ಯೋಜನೆ ವ್ಯಾಪ್ತಿಗೆ ಬರಲಿವೆ. ಉಳಿದ ಕುಟುಂಬಗಳನ್ನು 'ಆರೋಗ್ಯ ಕರ್ನಾಟಕ' ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ.***
- ***ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ.***

- ಈ ಅನುದಾನದ ಸಂಘರ್ಷದಿಂದಲೇ 70 ವರ್ಷ ಮೇಲ್ಪಟ್ಟವರಿಗೆ ಆರೋಗ್ಯ ವಿಮೆ ಒದಗಿಸುವ, 'ಆಯುಷ್ಮಾನ್ ವಯೋ ವಂದನಾ' ಯೋಜನೆಯೂ ರಾಜ್ಯದಲ್ಲಿ ಜಾರಿಯಾಗಿಲ್ಲ.

- ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಿಗೂ ಚಿಕಿತ್ಸೆಗೆ ಅನುಸಾರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಣ ಬಿಡುಗಡೆ ಮಾಡುತ್ತಿದೆ. ಈ ಹಣವನ್ನು ಆಸ್ಪತ್ರೆಗಳ ಅಭಿವೃದ್ಧಿ ಹಾಗೂ ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ಪ್ರೋತ್ಸಾಹ ಧನ ಒದಗಿಸಲು ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಯೋಜನೆಯಡಿ ವಿವಿಧ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ.

### ❖ ಹೃದಯ ಸಮಸ್ಯೆ ಪತ್ತೆಗಾಗಿ ಎಐ ಮಾದರಿ ಅಭಿವೃದ್ಧಿ

- 'ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಂಡು ಕೇವಲ ಹತ್ತು ಸೆಕೆಂಡ್‌ಗಳಲ್ಲಿ ಹೃದಯ ಸಮಸ್ಯೆ ಪತ್ತೆ ಮಾಡುವ ಮಾದರಿಯನ್ನು ಅಭಿವೃದ್ಧಿ ಪಡಿಸಲಾಗಿದೆ' ಎಂದು ನಾರಾಯಣ ಹೆಲ್ತ್ ತಿಳಿಸಿದೆ.
- 'ಒಂದು ಲಕ್ಷಕ್ಕೂ ಹೆಚ್ಚು ಇಸಿಜಿ ಚಿತ್ರಣಗಳು ಮತ್ತು 'ಎಕೋಕಾರ್ಡಿ ಯೋಗ್ರಾಮ್' ವರದಿಗಳ ಜೋಡಣೆಯ ಆಧಾರದ ಮೇಲೆ ಎಐ ಮಾದರಿಯನ್ನು ತರಬೇತಿಗೊಳಿಸಲಾಗಿದೆ. ಈ ಮಾದರಿಯು ಅತ್ಯುತ್ತಮ ಫಲಿತಾಂಶವನ್ನು ಒದಗಿಸಿದೆ.
- 'ವೈದ್ಯಕೀಯ ಪರಿಣತಿ, ಸಂಶೋಧನೆ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಸಂಯೋಜನೆಯಿಂದ ಈ ಮಾದರಿ ಅಭಿವೃದ್ಧಿಪಡಿಸಲಾಗಿದೆ. ಸರಳ ಇಸಿಜಿಯ ಮೂಲಕ ಹೃದಯ ವೈಫಲ್ಯವನ್ನು ತಕ್ಷಣವೇ ಪತ್ತೆ ಮಾಡಿ, ರೋಗ ನಿರ್ಣಯಿಸಲು ಸಹಕಾರಿಯಾಗಲಿದೆ.

### ❖ ಕಸಾಪಗೆ ಮನ್‌ಪ್ರೀತ್ ಸಿಂಗ್ ನಾಮನಿರ್ದೇಶನ

- ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಕಾರ್ಯಕಾರಿ ಸಮಿತಿಯ ಸಂಘ ಸಂಸ್ಥೆಗಳ ಪ್ರತಿನಿಧಿ ಯಾಗಿ ಮನ್‌ಪ್ರೀತ್ ಸಿಂಗ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.
- 'ಮನ್‌ಪ್ರೀತ್ ಸಿಂಗ್ ಅವರು ಸಿಖ್ ಸಮುದಾಯಕ್ಕೆ ಸೇರಿದ್ದರೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅಗಾಧ ಪ್ರೀತಿ ಹೊಂದಿದ್ದಾರೆ. ಸಂಘ ಸಂಸ್ಥೆಗಳ ಜತೆಗೆ ಒಡನಾಟ ಹೊಂದಿದ್ದಾರೆ.

### ❖ ಇ-----ರೂಪಾಯಿ ಕೊಳೆಯಾಗದು ಕಳೆದುಹೋಗದು

- ಕಳೆದ ಆರು ಹಣಕಾಸು ವರ್ಷಗಳಲ್ಲಿ ಭಾರತೀಯರು 65 ಸಾವಿರ ಕೋಟಿ ಬಾರಿ ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್ಫೇಸ್), ಸರಳವಾಗಿ ಹೇಳಬಹುದಾದರೆ, 'ಆನ್‌ಲೈನ್ ಪೇಮೆಂಟ್' ವ್ಯವಸ್ಥೆ ಬಳಸಿ ಹಣಕಾಸು ವಹಿವಾಟು ನಡೆಸಿದ್ದು, 12 ಸಾವಿರ ಟ್ರಿಲಿಯನ್ ರೂಪಾಯಿ ವ್ಯವಹಾರ ನಡೆಸಿದ್ದಾರೆ ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ತಿಳಿಸಿತ್ತು.
- ಕೈಯಲ್ಲಿ ಅಥವಾ ಸಾಂಪ್ರದಾಯಿಕ ಪರ್ಸ್‌ನಲ್ಲಿ ನೋಟುಗಳಿಲ್ಲದೆಯೇ, ಡಿಜಿಟಲ್ ಪಾವತಿ ಮೂಲಕ ಈ ವಹಿವಾಟು ನಡೆದಿದೆ. ಯುಪಿಐ ವ್ಯವಸ್ಥೆಯಲ್ಲಿ ಗೂಗಲ್ ಪೇ, ಭೀಮ್ ಆ್ಯಪ್, ಫೋನ್‌ಪೇ, ಪೇಟಿಎಂ ಮುಂತಾದ ಅದೆಷ್ಟೋ ಡಿಜಿಟಲ್ ವ್ಯಾಲೆಟ್‌ಗಳ (ಡಿಜಿಟಲ್ ಪರ್ಸ್ ಅಂತ ಹೇಳಬಹುದು) ಮೂಲಕ ಈ ವಹಿವಾಟು ನಡೆದಿದ್ದು, ಜನರು ನಗದು ಹಣವನ್ನು ಕೈಯಲ್ಲಿರಿಸಿಕೊಳ್ಳುವುದು ಕಡಿಮೆಯಾಗುತ್ತಿದೆ. ಈ ಡಿಜಿಟಲ್ ಕ್ರಾಂತಿಗೆ **ಮತ್ತೊಂದು ಸೇರ್ಪಡೆ ಇ-ರುಪೀ (e-₹) ಅಥವಾ ಡಿಜಿಟಲ್ ರೂಪಾಯಿ.**

**<u>ಏನಿದು ಡಿಜಿಟಲ್ ರೂಪಾಯಿ ಅಥವಾ e-₹?</u>**

- ಡಿಜಿಟಲ್ ರೂಪಾಯಿ ಅಥವಾ ಇ-₹ ಎಂಬುದು **ಭಾರತದ ಕೇಂದ್ರೀಯ ಬ್ಯಾಂಕಿನ ಡಿಜಿಟಲ್ ಕರೆನ್ಸಿ (ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ - CBDC).**
- ಸರಳವಾಗಿ ಹೇಳುವುದಾದರೆ ನಮ್ಮ ಪರ್ಸಿನಲ್ಲಿ ಇರುವ ನೋಟುಗಳ ಬದಲಾಗಿ, ನಮ್ಮದೇ ಆನ್‌ಲೈನ್ ಪರ್ಸ್‌ನಲ್ಲಿ ಇರಿಸುವ ಹಣ.
- ಆದರೆ, ಜೇಬಿನಲ್ಲಿರುವ ದುಡ್ಡಿನಂತೆಯೇ ಈ ಪರ್ಸ್‌ನಲ್ಲಿರುವ ಹಣಕ್ಕೂ ಬಡ್ಡಿ ದೊರೆಯುವುದಿಲ್ಲ.
- ಡಿಜಿಟಲ್ ವ್ಯಾಲೆಟ್ ತೆರೆದು ನೋಡಿದರೆ, ಅದರಲ್ಲಿ ನಾವು ಹಾಕಿದ ಹಣದ ಮೊತ್ತವು, ₹ 500, 200, 100, 20, 10, 5, 1. ಹೀಗೆ ನೋಟುಗಳು ಹಾಗೂ ನಾಣ್ಯಗಳ ರೂಪದಲ್ಲಿ ಗೋಚರಿಸುತ್ತವೆ.

**ಇ-ರೂಪಾಯಿ ಹೇಗೆ ಕೆಲಸ ಮಾಡುತ್ತದೆ?**

- ಬಹುತೇಕ ಈಗಿನ ಯುಪಿಐ (ಗೂಗಲ್‌ಪೇ-ಫೋನ್‌ಪೇ) ಮಾದರಿಯಲ್ಲೇ, ಒಂದು ಆ್ಯಪ್ ಮೂಲಕ ಇದು ಕೆಲಸ ಮಾಡುತ್ತದೆ.
- ಸದ್ಯಕ್ಕೆ ಇದು ಬೆಂಗಳೂರು ಸಹಿತ ಪ್ರಮುಖ ನಗರಗಳಲ್ಲಿ ಪ್ರಾಯೋಗಿಕವಾಗಿ (ಪೈಲಟ್) ಚಾಲ್ತಿಗೆ ಬಂದಿದೆ.
- ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಥವಾ ನಿರ್ದಿಷ್ಟ ಮೊಬೈಲ್ ಸಂಖ್ಯೆಗೆ (ಈ ಸಂಖ್ಯೆಯೂ ಇ-ರೂಪಾಯಿ ಬಳಕೆಗೆ ನೋಂದಾಯಿಸಿರಬೇಕು) ಹಣ ವರ್ಗಾಯಿಸಬಹುದು.

**ಗೂಗಲ್‌ಪೇ-ಫೋನ್‌ಪೇಗಿಂತ ಇ-ರೂಪಾಯಿ ಹೇಗೆ ಭಿನ್ನ?**

- ಗೂಗಲ್‌ಪೇ ಅಥವಾ ಫೋನ್‌ಪೇ ಆ್ಯಪ್‌ಗಳು ಎರಡು ಬ್ಯಾಂಕುಗಳ ನಡುವೆ ಮಧ್ಯವರ್ತಿ ರೂಪದಲ್ಲಿ ಕೆಲಸ ಮಾಡುತ್ತವೆ.
- ಆದರೆ ರಿಸರ್ವ್ ಬ್ಯಾಂಕ್ ರೂಪಿಸಿರುವ ಈ ಡಿಜಿಟಲ್ ರೂಪಾಯಿ ವ್ಯವಸ್ಥೆಯಲ್ಲಿ ಎರಡು ಬ್ಯಾಂಕುಗಳು ನೇರವಾಗಿ ಸಂವಹನ ಮಾಡಿಕೊಳ್ಳುತ್ತವೆ.
- ಯುಪಿಐ ಅಥವಾ ಬ್ಯಾಂಕಿನ ಸರ್ವರ್ ಕೈಕೊಟ್ಟಾಗ, ನಡುವೆ ಸಿಲುಕಿಕೊಳ್ಳುವ ಹಣ ವಾಪಸ್ ಬರಲು ಕಾಯಬೇಕಾಗಬಹುದು. ಆದರೆ, 'ಇ-ಪರ್ಸ್' ನಲ್ಲಿ ಹಾಗಾಗದು. ಇದಕ್ಕೆ ಥರ್ಡ್ ಪಾರ್ಟಿ ಆ್ಯಪ್ ಬೇಕಾಗಿರುವುದಿಲ್ಲ, ನಮ್ಮದೇ ಬ್ಯಾಂಕಿನ ಆ್ಯಪ್ ಬಳಸಿದರೆ ಸಾಕಾಗುತ್ತದೆ.
- ಹಣ ಲೋಡ್ ಮಾಡುವುದು (ಡಿಜಿಟಲ್ ಪರ್ಸ್‌ಗೆ ತುಂಬಿಸುವುದು) ಮತ್ತು ಪರ್ಸ್‌ನಿಂದ ಮರಳಿ ಬ್ಯಾಂಕ್ ಖಾತೆಗೆ ವರ್ಗಾಯಿಸುವುದು ತತ್‌ಕ್ಷಣದಲ್ಲೇ ಆಗುತ್ತದೆ.
- ಮುಂದಿನ ದಿನಗಳಲ್ಲಿ, ಇಂಟರ್ನೆಟ್ ಸೌಕರ್ಯದ ಅಗತ್ಯವಿಲ್ಲದೆಯೇ ಇ-ರೂಪಾಯಿ ಬಳಕೆಗೆ ಅವಕಾಶ ಮಾಡಿಕೊಡುವ ಬಗ್ಗೆ ತಂತ್ರಜ್ಞಾನದ ಅಭಿವೃದ್ಧಿ ಆಗುತ್ತಿದೆ.
- ಇದಕ್ಕೆ ಆಯಾ ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವ ಫೋನ್ ನಂಬರ್ ಸಾಕಾಗುತ್ತದೆ.
- ಈ ರೀತಿಯ ಆಫ್‌ಲೈನ್ ಬಳಕೆ ವ್ಯವಸ್ಥೆಯು ಕಾರ್ಯರೂಪಕ್ಕೆ ಬಂದರೆ ವಿಶೇಷವಾಗಿ ಗ್ರಾಮೀಣ ಹಾಗೂ ಇಂಟರ್ನೆಟ್ ತಲುಪದಿರುವ ಊರುಗಳಿಗೆ ವರದಾನವಾಗಲಿದೆ.
- **ಸದ್ಯಕ್ಕೆ ನಮ್ಮ ಡಿಜಿಟಲ್ ಪರ್ಸ್‌ನಲ್ಲಿ ಗರಿಷ್ಠ ₹1 ಲಕ್ಷ ಮಾತ್ರ ಇರಿಸಬಹುದು ಹಾಗೂ ದಿನಕ್ಕೆ ₹25,000 ವಹಿವಾಟು ನಡೆಸಬಹುದಾಗಿದೆ.**


**ಇ-ರೂಪಾಯಿ ಬಳಕೆ ಎಷ್ಟು ಸುರಕ್ಷಿತ?**

- ಇದು ಯುಪಿಐ ಆಧಾರಿತವೂ ಅಲ್ಲ, ಬಿಟ್‌ಕಾಯಿನ್‌ಗಳಂತಹ ಕ್ರಿಪ್ಟೋಕರೆನ್ಸಿಯೂ ಅಲ್ಲ. ನಮ್ಮಲ್ಲಿರುವ ಹಣವನ್ನು ಆನ್‌ಲೈನ್ ಪರ್ಸ್‌ನಲ್ಲಿ ಇರಿಸಲು ಅತ್ಯಂತ ಸುರಕ್ಷಿತ ಮಾದರಿ ಇದು.
- ನಮ್ಮ ಜೇಬಿನಲ್ಲಿರುವ ಪರ್ಸ್ ಕಳೆದುಹೋದರೆ ಸಿಗುವುದು ಕಷ್ಟ. ಆದರೆ, ಇ-ರೂಪಾಯಿ ಆ್ಯಪ್ ಇರುವ ಫೋನ್ ಕಳೆದುಹೋದರೆ ನಮ್ಮ ಡಿಜಿಟಲ್ ಪರ್ಸ್‌ನಲ್ಲಿರುವ ಹಣಕ್ಕೇನೂ ಆಗದು. ಬೇರೆ ಸಾಧನದಲ್ಲಿ ಆ್ಯಪ್ ಅಳವಡಿಸಿ ಪುನಃ ಲಾಗಿನ್ ಆಗಬಹುದು.

# ಉದ್ದೀಪನ ಮದ್ದು ತಡೆ ನಾಡಾಗೆ ಸ್ವಾತಂತ್ರ್ಯ

## 2022ರ ಕಾಯ್ದೆಗೆ 'ವಾಡಾ' ಮಾನದಂಡಗಳ ಅನ್ವಯ ತಿದ್ದುಪಡಿ

ಕ್ರೀಡಾಕ್ಷೇತ್ರದಲ್ಲಿ ಉದ್ದೀಪನ ಮದ್ದು ಸೇವನೆಗೆ ತಡೆ ಒಡ್ಡುವ ಕ್ರಮಗಳನ್ನು ಉತ್ತೇಜಿಸಲು ಮತ್ತು ಬಲಪಡಿಸಲು ಕೇಂದ್ರ ಸರ್ಕಾರವು ಉದ್ದೀಪನ ಮದ್ದು ತಡೆ (ತಿದ್ದುಪಡಿ) ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿ, ಅಂಗೀಕರಿಸಿದೆ. ಇದು 2022ರ ಉದ್ದೀಪನ ಮದ್ದು ತಡೆ ಕಾಯ್ದೆಯ ಪರಿಷ್ಕೃತ ರೂಪವಾಗಿದೆ. ಇದು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಸಂಸ್ಥೆಯನ್ನು (ನಾಡಾ) ಸರ್ಕಾರದ ನಿಯಂತ್ರಣದಿಂದ ಮುಕ್ತ ಮಾಡಲಿದೆ. ಮೇಲ್ಮನವಿ ಸಮಿತಿಯ ಸ್ವತಂತ್ರ ಕಾರ್ಯನಿರ್ವಹಣೆ, ನಾಡಾಗೆ ಹೆಚ್ಚು ಅಧಿಕಾರ, ಸಣ್ಣ ಮಟ್ಟದ ಅಥವಾ ಆಕಸ್ಮಿಕ ಉಲ್ಲಂಘನೆಯ ಪ್ರಕರಣಗಳಲ್ಲಿ ಕ್ರೀಡಾಪಟುಗಳಿಗೆ ಕಡಿಮೆ ದಂಡ ವಿಧಿಸಲು ಅನುವಾಗುವಂತೆ ತಿದ್ದುಪಡಿ ಮಾಡಲಾಗಿದೆ. ಉದ್ದೀಪನ ಮದ್ದು ತಡೆ (ತಿದ್ದುಪಡಿ) ಕಾಯ್ದೆ ತರುವ ಉದ್ದೇಶವು ಉದ್ದೀಪನ ಮದ್ದು ಸೇವನೆ ತಡೆಯುವ, ಕ್ರೀಡಾ ವ್ಯವಸ್ಥೆಯನ್ನು ಸುಧಾರಿಸುವ ಭಾರತ ಪ್ರಯತ್ನದ ಭಾಗವಾಗಿದೆ



ಪ್ರಜಾವಾಣಿ ವಾರ್ತೆ

ಭಾರತದ ಕ್ರೀಡಾ ಕ್ಷೇತ್ರದಲ್ಲಿ ಉದ್ದೀಪನ ಮದ್ದು ಸೇವನೆ ಪ್ರಕರಣಗಳು ಹೆಚ್ಚಾಗಿದ್ದು, ದೇಶವು ಜಗತ್ತಿನಲ್ಲಿಯೇ ಮುಂಚೂಣಿಯಲ್ಲಿದೆ. ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವಿಸುವುದನ್ನು ತಡೆಯುವ, ಅವರನ್ನು ಪರೀಕ್ಷಿಸುವ ಮತ್ತು ತಪ್ಪು ಮಾಡಿದ್ದರೆ ಶಿಕ್ಷಿಸುವ ಉದ್ದೇಶದಿಂದ 2022ರಲ್ಲಿ ಕಾಯ್ದೆಯನ್ನು ರೂಪಿಸಲಾಗಿತ್ತು. ಆದರೆ, ಅದಕ್ಕೆ ವಿಶ್ವ ಉದ್ದೀಪನ ಮದ್ದು ಸೇವನೆ ತಡೆ ಸಮಿತಿ (ವಾಡಾ) ಆಕ್ಷೇಪಣೆಗಳನ್ನು ವ್ಯಕ್ತಪಡಿಸಿತ್ತು. ಹೀಗಾಗಿ ಅದನ್ನು ಜಾರಿ ಮಾಡಿರಲಿಲ್ಲ.

ಆ ಕಾಯ್ದೆಯಲ್ಲಿ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಮಂಡಳಿ (ನ್ಯಾಷನಲ್ ಬೋರ್ಡ್ ಫಾರ್ ಆ್ಯಂಟಿ-ಡೋಪಿಂಗ್ ಇನ್ ಸ್ಪೋರ್ಟ್ಸ್) ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿತ್ತು. ಈ ಮಂಡಳಿಯಿಂದಾಗಿ, ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಸಂಸ್ಥೆ (ನಾಡಾ) ಮತ್ತು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಮೇಲ್ಮನವಿ ಸಮಿತಿಗಳ ಮೇಲೆ ಸರ್ಕಾರವು ಹೆಚ್ಚು ನಿಯಂತ್ರಣ ಹೊಂದಲು ಅನುಕೂಲವಾಗುತ್ತದೆ ಎನ್ನುವುದು 'ವಾಡಾ' ಮುಖ್ಯ ಆಕ್ಷೇಪಣೆಯಾಗಿತ್ತು.

**ಸರ್ಕಾರದ ನಿಯಂತ್ರಣಕ್ಕೆ ವಿರೋಧ:** ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಮಂಡಳಿಯ ಸದಸ್ಯರನ್ನು ಕೇಂದ್ರ ಸರ್ಕಾರವೇ ನೇರವಾಗಿ ಆಯ್ಕೆ ಮಾಡುತ್ತದೆ. ಅದು 'ನಾಡಾ'ವನ್ನು ಮೇಲುಸ್ತುವಾರಿ ಮಾಡುವ ಅಧಿಕಾರ ಹೊಂದಿರುತ್ತದೆ ಮತ್ತು ಉದ್ದೀಪನ ಮದ್ದು ತಡೆ ಸಂಬಂಧ ನಿಯಮಗಳನ್ನು ರೂಪಿಸುತ್ತದೆ ಎಂದು 2022ರ ಕಾಯ್ದೆಯಲ್ಲಿ ಹೇಳಲಾಗಿತ್ತು. ಆದರೆ, ಈ ಅಂಶಗಳು 'ವಾಡಾ' ನಿರ್ದಿಷ್ಟಪಡಿಸಿರುವ ಅಂತರರಾಷ್ಟ್ರೀಯ ಮಾನದಂಡಗಳಿಗೆ ವಿರುದ್ಧವಾಗಿವೆ ಎನ್ನುವುದು ಅದರ ಆಕ್ಷೇಪಣೆಯಾಗಿತ್ತು. ರಾಜಕೀಯ, ಆಡಳಿತಾತ್ಮಕ ಹಸ್ತಕ್ಷೇಪವಿಲ್ಲದಂತೆ 'ನಾಡಾ' ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು ಎನ್ನುವುದು 'ವಾಡಾ' ವಾದವಾಗಿತ್ತು. ಈ ಮಸೂದೆಯನ್ನು ಕಾಯ್ದೆಯನ್ನಾಗಿ ಜಾರಿ ಮಾಡಿದರೆ, ಭಾರತದ ಮೇಲೆ ನಿಷೇಧ ಹೇರುವುದಲ್ಲದೇ, ದೆಹಲಿಯಲ್ಲಿರುವ ಉದ್ದೀಪನ ಮದ್ದು ಪ್ರಯೋಗಾಲಯದ (ಎನ್‌ಡಿಟಿಎಲ್) ಮಾನ್ಯತೆ ರದ್ದುಪಡಿಸುವುದಾಗಿಯೂ 'ವಾಡಾ' ಎಚ್ಚರಿಕೆ ನೀಡಿತ್ತು. ನಂತರ ಭಾರತದ ಕ್ರೀಡಾ ಸಚಿವಾಲಯವು 'ವಾಡಾ' ಅಧಿಕಾರಿಗಳೊಂದಿಗೆ ವಿಸ್ತೃತ ಚರ್ಚೆ ನಡೆಸಿತ್ತು.

ಕೇಂದ್ರ ಕ್ರೀಡಾ ಸಚಿವರ ನೇತೃತ್ವದ ಆಡಳಿತ ಮಂಡಳಿಯು 'ನಾಡಾ'ದ ಉಸ್ತುವಾರಿ ಮತ್ತು ನಿಯಂತ್ರಣ ಅಧಿಕಾರವನ್ನು ಹೊಂದುವುದಕ್ಕೆ 'ವಾಡಾ' ತೀವ್ರವಾಗಿ ಆಕ್ಷೇಪಿಸಿತ್ತು. ಉದ್ದೀಪನ ಮದ್ದು ತಡೆ ಸಂಸ್ಥೆಗಳು (ಎನ್‌ಎಡಿಓ) ಸರ್ಕಾರದ ನಿಯಂತ್ರಣದಲ್ಲಿದ್ದರೆ, ಹಿತಾಸಕ್ತಿ ಸಂಘರ್ಷ ಉಂಟಾಗುತ್ತದೆ. ಹೀಗಾಗಿ ಅದು ಸ್ವತಂತ್ರ ಸಂಸ್ಥೆಯಾಗಿರಬೇಕು ಎನ್ನುವುದು 'ವಾಡಾ' ಅಭಿಪ್ರಾಯ. ತಿದ್ದುಪಡಿ ಮಸೂದೆಯಲ್ಲಿ ಮಂಡಳಿಯನ್ನು ಹಾಗೇ ಉಳಿಸಲಾಗಿದೆ. ಆದರೆ, 'ನಾಡಾ' ಮತ್ತು ಮೇಲ್ಮನವಿ ಸಮಿತಿಯ ಮೇಲೆ ಸರ್ಕಾರ/ಮಂಡಳಿಗೆ ನಿಯಂತ್ರಣ ಹೇರಲು ಇರುವ ಅವಕಾಶಗಳನ್ನು ತೆಗೆದುಹಾಕಲಾಗಿದೆ; ನಾಡಾ ಮತ್ತು ಮೇಲ್ಮನವಿ ಸಮಿತಿಯು ಸ್ವತಂತ್ರವಾಗಿ ಮತ್ತು 'ವಾಡಾ' ರೂಪಿಸಿರುವ ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.

**ದಂಡ ಕಡಿಮೆ:** ಹಾಗೆಯೇ ಉದ್ದೀಪನ ಮದ್ದು ಸೇವನೆ ಪ್ರಕರಣಗಳಲ್ಲಿ ಕ್ರೀಡಾಪಟುಗಳನ್ನು ಹೇಗೆ ಉತ್ತರದಾಯಿಗಳನ್ನಾಗಿಸಬೇಕು ಎನ್ನುವ ಅಂಶವನ್ನೂ ತಿದ್ದುಪಡಿ ಮಾಡಲಾಗಿದೆ. ನಿದರ್ಶನಕ್ಕೆ, ಸಣ್ಣ ಮಟ್ಟದ ಅಥವಾ ಆಕಸ್ಮಿಕ ಉಲ್ಲಂಘನೆಯ ಪ್ರಕರಣಗಳಲ್ಲಿ, ಕಡಿಮೆ ದಂಡ ವಿಧಿಸಲು ಅನುವಾಗುವಂತೆ ತಿದ್ದುಪಡಿ ಮಾಡಲಾಗಿದೆ.


ದೇಶದಲ್ಲಿ ಉದ್ದೀಪನ ಮದ್ದು ಸೇವನೆಯನ್ನು ನಿಯಂತ್ರಿಸಲು 'ನಾಡಾ'ಗೆ ಮಸೂದೆಯು ಶಾಸನಬದ್ಧ ಅಧಿಕಾರವನ್ನು ನೀಡುತ್ತದೆ. ಮಸೂದೆಯ ಪ್ರಕಾರ, ಆಟಗಾರರಷ್ಟೇ ಅಲ್ಲ, ಕೋಚ್‌ಗಳು, ವೈದ್ಯರು, ತರಬೇತುದಾರರು ಮತ್ತು ನೆರವಿನ ಸಿಬ್ಬಂದಿಯೂ ಉದ್ದೀಪನ ಮದ್ದು ಸೇವನೆ ಮಾಡುವಂತಿಲ್ಲ. ನಿಯಮ ಮೀರಿದವರು ವಜಾ, ದಂಡದ ಜತೆಗೆ ಪ್ರಶಸ್ತಿ ಪದಕಗಳನ್ನೂ ಕಳೆದುಕೊಳ್ಳಬೇಕಾಗುತ್ತದೆ. ಅವರು ಸ್ಪರ್ಧೆಗಳಲ್ಲಿ ಪಾಲ್ಗೊಳ್ಳದಂತೆ ಅನರ್ಹರನ್ನಾಗಿ ಮಾಡಲಾಗುತ್ತದೆ. ಪರೀಕ್ಷೆ ಮತ್ತು ನಿರ್ವಹಣೆಯ ದೃಷ್ಟಿಯಿಂದ ಕ್ರೀಡಾಪಟುಗಳಿಂದ ದತ್ತಾಂಶ ಸಂಗ್ರಹಿಸಲೂ ಅವಕಾಶ ಕಲ್ಪಿಸಲಾಗಿದೆ. ಆದರೆ, ನಿಜವಾಗಿಯೂ ಅಗತ್ಯ ಇದೆ ಅನ್ನಿಸಿದವರಿಗೆ ವೈದ್ಯಕೀಯ ಬಳಕೆಗೆ (ಟಿಯುಇ) ಮಾತ್ರ ಅವಕಾಶ ನೀಡಲಾಗಿದೆ.

**ಸುಧಾರಣೆ ತರುವ ಯತ್ನ:** ಉದ್ದೀಪನ ಮದ್ದು ತಡೆ ಕಾಯ್ದೆ ತರುವ ಉದ್ದೇಶವು ದೇಶದ ಕ್ರೀಡಾ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನದ ಭಾಗವಾಗಿದೆ. ಭಾರತದ ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವನೆ ಮಾಡುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಈ ಮಸೂದೆ ಮಹತ್ವ ಪಡೆದುಕೊಂಡಿದೆ. ಉದ್ದೀಪನ ಮದ್ದು ಸೇವಿಸಿದವರಿಗೆ ದಂಡ ಮತ್ತು ಶಿಕ್ಷೆ ವಿಧಿಸುವ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಹಾಗೂ ಪ್ರಾಮಾಣಿಕ ಕ್ರೀಡಾಪಟುಗಳ ಹಕ್ಕು ಮತ್ತು ವೃತ್ತಿಜೀವನ ರಕ್ಷಣೆಯ ಗುರಿ ಹೊಂದಿದೆ. ಈ ಮಸೂದೆಯು ಕಾಯ್ದೆಯಾಗಿ ಜಾರಿಯಾದರೆ, ಜಗತ್ತಿನ ಕ್ರೀಡಾ ಆಡಳಿತದಲ್ಲಿ ಪ್ರಮುಖ ಪಾಲುದಾರ ರಾಷ್ಟ್ರವಾಗಿರುವ ಭಾರತದ ಸ್ಥಾನ ಮತ್ತಷ್ಟು ಭದ್ರವಾಗಲಿದೆ; 'ವಾಡಾ' ಜತೆಗಿನ ದೇಶದ ಸಮಸ್ಯೆ, ಸಂಘರ್ಷಗಳಿಗೂ ಪರಿಹಾರ ಸಿಗಲಿದೆ ಎನ್ನಲಾಗುತ್ತಿದೆ.

ಆಧಾರ: ಪಿಟಿಐ, ಮಾಧ್ಯಮ ವರದಿಗಳು

## ಮಸೂದೆಯಲ್ಲಿನ ಇತರ ಅಂಶಗಳು

- ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಮೇಲ್ಮನವಿ ಸಮಿತಿಯ ನಿರ್ಧಾರದ ವಿರುದ್ಧ ಸ್ವಿಟ್ಜರ್ಲೆಂಡ್‌ನಲ್ಲಿರುವ ಅಂತರರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ (ಸಿಎಎಸ್) ಮೆಟ್ಟಿಲೇರುವುದಕ್ಕೆ ನಿರ್ದಿಷ್ಟ ಕ್ರೀಡಾ ಸಂಸ್ಥೆಗಳಿಗೆ ಮಾತ್ರ ಈ ಮಸೂದೆ ಅವಕಾಶ ನೀಡುತ್ತದೆ. 'ವಾಡಾ', ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ), ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (ಐಪಿಸಿ) ಮತ್ತು ಅಂತರರಾಷ್ಟ್ರೀಯ ಕ್ರೀಡಾ ಒಕ್ಕೂಟಗಳು ಅಂತರರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿಯ ನಿಯಮಗಳು ಹಾಗೂ ಸಂಹಿತೆಯ ಅನುಸಾರ ಮೇಲ್ಮನವಿ ಸಲ್ಲಿಸಬಹುದು
- ಅಂತರರಾಷ್ಟ್ರೀಯ ಕ್ರೀಡಾಪಟುಗಳು ಅಥವಾ ಅಂತರರಾಷ್ಟ್ರೀಯ ಕ್ರೀಡಾ ಕೂಟಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಉದ್ದೀಪನ ಮದ್ದು ತಡೆ ಶಿಸ್ತು ಸಮಿತಿಯ ನಿರ್ಧಾರದ ವಿರುದ್ಧ ಸಿಎಎಸ್‌ನಲ್ಲಿ ನೇರವಾಗಿ ಮೇಲ್ಮನವಿ ಸಲ್ಲಿಸುವುದಕ್ಕೂ ಮಸೂದೆ ಅವಕಾಶ ನೀಡುತ್ತದೆ. ಶಿಸ್ತು ಸಮಿತಿಯ ತೀರ್ಮಾನದಿಂದ ತೊಂದರೆಗೆ ಒಳಗಾದ ಕ್ರೀಡಾಪಟು, 'ನಾಡಾ', ಅಂತರರಾಷ್ಟ್ರೀಯ ಒಕ್ಕೂಟ, 'ವಾಡಾ', ಐಒಸಿ, ಮತ್ತು ಐಪಿಸಿಗಳು ಮೇಲ್ಮನವಿ ಸಲ್ಲಿಸಬಹುದು. ಅಲ್ಲದೇ 'ನಾಡಾ'ದ ನಿರ್ಧಾರದ ವಿರುದ್ಧ, ಭಾರತದಲ್ಲಿ ಬೇರೆ ಯಾರೂ ಮೇಲ್ಮನವಿ ಸಲ್ಲಿಸದೇ ಇದ್ದ ಪಕ್ಷದಲ್ಲಿ 'ವಾಡಾ'ವು ನೇರವಾಗಿ ಸಿಎಎಸ್‌ಗೆ ಮನವಿ ಸಲ್ಲಿಸಲು ಅವಕಾಶ ಇದೆ
- ಉದ್ದೀಪನ ಮದ್ದು ತಡೆ ನಿಯಮಗಳ ಉಲ್ಲಂಘನೆ ಎಂದರೆ ಏನು, ಯಾವಾಗ ಉಲ್ಲಂಘನೆಯಾಗುತ್ತದೆ ಎಂಬುದನ್ನು ಮಸೂದೆಯಲ್ಲಿ ವಿವರಿಸಲಾಗಿದೆ. ಅದರ ಪ್ರಕಾರ, (ಅ) ನಿಷೇಧಿತ ವಸ್ತು/ಮದ್ದು ಕ್ರೀಡಾಪಟುಗಳು ಹೊಂದಿರುವುದು ಅಥವಾ ಅವುಗಳಲ್ಲಿನ ಅಂಶ ಕ್ರೀಡಾಳುವಿನ ದೇಹದಲ್ಲಿರುವುದು (ಆ) ನಿಷೇಧಿತ ಮದ್ದು ಬಳಕೆ ಅಥವಾ ಹೊಂದಿರುವುದು ಅಥವಾ ಸೇವನೆಗೆ ಯತ್ನಿಸುವುದು ಅಥವಾ ನಿಷೇಧಿತ ವಿಧಾನವನ್ನು ಅನುಸರಿಸುವುದು (ಇ) ಪರೀಕ್ಷೆಗೆ ಹಾಜರಾಗದೇ ಇರುವುದು ಅಥವಾ ಇರುವ ಸ್ಥಳದ ಬಗ್ಗೆ ಮಾಹಿತಿ ನೀಡದೇ ಇರುವುದು, ಪರೀಕ್ಷೆಗೆ ಮಾದರಿಗಳನ್ನು (ರಕ್ತ, ಮೂತ್ರ ಇತ್ಯಾದಿ) ನೀಡದಿರುವುದು (ಈ) ನಿಷೇಧಿತ ವಸ್ತುಗಳನ್ನು ಕದ್ದು ಸಾಗಿಸುವುದು ಅಥವಾ ಅದಕ್ಕೆ ಯತ್ನಿಸುವುದು ಸೇರಿದಂತೆ ಹಲವು ವಿವರಣೆಗಳನ್ನು ನೀಡಲಾಗಿದೆ
- ಉದ್ದೀಪನ ಮದ್ದು ತಡೆ ಪರೀಕ್ಷೆಯನ್ನು ಮಾಡುವ ಪ್ರತಿಯೊಂದು ಪ್ರಯೋಗಾಲಯವೂ 'ವಾಡಾ'ದಿಂದ ಮಾನ್ಯತೆ ಪಡೆಯುವುದನ್ನು ಮಸೂದೆ ಕಡ್ಡಾಯಗೊಳಿಸಿದೆ. 2022ರ ಕಾಯ್ದೆಯ ಪ್ರಕಾರ, ಇದು ಕಡ್ಡಾಯವಾಗಿರಲಿಲ್ಲ




## ಭಾರತದಲ್ಲೇ ಹೆಚ್ಚು ಸೇವನೆ...

ಉದ್ದೀಪನ ಮದ್ದು ಬಳಕೆಯು ಭಾರತದ ಕ್ರೀಡಾ ಕ್ಷೇತ್ರದಲ್ಲಿ ಬೃಹತ್ ಸಮಸ್ಯೆಯಾಗಿ ಕಾಡುತ್ತಿದೆ. 'ವಾಡಾ' 2023ರ ಅಂಕಿಅಂಶಗಳ ಪ್ರಕಾರ, ನಿಷೇಧಿತ ವಸ್ತುಗಳ ಸೇವನೆಯಲ್ಲಿ ಭಾರತೀಯ ಕ್ರೀಡಾಪಟುಗಳು ಮುಂಚೂಣಿಯಲ್ಲಿದ್ದಾರೆ. 5000ಕ್ಕೂ ಹೆಚ್ಚು ಮಾದರಿಗಳ ಪರೀಕ್ಷಾ ಫಲಿತಾಂಶವನ್ನು 'ವಾಡಾ' ವಿಶ್ಲೇಷಣೆಗೆ ಒಳಪಡಿಸಿದೆ.

2023ರ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ನಿಷೇಧಿತ ವಸ್ತುಗಳ ಬಳಕೆಯ ಪ್ರಮಾಣ ಶೇ 3.8ರಷ್ಟಿದೆ. 5,606 ಮಾದರಿಗಳ ಪೈಕಿ 214 ಮಾದರಿಗಳಲ್ಲಿ ಉದ್ದೀಪನ ವಸ್ತು ಸೇವಿಸಿರುವುದು ದೃಢಪಟ್ಟಿದೆ. ಇದು ಚೀನಾ, ಅಮೆರಿಕ, ಫ್ರಾನ್ಸ್ ಸೇರಿದಂತೆ ಹಲವು ದೇಶಗಳಿಗಿಂತ ಹೆಚ್ಚು. 5,606 ಪರೀಕ್ಷೆಗಳ ಪೈಕಿ 2,748 ಪರೀಕ್ಷೆಗಳು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಸಂಬಂಧಿಸಿದ್ದಾಗಿತ್ತು.

2022ಕ್ಕೆ ಹೋಲಿಸಿದರೆ ನಿಷೇಧಿತ ವಸ್ತುಗಳ ಬಳಕೆ ದೃಢಪಟ್ಟ ಪ್ರಮಾಣ 2023ರಲ್ಲಿ ಹೆಚ್ಚಾಗಿದೆ. 2022ರಲ್ಲಿ 3,865 ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಶೇ 3.2ರಷ್ಟು ಪ್ರಕರಣಗಳು ದೃಢಪಟ್ಟಿದ್ದವು.

2023ರಲ್ಲಿ ಅಥ್ಲೆಟಿಕ್ಸ್ ವಿಭಾಗದಲ್ಲಿ ಹೆಚ್ಚು ಪ್ರಕರಣಗಳು ದಾಖಲಾಗಿವೆ. 1,223 ಮಾದರಿಗಳಲ್ಲಿ 61 ಮಾದರಿಗಳಲ್ಲಿ ನಿಷೇಧಿತ ವಸ್ತುವಿನ ಬಳಕೆ ದೃಢಪಟ್ಟಿತ್ತು. ವೇಟ್‌ಲಿಫ್ಟಿಂಗ್ ವಿಭಾಗದಲ್ಲಿ 38 ಪ್ರಕರಣಗಳು (451 ಮಾದರಿಗಳು) ಪವರ್‌ಲಿಫ್ಟಿಂಗ್ ಮತ್ತು ಕುಸ್ತಿಗಳಲ್ಲಿ ಕ್ರಮವಾಗಿ 28 ಮತ್ತು 10 ಪ್ರಕರಣಗಳು ವರದಿಯಾಗಿದ್ದವು.

ಪದಬ

ಎಡದಿಂದ ಬಲಕ್ಕೆ

1.ಮಾನ ಹೊಂದಿರುವ ಹೋಲಿಕೆಯ ವಸ್ತು (4)

2.ಬದ್ಧ ದ್ವೇಷವಿದು (4)

4.ಕುಬೇರನನು ಹೀಗೂ ಕರೆಯುತಾರೆ

17.ಕೊನೆಗೆ ಕಳೆಯಿದ್ದರಷ್ಟೇ ಈ ತೇಜಸ್ಸು! (4)

ಮೇಲಿಂದ ಕೆಳಕ್ಕೆ

1.ಈ ರೀತಿ ದೃಷ್ಟಾಂತವನ್ನು ಕೊಡು (5)

## ❖ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರ ಎತ್ತಿಹಿಡಿದ 'ಸುಪ್ರೀಂ'

- ಪರಿಸರಕ್ಕೆ ಆಗಿರುವ ಹಾನಿಯನ್ನು ಸರಿಪಡಿಸುವಂತೆ ಮತ್ತು ಪರಿಹಾರ ನೀಡುವಂತೆ ಸೂಚಿಸುವ ಅಧಿಕಾರ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಇದೆ ಎಂಬ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿದೆ.
- ಮಾಲಿನ್ಯ ನಿಯಂತ್ರಣ ಮಂಡಳಿಗಳು ಜಲ ಕಾಯ್ದೆ ಮತ್ತು ವಾಯು ಕಾಯ್ದೆಯ ನಿಯಮಗಳ ಅಡಿಯಲ್ಲಿ ಸಾಂವಿಧಾನಿಕವಾಗಿ ಹಾಗೂ ಶಾಸನಬದ್ಧವಾಗಿ ಈ ಅಧಿಕಾರ ಹೊಂದಿವೆ ಎಂದು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ ಅಭಿಪ್ರಾಯಪಟ್ಟಿದೆ.
- 'ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಭಾರತದಲ್ಲಿರುವ ಕಾನೂನುಗಳನ್ನು ನಿಯಂತ್ರಿಸುವ ತತ್ವಗಳನ್ನು ಪರಿಗಣಿಸಿದ ನಂತರ ಈ ತೀರ್ಪು ನೀಡಿದ್ದೇವೆ. ಪರಿಸರಕ್ಕೆ ಉಂಟಾಗಿರುವ ಹಾನಿಗೆ ಪರಿಹಾರ ನೀಡುವಂತೆ ಮತ್ತು ಸಂಭಾವ್ಯ ಪರಿಸರ ಹಾನಿಯನ್ನು ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮವಾಗಿ ನಿರ್ದಿಷ್ಟ ಮೊತ್ತದ ಬ್ಯಾಂಕ್ ಖಾತರಿ ನೀಡುವಂತೆ ಸೂಚಿಸುವ ಅಧಿಕಾರವನ್ನು ಮಾಲಿನ್ಯ ನಿಯಂತ್ರಣ ಮಂಡಳಿಗಳು ಹೊಂದಿವೆ' ಎಂದು ಪೀಠ ತಿಳಿಸಿದೆ.
- ಆದರೆ ಇದು ಶಿಕ್ಷೆಯ ರೂಪದಲ್ಲಿ ದಂಡ ವಿಧಿಸುವುದಕ್ಕಿಂತ ಭಿನ್ನವಾಗಿದೆ ಎಂದು ಪೀಠವು ಸ್ಪಷ್ಟಪಡಿಸಿತು. ನಿಯಮ ಉಲ್ಲಂಘಿಸುವವರನ್ನು ಶಿಕ್ಷಿಸುವ ಬದಲು, ಪರಿಸರಕ್ಕೆ ಆಗಿರುವ ಹಾನಿಯನ್ನು ಸರಿಪಡಿಸುವ ಅಥವಾ ಹಾನಿಯಾಗದಂತೆ ತಡೆಯುವ ಉದ್ದೇಶವನ್ನು ಇದು ಹೊಂದಿದೆ ಎಂದು ಹೇಳಿತು.
- ಮಾಲಿನ್ಯ ನಿಯಂತ್ರಣ ಮಂಡಳಿಗಳು ಪರಿಸರ ಹಾನಿಗೆ ಸಂಬಂಧಿಸಿದಂತೆ ಪರಿಹಾರ ಕೋರುವ ಅಧಿಕಾರವನ್ನು ಮೊಟಕುಗೊಳಿಸಿ ದೆಹಲಿ ಹೈಕೋರ್ಟ್ 2012ರಲ್ಲಿ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತು.

## ❖ 'ಭಾರತದ ಮೇಲೆ 24 ತಾಸಿನಲ್ಲಿ ಇನ್ನಷ್ಟು ಸುಂಕ'

- ಭಾರತವು ಅಮೆರಿಕದ ಪಾಲಿಗೆ ಒಳ್ಳೆಯ ವ್ಯಾಪಾರ ಪಾಲುದಾರ ಅಲ್ಲ ಎಂದು ಹೇಳಿರುವ ಅಲ್ಲಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾದಿಂದ ಕಚ್ಚಾ ತೈಲವನ್ನು ಖರೀದಿ ಸುತ್ತಿರುವ ಕಾರಣಕ್ಕೆ 'ಮುಂದಿನ 24 ಗಂಟೆಗಳಲ್ಲಿ ಭಾರತದ ಮೇಲೆ ಗಣನೀಯ ಪ್ರಮಾಣದಲ್ಲಿ ತೆರಿಗೆ ಹೆಚ್ಚು ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.
- 'ಭಾರತವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ವಿಧಿಸುವ ದೇಶ. ಭಾರತದ ಬಗ್ಗೆ ಈ ಮಾತನ್ನು ಹೇಳಲು ಜನ ಬಯಸುವುದಿಲ್ಲ. ಆದರೆ ಅವರು (ಭಾರತ) ಅತಿಹೆಚ್ಚು ತೆರಿಗೆ ವಿಧಿಸುತ್ತಾರೆ. ಅವರಲ್ಲಿನ ತೆರಿಗೆ ಬಹಳ ಹೆಚ್ಚಿರುವ ಕಾರಣಕ್ಕೆ ನಾವು ಅವರೊಂದಿಗೆ ಬಹಳ ಕಡಿಮೆ ವ್ಯಾಪಾರ ನಡೆಸುತ್ತಿದ್ದೇವೆ' ಎಂದು ಟ್ರಂಪ್ ಅವರು ಸಿಎನ್‌ಬಿಸಿ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.
- 'ನಾವು ಅವರಿಗೆ ಶೇ 25ರಷ್ಟು ತೆರಿಗೆ ವಿಧಿಸಿದ್ದೇವೆ. ಆದರೆ ಮುಂದಿನ 24 ಗಂಟೆಗಳಲ್ಲಿ ಅದನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲಿದ್ದೇನೆ. ಏಕೆಂದರೆ ಅವರು ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿದ್ದಾರೆ. ಅವರು ಯುದ್ಧ ಪರಾಧಕ್ಕೆ ನೆರವು ನೀಡುತ್ತಿದ್ದಾರೆ. ಅವರು ಹಾಗೆ ಮಾಡುವುದು ನನಗೆ ಸಂತಸ ನೀಡುವುದಿಲ್ಲ' ಎಂದು ಟ್ರಂಪ್ ಹೇಳಿದ್ದಾರೆ.
- 'ಭಾರತವು ಅತಿಹೆಚ್ಚಿನ ತೆರಿಗೆ ವಿಧಿಸುವ ಸ್ಥಿತಿಯಿಂದ ಹಿಂದೆ ಸರಿದು, ನಮಗೆ ಶೂನ್ಯ ತೆರಿಗೆ ವಿಧಿಸಲಿದೆ. ಆದರೆ, ಅವರು ಕಚ್ಚಾ ತೈಲದ ವಿಚಾರದಲ್ಲಿ ನಡೆದುಕೊಳ್ಳುತ್ತಿರುವ ರೀತಿಯನ್ನು ಕಂಡರೆ, ಅಷ್ಟು ಸಾಕಾಗುವುದಿಲ್ಲ' ಎಂದು ಟ್ರಂಪ್ ತಿಳಿಸಿದ್ದಾರೆ.
- ರಷ್ಯಾದಿಂದ ಭಾರಿ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸಿ, ಅದನ್ನು ದೊಡ್ಡ ಲಾಭಕ್ಕೆ ಮಾರಾಟ ಮಾಡುತ್ತಿರುವುದಕ್ಕಾಗಿ ಅಮೆರಿಕವು ಭಾರತದ ಮೇಲಿನ ತೆರಿಗೆಯ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಿದೆ ಎಂದು ಟ್ರಂಪ್ ಅವರು ಹೇಳಿದ್ದರು.
- ಈ ಮಾತಿಗೆ ಭಾರತವು ಪ್ರತ್ಯುತ್ತರ ನೀಡಿದೆ. ಅಮೆರಿಕ ಮತ್ತು ಯುರೋಪ್ ಕೂಡ ರಷ್ಯಾದ ಜೊತೆ ವ್ಯಾಪಾರ ಸಂಬಂಧ ಮುಂದುವರಿಸಿವೆ ಎಂದು ಭಾರತ ತಿರುಗೇಟು ನೀಡಿದೆ.

## ❖ ಕುಸಿದ ರೂಪಾಯಿ, ಇನ್ನಷ್ಟು ಇಳಿಕೆ ಸಾಧ್ಯತೆ

- ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟದ ಸನಿಹಕ್ಕೆ ತಲುಪಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು 22 ಪೈಸೆಯಷ್ಟು ಕುಸಿದು 87.88ಕ್ಕೆ ತಲುಪಿದೆ. ಫೆಬ್ರುವರಿಯಲ್ಲಿ ರೂಪಾಯಿ ಮೌಲ್ಯವು 87.95ಕ್ಕೆ ತಲುಪಿದ್ದುದು ಸಾರ್ವಕಾಲಿಕ ಕನಿಷ್ಠ ಮಟ್ಟ.
- ರಷ್ಯಾದಿಂದ ಕಚ್ಚಾ ತೈಲವನ್ನು ಭಾರತವು ಖರೀದಿಸುತ್ತಿದೆಯಾದ ಕಾರಣಕ್ಕೆ ಭಾರತದ ಸರಕುಗಳಿಗೆ ವಿಧಿಸುವ ಸುಂಕವನ್ನು ಹೆಚ್ಚು ಮಾಡಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮತ್ತೆ ಎಚ್ಚರಿಕೆ ನೀಡಿರುವುದು ಕೂಡ ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಯಿತು.
- ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದ ಕುರಿತ ಅನಿಶ್ಚಿತತೆಗಳು ದೇಶದ ಮಾರುಕಟ್ಟೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುತ್ತಿವೆ. ಹೀಗಾಗಿ ರೂಪಾಯಿ ಮೌಲ್ಯವು ಇನ್ನಷ್ಟು ತಗ್ಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ಪರಿಣತರು ಹೇಳಿದ್ದಾರೆ.

## ❖ ಟ್ರಂಪ್ ಬೆದರಿಕೆಗೆ ರಷ್ಯಾ ಖಂಡನೆ

- ರಷ್ಯಾದಿಂದ ತೈಲವನ್ನು ಖರೀದಿಸುತ್ತಿರುವುದಕ್ಕೆ ಭಾರತದ ಮೇಲೆ ಹೆಚ್ಚಿನ ಸುಂಕ ವಿಧಿಸುವ ಅಮೆರಿಕದ ಬೆದರಿಕೆಯನ್ನು ಕ್ರೆಮ್ಲಿನ್ ಟೀಕಿಸಿದೆ.
- ರಷ್ಯಾದಿಂದ ತೈಲ ಖರೀದಿ ಮುಂದುವರಿಸಿದರೆ ಭಾರತದ ಮೇಲಿನ ಸುಂಕ ಹೆಚ್ಚಿಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಎಚ್ಚರಿಸಿದ್ದರು. ಅಮೆರಿಕದ ಈ ನಿಲುವು 'ನ್ಯಾಯಸಮ್ಮತವಲ್ಲದ್ದು' ಎನ್ನುವ ಮೂಲಕ ಭಾರತ ತಿರುಗೇಟು ನೀಡಿತ್ತು.
- ರಷ್ಯಾ ಕೂಡಾ ಅದೇ ಧಾಟಿಯಲ್ಲಿ ಪ್ರತಿಕ್ರಿಯಿಸಿ ಭಾರತದ ಬೆಂಬಲಕ್ಕೆ ನಿಂತಿದೆ. 'ಸಾರ್ವಭೌಮ ರಾಷ್ಟ್ರಗಳು ತಮ್ಮದೇ ಆದ ವ್ಯಾಪಾರ ಪಾಲುದಾರರನ್ನು ಆಯ್ಕೆ ಮಾಡುವ ಹಕ್ಕನ್ನು ಹೊಂದಿವೆ' ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ವರದಿಗಾರರಿಗೆ ತಿಳಿಸಿದ್ದಾರೆ.
- ರಷ್ಯಾದೊಂದಿಗೆ ವ್ಯಾಪಾರ ಸಂಬಂಧ ಕಡಿತಗೊಳಿಸುವಂತೆ ಒತ್ತಾಯಿಸುವುದು 'ನ್ಯಾಯಸಮ್ಮತವಲ್ಲ' ಎಂದು ಅವರು ಟೀಕಿಸಿದ್ದಾರೆ.
- 2022ರ ಫೆಬ್ರುವರಿಯಲ್ಲಿ ಉಕ್ರೇನ್ ಜತೆಗಿನ ಯುದ್ಧ ಆರಂಭವಾದಾಗಿನಿಂದ ಯೂರೋಪಿನ ದೇಶಗಳು ರಷ್ಯಾದ ರಫ್ತು ಗಳಿಕೆಗೆ ತಡೆಯೊಡ್ಡಲು ಪ್ರಯತ್ನಿಸುತ್ತಿವೆ. ಆದರೆ, ಭಾರತ ಮತ್ತು ಚೀನಾ ಸೇರಿದಂತೆ ಯೂರೋಪ್‌ನ ಹೊರಗಿನ ದೇಶಗಳಿಗೆ ತೈಲ ರಫ್ತು ಮಾಡುವ ಮೂಲಕ ರಷ್ಯಾ, ಬಹುಕೋಟಿ ಡಾಲರ್ ಹಣದ ಹರಿವು ಮುಂದುವರಿಯುವುದನ್ನು ಖಚಿತಪಡಿಸಿಕೊಂಡಿದೆ.

## ❖ ಸೇವಾ ವಲಯ ಬೆಳವಣಿಗೆ 11 ತಿಂಗಳ ಗರಿಷ್ಠ


- ದೇಶದ ಸೇವಾ ವಲಯದ ಚಟುವಟಿಕೆಗಳು ಜುಲೈನಲ್ಲಿ 11 ತಿಂಗಳ ಗರಿಷ್ಠ ಮಟ್ಟವನ್ನು ತಲುಪಿವೆ. ರಫ್ತು ಕಾರ್ಯಾದೇಶಗಳು ಹೆಚ್ಚಳ ಕಂಡಿದ್ದು, ಒಟ್ಟು ಮಾರಾಟದಲ್ಲಿ ತೀವ್ರ ಪ್ರಮಾಣದ ಏರಿಕೆ ಆಗಿದ್ದುದು ಇದಕ್ಕೆ ಕಾರಣ.
- ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಜುಲೈನಲ್ಲಿ 60.5ಕ್ಕೆ ತಲುಪಿದೆ. ಇದು ಜೂನ್‌ನಲ್ಲಿ 60.4ರಲ್ಲಿ ಇತ್ತು. ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಚಟುವಟಿಕೆಗಳು ಕುಗ್ಗಿವೆ ಎಂದು ಅರ್ಥೈಸಲಾಗುತ್ತದೆ. 'ಸೂಚ್ಯಂಕವು ಜುಲೈನಲ್ಲಿ 60.5ರಲ್ಲಿ ಇರುವುದು ಬೆಳವಣಿಗೆಯನ್ನು ಹೇಳುತ್ತಿದೆ.
- ಜುಲೈನಲ್ಲಿ ಚಟುವಟಿಕೆಗಳು ಚುರುಕಾಗಿದ್ದರೂ, ಕಂಪನಿಗಳ ಸಾಮರ್ಥ್ಯದ ಮೇಲೆ ಹೆಚ್ಚಿನ ಒತ್ತಡ ಸೃಷ್ಟಿಯಾಗಿದ್ದರೂ, ನೌಕರರನ್ನು ನೇಮಕ ಮಾಡಿಕೊಳ್ಳುವ ಪ್ರಮಾಣವು ಅಷ್ಟೇನೂ ತೀವ್ರ ಆಗಿರಲಿಲ್ಲ. ಜುಲೈನಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಆಗಿರುವ ಏರಿಕೆಯು 15 ತಿಂಗಳ ಕನಿಷ್ಠ ಪ್ರಮಾಣದ ಏರಿಕೆಯಾಗಿದೆ. 'ಕಡಿಮೆ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಆಗಿದೆ. ಶೇ 2ಕ್ಕಿಂತ ಕಡಿಮೆ ಕಂಪನಿಗಳು ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿವೆ' ಎಂದು ಎಚ್‌ಎಸ್‌ಬಿಸಿ ಸಮೀಕ್ಷೆ ಹೇಳಿದೆ.

## ❖ ತೆರಿಗೆ ಪಾಲು: ರಾಜ್ಯಕ್ಕೆ ₹46,933 ಕೋಟಿ

- 2024-25ನೇ ಹಣಕಾಸು ವರ್ಷದಲ್ಲಿ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ಕರ್ನಾಟಕ ರಾಜ್ಯಕ್ಕೆ ₹46,933 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ತಿಳಿಸಿದ್ದಾರೆ.
- 2022-23ರಲ್ಲಿ ₹34,596 ಕೋಟಿ ಹಾಗೂ 2023-24ರಲ್ಲಿ ₹41,193 ಕೋಟಿ ಬಿಡುಗಡೆಗೊಳಿಸಲಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.
- ಸ್ಥಳೀಯ ಸಂಸ್ಥೆಗಳು, ವಿಪತ್ತು ನಿರ್ವಹಣೆ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಕ್ರಮವಾಗಿ ₹5426 ಕೋಟಿ, ₹3532 ಕೋಟಿ ಹಾಗೂ ₹6826 ಕೋಟಿ ಬಿಡುಗಡೆ ಮಾಡಲಾಗಿತ್ತು ಎಂದು ಅವರು ವಿವರ ನೀಡಿದ್ದಾರೆ.

## ❖ ರಾಜ್ಯದಲ್ಲಿ 125 ಕೃಷಿ ಸಹಕಾರ ಸಂಘಗಳು ದಿವಾಳಿ: ಅಮಿತ್ ಶಾ

- ಕರ್ನಾಟಕದ 6,291 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ 125 ಸಂಘಗಳು ದಿವಾಳಿಯಾಗಿದ್ದು, ಅವುಗಳನ್ನು ಮುಚ್ಚುವ ಪ್ರಕ್ರಿಯೆ ನಡೆದಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಲೋಕಸಭೆಗೆ ತಿಳಿಸಿದ್ದಾರೆ.
- ಮುಚ್ಚುವ ಪ್ರಕ್ರಿಯೆಯಲ್ಲಿ ಇರುವ 125 ಸಹಕಾರ ಸಂಘಗಳ ಪೈಕಿ 28 ಸಂಘಗಳು ಚಿಕ್ಕಬಳ್ಳಾಪುರದಲ್ಲಿ, 13 ಸಂಘಗಳು ಹಾಸನದಲ್ಲಿ, 12 ಸಂಘಗಳು ಬೆಳಗಾವಿಯಲ್ಲಿ ಇವೆ. ರಾಜ್ಯದ 6,291 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ 64 ಸಂಘಗಳು ಈಗ ಕಾರ್ಯಾಚರಿಸುತ್ತಿಲ್ಲ ಎಂದು ಶಾ ಅವರು ಹೇಳಿದ್ದಾರೆ.
- ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ 428 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೋಂದಣಿ ಆಗಿದೆ. ಈ ಪೈಕಿ **187 ಸಂಘಗಳು ಬೆಳಗಾವಿಯಲ್ಲಿ** ನೋಂದಣಿ ಆಗಿವೆ ಎಂದು ಅವರು ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.



## ❖ ಕ್ಲೇಮ್ ಇತ್ಯರ್ಥಕ್ಕೆ ಏಕರೂಪಿ ವ್ಯವಸ್ಥೆ

- ಮೃತ ಗ್ರಾಹಕರ ಬ್ಯಾಂಕ್ ಖಾತೆಯಲ್ಲಿ ಇರುವ ಹಣ ಹಾಗೂ ಲಾಕರ್‌ನಲ್ಲಿ ಇರುವ ವಸ್ತುಗಳ ಕ್ಲೇಮ್‌ಗಳ ಇತ್ಯರ್ಥಕ್ಕೆ ಏಕರೂಪಿ ವ್ಯವಸ್ಥೆಯನ್ನು ರೂಪಿ ಸಲಾಗುತ್ತದೆ ಎಂದು ಆರ್‌ಬಿಐ ಹೇಳಿದೆ.
- ಮೃತ ಗ್ರಾಹಕರು ನಾಮನಿರ್ದೇಶನ ಮಾಡಿರುವ ವ್ಯಕ್ತಿಗಳು ಸಲ್ಲಿಸುವ ಕ್ಲೇಮ್‌ಗಳನ್ನು ಇತ್ಯರ್ಥಪಡಿಸುವ ಪ್ರಕ್ರಿಯೆಯನ್ನು ಸರಳಗೊಳಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗುತ್ತದೆ.
- **ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ – 1949ರ ಅನ್ವಯ, ಬ್ಯಾಂಕ್ ಠೇವಣಿಗಳಿಗೆ ಹಾಗೂ ಲಾಕರ್ ಗಳಿಗೆ ನಾಮನಿರ್ದೇಶನ ಸೌಲಭ್ಯ ಲಭ್ಯವಿದೆ.**
- ನಾಮನಿರ್ದೇಶಿತ ವ್ಯಕ್ತಿಗಳು, ಕಾನೂನುಬದ್ಧ ಹಕ್ಕುದಾರರು ಕ್ಲೇಮ್ ಅರ್ಜಿ ಸಲ್ಲಿಸಿದಾಗ ಅದನ್ನು ತ್ವರಿತವಾಗಿ, ಸುಲಭವಾಗಿ ಇತ್ಯರ್ಥಪಡಿಸಲು ಬ್ಯಾಂಕುಗಳು ಸರಳವಾದ ಪ್ರಕ್ರಿಯೆ ರೂಪಿಸಬೇಕು ಎಂದು ಆರ್‌ಬಿಐ ನೀತಿಯು ಹೇಳುತ್ತದೆ. ಆದರೆ ಪ್ರಕ್ರಿಯೆಗಳಲ್ಲಿ ಬ್ಯಾಂಕಿನಿಂದ ಬ್ಯಾಂಕಿಗೆ ವ್ಯತ್ಯಾಸ ಇದೆ.
- 'ಗ್ರಾಹಕರಿಗೆ ಒದಗಿಸುವ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ, ಪ್ರಕ್ರಿಯೆಯನ್ನು ಸರಳಗೊಳಿಸಲು ಮತ್ತು ಸಲ್ಲಿಸಬೇಕಿರುವ ದಾಖಲೆಗಳನ್ನು ನಿರ್ದಿಷ್ಟ ಪಡಿಸಲು ತೀರ್ಮಾನಿಸಲಾಗಿದೆ. ಈ ದಿಸೆಯಲ್ಲಿ ಕರಡು ಸುತ್ತೋಲೆಯೊಂದನ್ನು ಸಾರ್ವಜನಿಕರ ಸಮಾಲೋಚನೆಗಾಗಿ ಶೀಘ್ರವೇ ಹೊರಡಿಸ ಲಾಗುತ್ತದೆ' ಎಂದು ಆರ್‌ಬಿಐ ಹೇಳಿದೆ.

**<u>'ಯುಪಿಐಗೆ ಬಳಕೆದಾರರು ಶುಲ್ಕ ನೀಡಬೇಕು ಎಂದಿಲ್ಲ'</u>**

- ಯುಪಿಐ ಪಾವತಿ ವ್ಯವಸ್ಥೆಯು ಯಾವತ್ತಿಗೂ ಉಚಿತವಾಗಿ ಇರಲು ಸಾಧ್ಯವಿಲ್ಲ ಎಂಬ ಮಾತನ್ನು ತಾವು ಹೇಳಿಲ್ಲ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸ್ಪಷ್ಟಪಡಿಸಿದ್ದಾರೆ.
- 'ಎಂಡಿಆರ್ ಶುಲ್ಕವನ್ನು ಗ್ರಾಹಕರಿಗೆ ವರ್ಗಾಯಿಸಲಾಗುತ್ತ ದೆಯೇ ಎಂಬ ಪ್ರಶ್ನೆಯನ್ನು ನನಗೆ ಕೇಳಲಾಗಿತ್ತು. ಒಂದಿಷ್ಟು ವೆಚ್ಚಗಳು ಇರುತ್ತವೆ. ವೆಚ್ಚಗಳನ್ನು ಯಾರೋ ಒಬ್ಬರು ಪಾವತಿಸ ಬೇಕಾಗುತ್ತದೆ. ಯಾರು ಪಾವತಿಸಬೇಕಾಗುತ್ತದೆ ಎಂಬುದು ಮುಖ್ಯ... ವ್ಯವಸ್ಥೆಯು ಸುಸ್ಥಿರವಾಗಿ ಇರಲು ವೈಯಕ್ತಿಕ ಮಟ್ಟದಲ್ಲಿ ಅಥವಾ ವ್ಯವಸ್ಥೆಯ ಮಟ್ಟದಲ್ಲಿ ಯಾರಾದರೂ ಹಣ ಪಾವತಿಸಬೇಕಾಗುತ್ತದೆ' ಎಂದು ಅವರು ವಿವರಣೆ ನೀಡಿದ್ದಾರೆ.
- 'ವ್ಯವಸ್ಥೆಯು ಈಗಲೂ ಉಚಿತವಾಗಿ ಇಲ್ಲ. ಅದಕ್ಕೆ ಯಾರೋ ಶುಲ್ಕ ನೀಡುತ್ತಿದ್ದಾರೆ, ಸರ್ಕಾರವು ವ್ಯವಸ್ಥೆಗೆ ಸಬ್ಸಿಡಿ ನೀಡುತ್ತಿದೆ... ಬಳಕೆದಾರರು ಶುಲ್ಕ ಪಾವತಿಸಬೇಕಾಗುತ್ತದೆ ಎಂಬ ಮಾತನ್ನು ನಾನು ಯಾವತ್ತೂ ಹೇಳಿಲ್ಲ' ಎಂದು ಅವರು ತಿಳಿಸಿದ್ದಾರೆ.
- **<u>ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡದೆ</u>** ಇರುವ ತೀರ್ಮಾನವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು ತೆಗೆದುಕೊಂಡಿದೆ.
- ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ನೇತೃತ್ವದ ಸಮಿತಿಯು ರೆಪೊ ದರವನ್ನು ಶೇ 5.5ರಲ್ಲೇ ಉಳಿಸಿಕೊಳ್ಳಲು ಸರ್ವಾನುಮತದಿಂದ ನಿರ್ಧರಿಸಿದೆ. ಅಲ್ಲದೆ, 'ತಟಸ್ಥ' ಹಣಕಾಸಿನ ನೀತಿಯನ್ನು ಮುಂದುವರಿಸಲು ಕೂಡ ಅದು ನಿರ್ಣಯಿಸಿದೆ.
- ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಾಣಿಜ್ಯ ನೀತಿಗಳು ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಳ್ಳುವುದರ ಹಾಗೂ ಈ ಹಿಂದೆ ರೆಪೊ ದರವನ್ನು ಇಳಿಕೆ ಮಾಡಿದ್ದುದರ ಪರಿಣಾಮಗಳನ್ನು ಅರ್ಥ ಮಾಡಿಕೊಂಡು ಮುಂದಿನ ತೀರ್ಮಾನ ತೆಗೆದುಕೊಳ್ಳುವ ನಿಲುವನ್ನು ಆರ್‌ಬಿಐ ತಾಳಿರುವಂತಿದೆ.
- ಫೆಬ್ರುವರಿಯಿಂದ ಈಚೆಗೆ ಆರ್‌ಬಿಐ ರೆಪೊ ದರವನ್ನು ಒಟ್ಟು ಶೇ 1ರಷ್ಟು ಕಡಿಮೆ ಮಾಡಿದೆ. ಈ ಕಡಿತಗಳ ಪ್ರಯೋಜನವು ಗ್ರಾಹಕರಿಗೆ ವರ್ಗಾವಣೆ ಆಗುವ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಆರ್‌ಬಿಐ ಹೇಳಿದೆ.
- ಚಿಲ್ಲರೆ ಹಣದುಬ್ಬರ ಪ್ರಮಾಣವು ಈ ಆರ್ಥಿಕ ವರ್ಷದ ನಾಲ್ಕನೆಯ ತ್ರೈಮಾಸಿಕದಲ್ಲಿ ಹಾಗೂ ಅದರ ನಂತರದಲ್ಲಿ ಶೇ 4ಕ್ಕಿಂತ ಹೆಚ್ಚಳ ಕಾಣುವ ಸಾಧ್ಯತೆ ಇದೆ ಎಂದು ಮಲ್ಹೋತ್ರಾ ಹೇಳಿದ್ದಾರೆ.

## ❖ ಆಮದು ಸುಂಕ ಶೇ 50ಕ್ಕೆ ಏರಿಸಿದ ಟ್ರಂಪ್

- ರಷ್ಯಾದಿಂದ ತೈಲ ಖರೀದಿಸುವ ವಿಚಾರವಾಗಿ ಅಮೆರಿಕದ ಬೆದರಿಕೆಗೆ ಭಾರತ ಮಣಿಯದ ಬೆನ್ನಲ್ಲೇ, ಅಮೆರಿಕ ಭಾರತದಿಂದ ಆಮದು ಮಾಡಿ ಕೊಳ್ಳುವ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇಕಡ 25ರಷ್ಟು ಸುಂಕ ಹೇರುವ ಆದೇಶಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ.
- ವಿನಾಯಿತಿ ಪಟ್ಟಿಯಲ್ಲಿರುವ ಕೆಲ ಸರಕುಗಳನ್ನು ಹೊರತುಪಡಿಸಿದಂತೆ, ಭಾರತದ ಮೇಲೆ ಹೇರಲಾದ ಸುಂಕದ ಪ್ರಮಾಣ ಶೇ 50ಕ್ಕೆ ಏರಿದಂತಾಗಿದೆ. ಟ್ರಂಪ್ ಅವರ ಈ ನಡೆಯು, ಜವಳಿ, ಸಾಗರ ಹಾಗೂ ಚರ್ಮ ಉತ್ಪನ್ನ ಗಳ ರಫ್ತಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.
- ಭಾರತದಿಂದ ಅಮೆರಿಕಕ್ಕೆ ₹7.5 ಲಕ್ಷ ಕೋಟಿ (86 ಶತ ಕೋಟಿ ಡಾಲರ್) ಮೌಲ್ಯದಷ್ಟು ಸರಕುಗಳ ರಫ್ತು ಆಗುತ್ತದೆ. ಹೆಚ್ಚುವರಿ ಸುಂಕ ಈ ರಫ್ತಿನ ಮೇಲೆ ಭಾರಿ ಪರಿಣಾಮ ಬೀರಲಿದೆ ಎಂದು ರಫ್ತುದಾರರು ಆತಂಕ ವ್ಯಕ್ತಪಡಿಸಿದ್ದಾರೆ.
- ರಷ್ಯಾದಿಂದ ತೈಲ ಖರೀದಿಸುವ ಮೂಲಕ ಭಾರತವು, ಉಕ್ರೇನ್ ವಿರುದ್ಧದ ಯುದ್ಧಕ್ಕೆ ರಷ್ಯಾಕ್ಕೆ ಆರ್ಥಿಕ ನೆರವು ಒದಗಿಸುತ್ತಿದೆ ಎಂದು ಟ್ರಂಪ್ ದೂರಿದ್ದಾರೆ.
- ಈ ಹಿಂದೆ ಭಾರತದಿಂದ ಆಮದು ಮಾಡಿಕೊಳ್ಳಲಾಗುವ ಸರಕುಗಳ ಮೇಲೆ ಹೇರಿದ್ದ ಶೇ 25ರಷ್ಟು ಸುಂಕವು ಆ.7ರಿಂದ ಜಾರಿಗೆ ಬರಲಿದೆ. ಇದು ಜಾರಿಯಾಗಲು ಇನ್ನೂ 14 ಗಂಟೆ ಬಾಕಿ ಇರುವಾಗಲೇ, ಹೆಚ್ಚುವರಿಯಾಗಿ ಶೇ 25ರಷ್ಟು ಸುಂಕ ಹೇರಲಾಗಿದೆ.
- ಹೆಚ್ಚುವರಿ ಸುಂಕವು 21 ದಿನಗಳಲ್ಲಿ ಅಥವಾ ಆಗಸ್ಟ್ 27ರಿಂದ ಜಾರಿಗೆ ಬರಲಿದೆ. ಇದು ಉಕ್ಕು, ಅಲ್ಯುಮಿನಿಯಂ ಸರಕುಗಳಿಗೆ ಅನ್ವಯಿಸುವುದಿಲ್ಲ. ಔಷಧ ವಲಯ ಹೆಚ್ಚುವರಿ ಸುಂಕ ನೀತಿಯಡಿ ಬರಲಿದೆ.
- **ಭಾರತ ತನ್ನ ಬೇಡಿಕೆಯ ಪೈಕಿ ಶೇ 88ರಷ್ಟು ಕಚ್ಚಾ ತೈಲವನ್ನು ವಿವಿಧ ರಾಷ್ಟ್ರಗಳಿಂದ ಖರೀದಿಸುತ್ತದೆ. 2021ರ ವರೆಗೆ ರಷ್ಯಾದಿಂದ ಖರೀದಿಸಿದ ತೈಲ ಪ್ರಮಾಣ ಶೇ 0.2ರಷ್ಟಾಗುತ್ತದೆ. ಉಕ್ರೇನ್ ಮೇಲೆ ಯುದ್ಧ ಸಾರಿದ ನಂತರ, ರಷ್ಯಾ ರಿಯಾಯಿತಿ ದರದಲ್ಲಿ ತೈಲ ಮಾರಾಟ ಮಾಡಲು ಆರಂಭಿಸಿದೆ. ಭಾರತದ ತೈಲ ಸಂಸ್ಕರಣಾ ಕಂಪನಿಗಳು ಈ ಅವಕಾಶವನ್ನು ತಡಮಾಡದೇ ಬಳಸಿಕೊಂಡಿವೆ. ಪ್ರಸ್ತುತ ರಷ್ಯಾ, ಭಾರತಕ್ಕೆ ತೈಲ ಪೂರೈಸುವ ಪ್ರಮುಖ ರಾಷ್ಟ್ರವಾಗಿದೆ.**

## ❖ ಕಿರಣ್ ಕುಮಾರ್ ಸೇರಿ 15 ಮಂದಿಗೆ 'ಬಸವ ಪುರಸ್ಕಾರ'

- ಬಸವ ಪರಿಷತ್ ನೀಡುವ 2025ನೇ ಸಾಲಿನ 'ಬಸವ ಪುರಸ್ಕಾರ' ಕ್ಕೆ ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಸೇರಿ 15 ಮಂದಿ ಆಯ್ಕೆ ಯಾಗಿದ್ದಾರೆ.
- 'ವಿವಿಧ ಕ್ಷೇತ್ರಗಳ ಸಾಧಕರನ್ನು ಈ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಪರಿಸರ ಕ್ಷೇತ್ರದಿಂದ ಅಲ್ಮಿತ್ರಾ ಪಟೇಲ್, ನ್ಯಾಯಾಂಗ ಕ್ಷೇತ್ರದಿಂದ ರವಿವರ್ಮ ಕುಮಾರ್, ಶಿಕ್ಷಣ ಹಾಗೂ ಸಹಕಾರ ಕ್ಷೇತ್ರದಿಂದ ಎಸ್ .ಆರ್.ಪಾಟೀಲ, ಸಹಕಾರ ಮಹಿಳಾ ಸಬಲೀಕರಣ ಕ್ಷೇತ್ರದಿಂದ ಎಂ.ಎನ್.ರಾಜೇಂದ್ರ ಕುಮಾರ್, ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದಿಂದ ಉಮಾಶ್ರೀ, ಸಮಾಜ ಸೇವೆ ಹಾಗೂ ಉದ್ಯಮ ಕ್ಷೇತ್ರದಿಂದ ಮಾನಂದಿ ರಮೇಶ್, ಬಸವರಾಜ ಎಸ್. ದೇಶಮುಖ, ವಿ.ಎಸ್.ವಿ. ಪ್ರಸಾದ್, ಎಸ್.ಪಿ. ದಯಾನಂದ್ ಹಾಗೂ ಬಸವರಾಜ ಧನ್ನೂರ ಆಯ್ಕೆಯಾಗಿದ್ದಾರೆ' .
- 'ಉದ್ಯಮ ಹಾಗೂ ಶಿಕ್ಷಣ ಕ್ಷೇತ್ರದಿಂದ ಶಾಮನೂರು ಎಸ್. ಗಣೇಶ್, ಶಿಕ್ಷಣ ಹಾಗೂ ಸಮಾಜ ಸೇವೆ ಕ್ಷೇತ್ರದಿಂದ ಬಸವರಾಜ್ ಎಸ್. ದೇಶಮುಖ, ವೈದ್ಯಕೀಯ ಕ್ಷೇತ್ರದಿಂದ ಡಾ. ನಾಗರಾಜಯ್ಯ ಎನ್., ಸಮಾಜ ಸೇವೆ ಕ್ಷೇತ್ರದಿಂದ ರವಿಕುಮಾರ ಸ್ವಾಮಿ ಹಿರೇಮಠ, ಸಾಹಿತ್ಯ ಮತ್ತು ಸರ್ಕಾರಿ ಸೇವೆ ಕ್ಷೇತ್ರದಿಂದ ಬಸವರಾಜ ಯಲಿಗಾರ ಅವರು ಈ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ' .

## ❖ ನಾಲ್ವಡಿ: ಕನ್ನಡಿಗರ ವೈರಮುಡಿ

- ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನದ ಮಹಾರಾಜರಾಗಿ ಪಟ್ಟಾಭಿಷಿಕ್ತರಾದದ್ದು ಆಗಸ್ಟ 8ರಂದು (1902). ಅವರು ನಮ್ಮನ್ನು ಅಗಲಿದ್ದು ಆಗಸ್ಟ 3ರಂದು (1940).
- ಬಿಜ್ಜಳನ ಅರಮನೆಗೆ ಪ್ರತಿಯಾಗಿ ಬಸವಣ್ಣ 'ಮಹಾಮನೆ' ಯನ್ನು ಕಟ್ಟಿದರಷ್ಟೆ. ಆದರೆ, ನಾಲ್ವಡಿಯವರು ಅರಮನೆಯನ್ನೇ ಜನ ಸಾಮಾನ್ಯರ ಮಹಾಮನೆಯಾಗಿ ಪರಿವರ್ತಿಸಿದರು.
- ಕುವೆಂಪು ಅವರು ಸಾಮ್ರಾಜ್ಯಶಾಹಿ, ಪುರೋಹಿತಶಾಹಿ ಮತ್ತು ಬಂಡವಾಳಶಾಹಿ ವಿರೋಧವಾದ ನಿಲುವು ತಾಳಿರುವುದನ್ನು ಅವರ ಸಾಹಿತ್ಯದಲ್ಲಿ ಕಂಡಿದ್ದೇವೆ. ಅಂತಹ ಕುವೆಂಪು, ನಾಲ್ವಡಿ ಅವರನ್ನು ಕುರಿತು ಬರೆದಿರುವ 'ಬೆಳ್ಳಿ ಹಬ್ಬದ ಕಬ್ಬದ ಬಳ್ಳಿ' ಕವನದಲ್ಲಿ- ರಾಜಋಷಿ, ಕರ್ಮಯೋಗಿ, ಆತ್ಮವೀರ, ಧರ್ಮವೀರ, ಲೋಕಮಾನ್ಯ, ಪೂರ್ಣಹೃದಯಿ- ಮೊದಲಾದ ವಿಶ್ಲೇಷಣಾತ್ಮಕ ಪದಪುಂಜಗಳನ್ನು ಬಳಸುವುದರ ಮೂಲಕ ನಾಲ್ವಡಿಯವರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಕೆಲಸ ಮಾಡುತ್ತಾರೆ. ಮತ್ತೂ ಒಂದು ಹೆಜ್ಜೆ ಮುಂದೆ ಹೋಗುವ ಅವರು- ಹರಿಶ್ಚಂದ್ರ, ರಾಮ, ಕೃಷ್ಣ, ಅಶೋಕ, ಯುಧಿಷ್ಠಿರಾದಿಯಾಗಿ ಮಹಾನೃಪರ ಸಾಲಿನಲ್ಲಿ ನಾಲ್ವಡಿ ಅವರ ಹೆಸರು ಬೆಳಗುತ್ತದೆ ಎನ್ನುತ್ತಾರೆ.
- ಚಾಮರಾಜೇಂದ್ರ ಒಡೆಯರ್ ಮೃತರಾದಾಗ ನಾಲ್ವಡಿ ಅವರು ಹತ್ತು ವರ್ಷದ ಬಾಲಕ. ಅವರು ರಾಜ್ಯಾಭಿಷಿಕ್ತರಾದಾಗ 18 ವರ್ಷದ ಯುವಕ. ಪಟ್ಟಾಭಿಷಿಕ್ತರಾದ ಮೇಲೆ ತಂದೆಯವರಂತೆಯೇ ನಾಡಿನ ಉದ್ದಗಲಕ್ಕೂ ಸಂಚರಿಸಿದರು. ಹಾಗೆ ಸಂಚರಿಸಿದಾಗ ತಮ್ಮ ತಂದೆಯವರು ಹುಟ್ಟುಹಾಕಿ ಹೋಗಿದ್ದ ಸಾಧನಾ ಮಾರ್ಗದ ವಿಸ್ತರಣೆಯ ದೂರದೃಷ್ಟಿಯ ಕನಸನ್ನು ಕಂಡರು. ಇದರಿಂದಲೇ ಅವರು 'ಮಾದರಿ ಮೈಸೂರು ಸಂಸ್ಥಾನ' ವನ್ನು ಕಟ್ಟಲು ಸಾಧ್ಯವಾಯಿತು. ಈ ಮಾತು ಹೇಳುವಾಗ ಒಂದು ಪ್ರಸಂಗ ನೆನಪಿಗೆ ಬರುತ್ತದೆ. (ಎಂ. ಶಿಂಗ್ರಯ್ಯನವರು ಬರೆದಿರುವ ಶ್ರೀ ಚಾಮರಾಜೇಂದ್ರ ಒಡೆಯರವರ ಚರಿತ್ರೆ, 1927). ಅದು ಹೀಗಿದೆ:
- ನಾಲ್ವಡಿ ಅವರ ತಂದೆ ಚಾಮರಾಜೇಂದ್ರ ಒಡೆಯರ್ ಅವರು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ **ಸರ್ ರಿಚರ್ಡ್ ಮೀಡ್ ಎಂಬ ಆಂಗ್ಲ ಅಧಿಕಾರಿ ಮೈಸೂರು ಸಂಸ್ಥಾನದ ಚೀಫ್ ಕಮಿಷನರ್ ಆಗಿದ್ದರು.** ನಂತರ ಅವರು ನಿವೃತ್ತರಾಗಿ ಸ್ವದೇಶಕ್ಕೆ ಹಿಂದಿರುಗಿದರು. 1884ರಲ್ಲಿ ಚಾಮರಾಜೇಂದ್ರರಿಗೆ ನಾಲ್ವಡಿ ಕೃಷ್ಣರಾಜ ಪುತ್ರ ರತ್ನನ ಜನನದ ಸಂಭ್ರಮ. ಆಗ ಮೀಡ್‌ರವರು ಮಹಾರಾಜರಿಗೆ ಅಭಿನಂದಿಸಿ ಪತ್ರ ಬರೆದರು. ಆ ಪತ್ರಕ್ಕೆ ಪ್ರತ್ಯುತ್ತರವಾಗಿ ಚಾಮರಾಜೇಂದ್ರರು ಮೀಡ್ ಅವರಿಗೆ ಬರೆದ ಪತ್ರದ ಒಕ್ಕಣೆ ಹೀಗಿದೆ:
  'ಪ್ರಿಯ ಮಿತ್ರರಾದ ಸರ್ ರಿಚರ್ಡ್ ಮೀಡ್ ಸಾಹೇಬರವರೇ, ನನಗೆ ಪುತ್ರೋತ್ಸವ ಆದುದಕ್ಕಾಗಿಯೂ, ಜಿ.ಸಿ.ಎಸ್.ಐ ಎಂಬ ಬಿರುದು ಲಭಿಸಿದುದಕ್ಕಾಗಿಯೂ ತಾವು ಬರೆದ ಸಂತೋಷಪೂರಕವಾದ ಸ್ನೇಹ ಪತ್ರಕ್ಕಾಗಿ ನಾನು ನಿಮ್ಮನ್ನು ಮನಸಾರೆ ಅಭಿನಂದಿಸುತ್ತೇನೆ.
- ಇದುವರೆಗೂ ನಮ್ಮಲ್ಲಿ ಮಳೆಗಾಲ ವಿಮುಖ ವಾಗಿರುವುದು ಎಂದು ತಿಳಿಸಲು ವಿಷಾದಿಸುತ್ತೇನೆ. ಆದರೆ, ಕಾಲಸ್ಥಿತಿಯು ಉತ್ತಮವಾಗಬಹುದು ಎಂಬ ಭರವಸೆಯೂ ತೋರುತ್ತಿದೆ. ಹೈಕೋರ್ಟಿಗೆ ಸಂಬಂಧಿಸಿದ ಏರ್ಪಾಡುಗಳೆಲ್ಲಾ ಮುಗಿಯುತ್ತಾ ಬಂದಿದೆ. ಇದು ಪ್ರಜೆಗಳ ಗೌರವಕ್ಕೆ ಪಾತ್ರವಾದ ನ್ಯಾಯಸ್ಥಾನ ಆಗಿರುತ್ತದೆ ಎಂದು ಭಾವಿಸುತ್ತೇನೆ.
- ನಮ್ಮ ಸಂಸ್ಥಾನದ ರೈಲ್ವೆಗಳು ಕ್ರಮೇಣ ವೃದ್ಧಿಯಾಗುತ್ತಿವೆ ಎಂದು ತಿಳಿಸಿದರೆ ತಾವು ಸಂತೋಷಪಡುವಿರಿ. ಬೆಂಗಳೂರಿನಿಂದ ಮೈಸೂರಿಗೆ ಮಾತ್ರವಲ್ಲದೆ ತಿಪಟೂರು ಕಡೆಗೆ ಐವತ್ತು ಮೈಲುಗಳಿಗಿಂತ ಹೆಚ್ಚಾಗಿ ರೈಲು ರಸ್ತೆಯು ಮುಗಿಯುತ್ತಾ ಬಂದಿದೆ. ತಮ್ಮ ಪತ್ನಿಯವರಾದ ಲೇಡಿ ಮೀಡ್ ರವರಿಗೆ ವಿಶ್ವಾಸಪೂರ್ವಕ ನನ್ನ ಧನ್ಯವಾದಗಳನ್ನು ದಯವಿಟ್ಟು ತಿಳಿಸಿ.
- 1884ರ ಜೂನ್ 26ರಂದು ಬೆಂಗಳೂರಿನಿಂದ ಚಾಮರಾಜೇಂದ್ರ ಒಡೆಯರ್ ಅವರು ಬರೆದ ಪತ್ರ ಒಂದು ಶುದ್ಧ ಖಾಸಗಿ ಪತ್ರ. ಖಾಸಗಿ ಪತ್ರದಲ್ಲೂ ಮಹಾರಾಜರು ಆ ನಿವೃತ್ತ ಅಧಿಕಾರಿಗೆ ತಮ್ಮ ಸಂಸ್ಥಾನದ ಮಳೆ ಬೆಳೆ, ಹೈಕೋರ್ಟ್ ಕೆಲಸದ ಪ್ರಗತಿ, ರೈಲು ಮಾರ್ಗಗಳ ಅಭಿವೃದ್ಧಿ- ಈ ವಿಷಯಗಳನ್ನು ತಿಳಿಸುತ್ತಾರೆಂದರೆ, ಮಹಾರಾಜರವರ ಜನಹಿತ ಧ್ಯಾನದ ಅರಿವಾಗುತ್ತದೆ. ಜೊತೆಗೆ, ಮೀಡ್ ಎಂಬ ವ್ಯಕ್ತಿ ಅಧಿಕಾರದಲ್ಲಿದ್ದಾಗ ತೋರಿರಬಹುದಾದ ಕಾರ್ಯಕ್ಷಮತೆಯನ್ನು ಮಹಾರಾಜರು ಗುರುತಿಸಿರುವುದು

ಗೊತ್ತಾಗುತ್ತದೆ. ಜನಪರ ಆಡಳಿತಗಾರ ಮತ್ತು ದಕ್ಷ ಅಧಿಕಾರಿಯ ಮಧ್ಯೆ ಇರಬೇಕಾದ ಸಂಬಂಧದ ರೀತಿಯನ್ನು ಪತ್ರ ಸೂಕ್ಷ್ಮವಾಗಿ ಸೂಚಿಸುತ್ತದೆ.

- ತಂದೆಯವರ ಮೇಲ್ಪಂಕ್ತಿಯನ್ನೇ ಅನುಸರಿಸಿದವರು ನಾಲ್ವಡಿಯವರು. ಅವರ ತಂದೆ 1881ರ ಅ. 7ರಂದು ಸ್ಥಾಪಿಸಿದ್ದ **'ಪ್ರಜಾಪ್ರತಿನಿಧಿ ಸಭೆ'** ಯನ್ನು ಮತ್ತಷ್ಟು ಜನಪರವಾಗಿಸಿದರು. ಪ್ರಜಾಪ್ರತಿನಿಧಿ ಸಭೆಗೆ **ಚುನಾವಣೆ ಮತ್ತು ಮಹಿಳೆಯರಿಗೂ ಮತದಾನದ ಹಕ್ಕು** ನೀಡಿದರು.
- 1907ರಲ್ಲಿ **ನ್ಯಾಯವಿಧಾಯಕ ಪರಿಷತ್ತನ್ನು** ರೂಪಿಸಿದರು.
- ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾಲಯ, ಕೃಷ್ಣರಾಜ ಸಾಗರ, ಭದ್ರಾವತಿಯ ಉಕ್ಕಿನ ಕಾರ್ಖಾನೆ, ಮಿಂಟೋ ಆಸ್ಪತ್ರೆ, ಇರ್ವಿನ್ ನಾಲೆ, ಕಾವೇರಿ ವಿದ್ಯುತ್ ಸರಬರಾಜು ಯೋಜನೆ, ಮೈಸೂರು ಬ್ಯಾಂಕ್, ಚೇಂಬರ್ ಆಫ್ ಕಾಮರ್ಸ್... ಒಂದೇ ಎರಡೇ. ಸಾಮಾನ್ಯರಿಗೆ ಅಗತ್ಯವಾಗಿದ್ದ ವಿದ್ಯಾಭ್ಯಾಸ, ಆರೋಗ್ಯ, ವಿದ್ಯುದ್ದೀಪ, ರಸ್ತೆ, ರೈಲು ಮಾರ್ಗ, ನೀರಾವರಿ, ವ್ಯವಸಾಯ, ವಾಣಿಜ್ಯ, ಉದ್ಯಮಗಳಿಗೆ ಬೆಲೆಯಿತ್ತು ಮಾದರಿ ಮೈಸೂರು ಸಂಸ್ಥಾನವನ್ನೂ, ಆಧುನಿಕ ಮೈಸೂರು ಸಂಸ್ಥಾನವನ್ನೂ ಕಟ್ಟಿದ ಕೀರ್ತಿ ನಾಲ್ವಡಿಯವರದ್ದು.
- ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣದ ಅಗಾಧ ವೆಚ್ಚವನ್ನು ಅವರು ವೈಯಕ್ತಿಕವಾಗಿ ಭರಿಸಿದ್ದು, ಮಹಾಯುದ್ಧದ ಕಾಲದಲ್ಲಿ ಕಲ್ಲಿದ್ದಲು ಕೊರತೆಯಾದರೂ ಭದ್ರಾವತಿ ಉಕ್ಕಿನ ಕಾರ್ಖಾನೆಯನ್ನು ಸೌದೆ ಸುಟ್ಟು ನಡೆಸಿದ್ದು ಇಂದಿನವರಿಗೆ ದಂತಕಥೆಗಳೇ.
- **1905ರಲ್ಲಿ ಪ್ಲೇಗ್** ಮಾರಿ ಸಂಸ್ಥಾನವನ್ನು ಅಪ್ಪಳಿಸಿದಾಗ ಅವರು ಅದನ್ನು ನಿಭಾಯಿಸಿದ ರೀತಿ. ಮಾರಕ ಪ್ಲೇಗ್‌ನಿಂದ ಸಂಸ್ಥಾನವನ್ನು ರಕ್ಷಿಸಲು ಶಾಶ್ವತ ವಿಧಾನವನ್ನು ಕಂಡುಹಿಡಿಯಬೇಕೆಂದು ಬಯಸಿ 12 ಸದಸ್ಯರನ್ನು ಒಳಗೊಂಡ ಸಮಿತಿಯನ್ನು ಅವರು ರಚಿಸಿದರು. ಮುಖ್ಯ ಎಂಜಿನಿಯರ್ ಡಬ್ಲ್ಯು. ಮ್ಯಾಕ್ ಹಚಿನ್ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯಲ್ಲಿ ಸೀನಿಯರ್ ಸರ್ಜನ್, ಸ್ಯಾನಿಟರಿ ಕಮಿಷನರ್, ಜಿಲ್ಲಾಧಿಕಾರಿ, ಹೀಗೆ ಅಧಿಕಾರಿಗಳಷ್ಟೇ ಅಲ್ಲ, ಎಂ. ವೆಂಕಟಕೃಷ್ಣಯ್ಯ, ಲಿಂಗರಾಜೇ ಅರಸ್, ಮೀರ್ ಕಮಾಲುದ್ದೀನ್ ಅಲಿಖಾನ್, ಅನಂತರಾಜಯ್ಯ ಎಂಬ ಸಾರ್ವಜನಿಕ ಬದುಕಿನ ಗಣ್ಯವ್ಯಕ್ತಿಗಳನ್ನೂ ಸೇರಿಸಲಾಗಿತ್ತು. ಈ ಸಮಿತಿ ನೀಡಿದ ವರದಿಯ ಅನುಷ್ಠಾನಕ್ಕೂ ಮಹಾರಾಜರು ಮುಂದಾದರು. ಪರಿಣಾಮವಾಗಿ, ಒಳಚರಂಡಿ ವ್ಯವಸ್ಥೆ, ರಸ್ತೆಗಳ ವಿಸ್ತರಣೆ, ಸ್ವಚ್ಛ ಪರಿಸರ, ಇವುಗಳಿಂದ ಸಂಸ್ಥಾನ ಹೊಸ ರೂಪ ಪಡೆಯುವಂತಾಯಿತು. ಇದನ್ನು ಇಲ್ಲಿ ಜ್ಞಾಪಿಸಿಕೊಳ್ಳಲು ಕಾರಣ, ಈಗ್ಯೆ ಮೂರು ವರ್ಷಗಳ ಹಿಂದೆ ಕೊರೊನಾ ಬಂದಾಗ ಸರ್ಕಾರ ತೆಗೆದುಕೊಂಡ ಉಪಕ್ರಮಗಳ ಬಗ್ಗೆ ನಮ್ಮಲ್ಲಿ ಈಗಲೂ ಚರ್ಚೆ ನಡೆಯುತ್ತಿದೆ. ಅಷ್ಟೇ ಅಲ್ಲ, ಪರಿಣಾಮಕಾರಿಯಾಗಿ, ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ಕ್ರಮಗಳನ್ನು ಕೈಗೊಳ್ಳಲಾಯಿತೇ ಎಂಬುದನ್ನು ವಿಚಾರಣೆ ಮಾಡಲು ಸರ್ಕಾರ ಆಯೋಗವೊಂದನ್ನು ನೇಮಿಸಿ ವರದಿ ಪಡೆದುಕೊಂಡಿದೆ. ಅಂದಿನ ಪ್ಲೇಗ್, ಇಂದಿನ ಕೊರೊನಾ; ಅಂದಿನ ನಾಲ್ವಡಿ, ಇಂದಿನ ನಾವು...? ಹೋಲಿಕೆ ಅನಗತ್ಯ.
- ಜಾತಿಗಣತಿ, ಸಾಮಾಜಿಕ ನ್ಯಾಯದ ಬಗ್ಗೆ ಇನ್ನೂ ನಮ್ಮ ಗೊಂದಲ ಮುಗಿದಿಲ್ಲ. ಆದರೆ ಅಂದೇ 'ಮಿಲ್ಲರ್ ಆಯೋಗ' ರಚಿಸಿದ ನಾಲ್ವಡಿ ಅವರ ಸಾಮಾಜಿಕ ಕಳಕಳಿಗೆ ನಾವು ಯಾರೂ ಸಾಟಿಯಲ್ಲ! ಆದುದರಿಂದಲೇ ಕುವೆಂಪು ಅವರು ತಮ್ಮ ಕವನದಲ್ಲಿ ಪರಮಹಂಸ, ವಿವೇಕಾನಂದರು ಸಾರಿ ಹೇಳಿದ 'ಸರ್ವಧರ್ಮ ಸಮನ್ವಯ' ತತ್ವವನ್ನು ನಾಲ್ವಡಿಯವರು ಕಾರ್ಯದಲ್ಲಿ ತೋರಿಸಿದರೆಂದು ಹೇಳುತ್ತಾರೆ.
- 'ಕನ್ನಡದ ಕಣ್ವ' ರೆಂದು ಕರೆಯಲ್ಪಡುವ ಬಿ.ಎಂ.ಶ್ರೀ ಅವರು ನಾಲ್ವಡಿಯವರ ಕಾಲದಲ್ಲಿ ಅರಮನೆಗೆ ನಿಕಟವರ್ತಿಯಾಗಿದ್ದವರು. ಅವರು ತಮ್ಮ 'ಶ್ರೀ ಕೃಷ್ಣರಾಜ ರಜತ ಮಹೋತ್ಸವ ಪ್ರಗಾಥ' ಕಾವ್ಯದಲ್ಲಿ ನಾಲ್ವಡಿ ಅವರ ವ್ಯಕ್ತಿತ್ವ ಮತ್ತು ಸಾಧನೆಗಳ ಚಿತ್ರಣವನ್ನು ನೀಡುತ್ತಾರೆ. ನಾಲ್ವಡಿ ಅವರನ್ನು ಕಾಯುವಂತೆ 'ಬೆಟ್ಟದೊಡತಿ' ಯನ್ನು ಬೇಡಿಕೊಳ್ಳುತ್ತ, 'ಹೊನ್ನುನಡೆಯ, ಹೊನ್ನನುಡಿಯ, ಕನ್ನಡಿಗರ ವಯಿರಮುಡಿಯ, ಒಡೆಯ ಕೃಷ್ಣನ' ಎನ್ನುತ್ತಾರೆ.

## ❖ 300 ಲೀಟರ್ ಎದೆಹಾಲು ದಾನ ಮಾಡಿದ ಮಹಿಳೆ

- ತಮಿಳುನಾಡಿನ ತಿರುಚಿರಾಪಲ್ಲಿಯ ಮಹಿಳೆಯೊಬ್ಬರು 300 ಲೀಟರ್ ಎದೆಹಾಲು ದಾನ ಮಾಡಿ ಸಹಸ್ರಾರು ಶಿಶುಗಳನ್ನು ರಕ್ಷಿಸಿದ್ದಾರೆ.
- ಈ ಮೂಲಕ ಅವರು ಅವಧಿಗೂ ಮುನ್ನ ಜನಿಸಿದ ಮತ್ತು ಗಂಭೀರ ಸ್ಥಿತಿಯಲ್ಲಿರುವ ನವಜಾತ ಶಿಶುಗಳ ಜೀವ ಉಳಿಸಲು ನೆರವಾಗಿದ್ದಾರೆ.
- ಎರಡು ಮಕ್ಕಳ ತಾಯಿಯಾದ ಸೆಲ್ವಾ ಬೃಂದಾ ಅವರು 2023ರಿಂದ ಏಪ್ರಿಲ್‌ನಿಂದ 2025ರ ಫೆಬ್ರುವರಿವರೆಗೆ 22 ತಿಂಗಳು 300.17 ಲೀಟರ್ ಎದೆಹಾಲನ್ನು ಮಹಾತ್ಮ ಗಾಂಧಿ ಮೆಮೋರಿಯಲ್ ಸರ್ಕಾರಿ ಆಸ್ಪತ್ರೆಯ ಎದೆಹಾಲು ಬ್ಯಾಂಕಿಗೆ ದಾನ ಮಾಡಿದ್ದಾರೆ.
- ಎದೆಹಾಲಿನ ಬ್ಯಾಂಕ್ 2023–24ರ ಅವಧಿಯಲ್ಲಿ ಸಂಗ್ರಹಿಸಿದ ಒಟ್ಟು ಹಾಲಿನಲ್ಲಿ ಬೃಂದಾ ಅವರ ಕೊಡುಗೆಯೇ ಅರ್ಧದಷ್ಟಿದೆ ಎಂದು ವಿವರಿಸಿದ್ದಾರೆ.
- ಈ ಮಹತ್ವದ ಸೇವೆಯ ಕಾರಣಕ್ಕೆ **ಬೃಂದಾ ಅವರ ಹೆಸರು 'ಏಷ್ಯಾ ಬುಕ್ ಆಫ್ ರೆಕಾರ್ಡ್ಸ್' ಮತ್ತು 'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್'** ನಲ್ಲಿ ಸ್ಥಾನ ಪಡೆದಿದೆ.
- 'ವಿಶ್ವ ಸ್ತನ್ಯಪಾನ ಸಪ್ತಾಹ' ದ ಸಮಾರೋಪ ಸಮಾರಂಭದಲ್ಲಿ ಬೃಂದಾ ಅವರನ್ನು ಎದೆಹಾಲಿನ ಬ್ಯಾಂಕಿನ ಅಧಿಕಾರಿಗಳು ಸನ್ಮಾನಿಸಲಿದ್ದಾರೆ.

## ❖ ಚೀನಾಕ್ಕೆ ಮೋದಿ ಎರಡು ದಿನಗಳ ಭೇಟಿ

- 'ಪ್ರಧಾನಿ ನರೇಂದ್ರ ಮೋದಿ ಅವರು ಶಾಂಘೈ ಸಹಕಾರ ಒಕ್ಕೂಟದಲ್ಲಿ (ಎಸ್‌ಸಿಒ) ಪಾಲ್ಗೊಳ್ಳಲು ಚೀನಾಕ್ಕೆ ಆಗಸ್ಟ್ 31 ಮತ್ತು ಸೆಪ್ಟೆಂಬರ್1ರಂದು ಎರಡು ದಿನಗಳ ಭೇಟಿ ನೀಡಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.
- ಲಡಾಖ್‌ನ ಗಾಲ್ವಾನ್‌ನಲ್ಲಿನ 2020ರ ಭಾರತ ಮತ್ತು ಚೀನಾ ಸೇನಾ ಸಂಘರ್ಷದ ಬಳಿಕ ಎರಡೂ ದೇಶಗಳ ಸಂಬಂಧ ಹಳಸಿತ್ತು.
- ಹಳಸಿದ ಸಂಬಂಧ ಸರಿಪಡಿಸಿಕೊಳ್ಳುವ ಪ್ರಯತ್ನದಲ್ಲಿ ಎರಡೂ ದೇಶಗಳು ಹಲವು ಕ್ರಮಗಳನ್ನು ಕೈಗೊಂಡಿವೆ. ಈ ಕಾರಣದಿಂದಾಗಿಯೂ ಮೋದಿ ಅವರ ಭೇಟಿ ಪ್ರಾಮುಖ್ಯ ಪಡೆದಿದೆ. ಸುಮಾರು ಏಳು ವರ್ಷಗಳ ಬಳಿಕ ಪ್ರಧಾನಿ ಮೋದಿ ಅವರು ಚೀನಾಕ್ಕೆ ತೆರಳಿದ್ದಾರೆ.

**ಕ್ವಾಡ್ ಶೃಂಗಸಭೆ: ಟ್ರಂಪ್ ಆಗಮನ ಅನಿಶ್ಚಿತ**

- ಕ್ವಾಡ್ ಶೃಂಗಸಭೆಯು ಭಾರತದಲ್ಲಿ ಇದೇ ವರ್ಷದಲ್ಲಿ ನಡೆಯಲಿದೆ. ಈ ಶೃಂಗಸಭೆಗಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತಕ್ಕೆ ಭೇಟಿ ನೀಡಬೇಕಿತ್ತು. ಆದರೆ, ಸುಂಕದ ವಿಚಾರದಲ್ಲಿ ಅಮೆರಿಕ ಮತ್ತು ಭಾರತ ಸಂಬಂಧದಲ್ಲಿ ಬಿರುಕು ಮೂಡಿದೆ. ಈ ಕಾರಣದಿಂದಾಗಿ ಟ್ರಂಪ್ ಅವರು ಭಾರತಕ್ಕೆ ಬರುವ ಕುರಿತು ಅನಿಶ್ಚಿತ ಸ್ಥಿತಿ ನಿರ್ಮಾಣವಾಗಿದೆ. **ಕ್ವಾಡ್‌ನ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಈಗಾಗಲೇ ಎರಡು ಸುತ್ತಿನ ಸಭೆಗಳನ್ನು ಅಮೆರಿಕದಲ್ಲಿ ನಡೆದಿವೆ.**

## ❖ ಟೆಸ್ಟ್ ರ್‍ಯಾಂಕಿಂಗ್: 15ನೇ ಸ್ಥಾನಕ್ಕೆ ಸಿರಾಜ್

- ಇಂಗ್ಲೆಂಡ್ ವಿರುದ್ಧ ದಿ ಓವಲ್‌ನಲ್ಲಿ ಅಂತಿಮ ಟೆಸ್ಟ್ ಪಂದ್ಯದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಪರಿಣಾಮ ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಐಸಿಸಿ ಟೆಸ್ಟ್ ಕ್ರಮಾಂಕಪಟ್ಟಿಯಲ್ಲಿ **ಜೀವನಶ್ರೇಷ್ಠ 15ನೇ ಸ್ಥಾನಕ್ಕೆ** ಏರಿದ್ದಾರೆ.

## ❖ 17 ಮಸೂದೆಗಳಿಗೆ ಸಂಪುಟ ಒಪ್ಪಿಗೆ

- ಗ್ರೇಟರ್ ಬೆಂಗಳೂರು, ದೇವದಾಸಿ ಪದ್ಧತಿ ನಿರ್ಮೂಲನೆ, ಸೌಹಾರ್ದ ಸಹಕಾರಿ ತಿದ್ದುಪಡಿ ಮಸೂದೆ ಸೇರಿ ವಿಧಾನಮಂಡಲದ ಅಧಿವೇಶನದಲ್ಲಿ ಮಂಡಿಸಲು ಉದ್ದೇಶಿಸಿರುವ 17 ಮಸೂದೆಗಳಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.
- 'ರೋಹಿತ್ ವೇಮುಲ ಮಸೂದೆ' ಬಗ್ಗೆ ಇನ್ನಷ್ಟು ಚರ್ಚೆ ನಡೆಯಬೇಕಾಗಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಗಿದೆ.
- ಅಲ್ಲದೇ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ ರಚನೆ, ಆಯುಕ್ತರ ನೇಮಕಾತಿ ಹಾಗೂ ಅಧಿಕಾರ ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದಂತೆ ಶಾಸನ ಬದ್ಧ ಅವಕಾಶ ನೀಡಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2024 ಕ್ಕೆ ತಿದ್ದುಪಡಿ ಮಾಡಲಾಗಿದೆ. ಆಯುಕ್ತಾಲಯ ರಚನೆ ಯಿಂದ ನಗರಾಭಿವೃದ್ಧಿ ಪ್ರಾಧಿಕಾರ ಗಳು ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ನಿಯಂತ್ರಣ ಆಯುಕ್ತಾಲ ಯದ ವ್ಯಾಪ್ತಿಗೆ ಒಳಪಡಲಿದೆ.

**ಪ್ರಮುಖ ಮಸೂದೆಗಳು:**

Iಕರ್ನಾಟಕ ದೇವದಾಸಿ ಪದ್ಧತಿ (ತಡೆಗಟ್ಟುವಿಕೆ, ನಿಷೇಧ, ಪರಿಹಾರ ಮತ್ತು ಪುನರ್ವಸತಿ) ಮಸೂದೆ 2025

Iಕರ್ನಾಟಕ ಅಪರಾಧ ಮುಕ್ತಗೊಳಿಸುವಿಕೆ (ಉಪಬಂಧಗಳ ತಿದ್ದುಪಡಿ)ಮಸೂದೆ 2025

Iನೋಂದಣಿ(ಕರ್ನಾಟಕ ತಿದ್ದುಪಡಿ)ಮಸೂದೆ, 2025

Iಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಅನುಕೂಲತೆ ಮತ್ತು ನಿಯಂತ್ರಣಾ)(ತಿದ್ದುಪಡಿ) ಮಸೂದೆ 2025

I ಕರ್ನಾಟಕ ಪುರಸಭೆಗಳ ಹಾಗೂ ಇತರೆ ಕಾನೂನುಗಳ(ತಿದ್ದುಪಡಿ) ಮಸೂದೆ 2025

I ಕರ್ನಾಟಕ ಬಂದರು(ಲ್ಯಾಂಡಿಂಗ್ ಮತ್ತು ಶಿಪ್ಪಿಂಗ್ ಫೀಸ್)(ತಿದ್ದುಪಡಿ) ಮಸೂದೆ 2025

I ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ಮಸೂದೆ 2025

Iಕರ್ನಾಟಕ ಭೂ ಸುಧಾರಣೆ ಗಳು ಮತ್ತು ಇತರೆ ಕಾನೂನು(ತಿದ್ದುಪಡಿ) ಮಸೂದೆ 2025

Iಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ಮಸೂದೆ 2025

Iಗ್ರೇಟರ್ ಬೆಂಗಳೂರು ಆಡಳಿತ(ತಿದ್ದುಪಡಿ) ಮಸೂದೆ 2025

Iಕರ್ನಾಟಕ ಅತ್ಯವಶ್ಯಕ ಸೇವೆಗಳ ನಿರ್ವಹಣಾ (ತಿದ್ದುಪಡಿ) ಮಸೂದೆ 2025

Iಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ)ಮಸೂದೆ 2025

I ಕರ್ನಾಟಕ ಅಂತರ್ಜಲ(ಅಭಿ ವೃದ್ಧಿ, ನಿರ್ವಹಣೆ, ನಿಯಂತ್ರಣ) (ತಿದ್ದುಪಡಿ) ಮಸೂದೆ-2025

## ❖ ಒಳ ಮೀಸಲು: ಮಾದಿಗರೇ ಮೇಲುಗೈ

**ಅತೀ ಹೆಚ್ಚು ಜನಸಂಖ್ಯೆ ಇರುವ ಜಾತಿಗಳು (1 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ)**

| ಜಾತಿ | ಜನಸಂಖ್ಯೆ |
|---|---|
| ಮಾದಿಗ | 27,73,780 |
| ಹೊಲೆಯ | 24,72,103 |
| ಬಂಜಾರ | 14,05,272 |
| ಬೋವಿ | 11,29,301 |
| ಭಾಂಬಿ, ಭಾಂಭಿ | 5,10,454 |
| ಛಲವಾದಿ | 3,76,448 |
| ಬೇಡ ಜಂಗಮ | 3,22,049 |
| ಆದಿ ದ್ರಾವಿಡ | 3,20,641 |
| ಕೊರಮ | 2,43,620 |
| ಪರೈಯನ್,ಪರಯ | 1,61,164 |
| ಆದಿ ಕರ್ನಾಟಕ | 1.47.199 |

**ಜನಸಂಖ್ಯೆವಾರು ಜಾತಿಗಳು**

| ಜನಸಂಖ್ಯೆ | ಜಾತಿಗಳು |
|---|---|
| 10 ಸಾವಿರಕ್ಕಿಂತ ಕಡಿಮೆ | 73 |
| 10 ಸಾವಿರದಿಂದ 50 ಸಾವಿರ | 12 |
| 50 ಸಾವಿರದಿಂದ 1 ಲಕ್ಷ | 5 |
| 1 ಲಕ್ಷಕ್ಕಿಂತ ಹೆಚ್ಚು | 11 |

**ಅತೀ ಕಡಿಮೆ ಜನಸಂಖ್ಯೆ ಇರುವ ಜಾತಿ (100ಕ್ಕಿಂತ ಕಡಿಮೆ ಜನಸಂಖ್ಯೆ)**

| ಜಾತಿ | ಜನಸಂಖ್ಯೆ |
|---|---|
| ಕೆಪ್ಮಾರಿಸ್ | 6 |
| ಮಾಲ ಹನ್ನಯ್ | 8 |
| ಕೋಲುಪುಲುವಂದ್ಲು | 18 |
| ಮಸ್ತಿ | 33 |
| ಮಾಲ ಮಸ್ತಿ | 38 |
| ಮನ್ನೆ | 51 |
| ಬಿಂದ್ಲ | 52 |
| ಸಪರಿ | 55 |
| ಲಿಂಗದೇರ್ | 60 |
| ಮಾಲ ಜಂಗಮ | 62 |
| ಮವಿಲನ್ | 66 |
| ಮಾಲ ಸಾಲೆ,ನೆಟ್ಕನಿ | 67 |
| ಚಾಂಡಾಲ | 76 |
| ಕದ್ಮೈಯಾನ್ | 76 |
| ಎಲ್ಲಮಲ್ವರ್, ಯಿಲ್ಲಮ್ಮಲವಂಡ್ಲು | 80 |
| ಪಣ್ಣಿಯಂದಿ | 83 |
| ಸಾಂಬನ್ | 93 |

**ಪರಿಶಿಷ್ಟ ಜಾತಿಗಳ ಸಂಖ್ಯೆ- ಮೀಸಲಾತಿ ಹಂಚಿಕೆ**

| ಪ್ರವರ್ಗ | ಜಾತಿಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಜನಸಂಖ್ಯೆ (ಶೇ) | ಮೀಸಲಾತಿ ಹಂಚಿಕೆ (ಶೇ) |
|---|---|---|---|---|
| ಪ್ರವರ್ಗ 'ಎ' | 59 | 5,22,099 | 4.97 | 1 |
| ಪ್ರವರ್ಗ 'ಬಿ' | 18 | 36,69,246 | 34.91 | 6 |
| ಪ್ರವರ್ಗ 'ಸಿ' | 17 | 30,08,633 | 28.63 | 5 |
| ಪ್ರವರ್ಗ 'ಡಿ' | 04 | 28,34,939 | 26.97 | 4 |
| ಪ್ರವರ್ಗ 'ಇ' | 03 | 4,74,954 | 4.52 | 1 |
| ಒಟ್ಟು | 101 | 1,05,09,871 | 100 | 17 |

- ಪರಿಶಿಷ್ಟ ಜಾತಿ ಪಟ್ಟಿ ಯಲ್ಲಿರುವ 101 ಜಾತಿಗಳಿಗೆ ಒಳ ಮೀಸಲಾತಿ ಹಂಚಿಕೆ ಮಾಡುವ ಉದ್ದೇಶ ದಿಂದ ರಾಜ್ಯದಾದ್ಯಂತ ನಡೆಸಿದ ಸಮೀಕ್ಷೆಯಲ್ಲಿ ಮಾದಿಗರು (ಎಡಗೈ) ಅತೀ ಹೆಚ್ಚು 27,73,780 ಜನಸಂಖ್ಯೆ ಹೊಂದಿರುವುದು ಗೊತ್ತಾಗಿದೆ. ಎರಡನೇ ಸ್ಥಾನದಲ್ಲಿ ಹೊಲೆಯ (ಬಲಗೈ) ಉಪ ಜಾತಿಯವರಿದ್ದಾರೆ (24,72,103).
- ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಹಂಚಿಕೆ ಮಾಡಲು ರಾಜ್ಯ ಸರ್ಕಾರ ರಚಿಸಿದ್ದ ನಿವೃತ್ತ ನ್ಯಾಯ ಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಏಕಸದಸ್ಯ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಈ ಮಾಹಿತಿಯಿದೆ.
- ‘101 ಜಾತಿಗಳ ಪೈಕಿ, ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಜಾತಿಗಳ ಸಂಖ್ಯೆ 90. ಅವುಗಳಲ್ಲಿ ಬಹುತೇಕ ಜಾತಿಗಳು ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸ ಮಾಡುತ್ತಿಲ್ಲ. ಬೇರೆ, ಬೇರೆ ಪ್ರದೇಶಗಳಲ್ಲಿ ಹಂಚಿಹೋಗಿದ್ದಾರೆ. ಸಣ್ಣಪುಟ್ಟ ಜಾತಿಗಳು ಜನಸಂಖ್ಯೆ ಕಡಿಮೆ ಇರುವ ಕಾರಣ ರಾಜಕೀಯವಾಗಿ ಬಲ ಕಳೆದು ಕೊಂಡಿದ್ದಾರೆ. ಯಾವುದೇ ವಿಧಾನ ಸಭಾ ಕ್ಷೇತ್ರದಲ್ಲಿ ಈ ಜಾತಿಗಳ ಸಂಖ್ಯೆ ನಿರ್ಣಾಯಕ ಪಾತ್ರ ವಹಿಸಲು ಸಾಧ್ಯ ಆಗಿಲ್ಲ. ಮೀಸಲಾತಿ ಇದ್ದರೂ ಬಲಿಷ್ಠ ಜಾತಿಗಳ ಜೊತೆ ಸ್ಪರ್ಧೆ ಮಾಡಿ ಗೆಲ್ಲುವ ಸ್ಥಿತಿಯಲ್ಲಿಲ್ಲ. ಜೊತೆಗೆ, ಚುನಾವಣಾ ವ್ಯವಸ್ಥೆಯು ಜಾತಿ ಮತ್ತು ಹಣದ ಪ್ರಭಾವಕ್ಕೆ ಒಳಗಾಗಿರುವ ಕಾರಣ ಸಣ್ಣಪುಟ್ಟ ಜಾತಿಯ ಜನ ರಾಜಕೀಯ ಅಧಿಕಾರ ಪಡೆಯಲು ಸಾಧ್ಯ ಆಗಿಲ್ಲ’ ಎಂದು ವರದಿ ಹೇಳಿದೆ.
- **ಆಯೋಗ ಹೇಳಿರುವುದೇನು?**: ‘ಹಾಗೆಂದು, ಹೀಗೆ ಹಂಚಿಕೆ ಮಾಡಿರುವ ಒಳ ಮೀಸಲಾತಿಯು ಶಾಶ್ವತವೂ ಅಲ್ಲ, ಅಥವಾ ಅಂತಿಮವೂ ಅಲ್ಲ. ಜನಸಂಖ್ಯೆ ಮತ್ತು ಜಾತಿಯ ಗಣತಿ ಅಥವಾ ಸಮೀಕ್ಷೆಯಲ್ಲಿ ಸಂಗ್ರಹಿಸಿದ ದತ್ತಾಂಶವು ನಿಂತ ನೀರಲ್ಲ. ಬದಲಾಗಿ ಅದು ಚಲನಾತ್ಮಕವಾದದ್ದು. ಜನನ, ಮರಣ, ವಲಸೆ, ಆಹಾರ, ಆರೋಗ್ಯ ಇತ್ಯಾದಿಗಳು ಬದಲಾದಂತೆ ಕಾಲಕಾಲಕ್ಕೆ ದತ್ತಾಂಶವೂ ಬದಲಾಗುತ್ತಾ ಹೋಗುತ್ತದೆ. ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ಒಳ ಮೀಸಲಾತಿಯನ್ನು ಪರಿಷ್ಕರಿಸಬೇಕಾಗುತ್ತದೆ.
- ಕರ್ನಾಟಕ ಸರ್ಕಾರದ ಜಾತಿವಾರು ಸಮೀಕ್ಷೆ, ಕೇಂದ್ರ ಸರ್ಕಾರವು ರಾಷ್ಟ್ರೀಯ ಜನಗಣತಿಯ ಜತೆಗೆ ಜಾತಿ ಗಣತಿ ನಡೆಸಲು ಪ್ರಕ್ರಿಯೆ ಆರಂಭಿಸಿದೆ. ಇವು ಗಳಿಂದ ಲಭ್ಯವಾಗುವ ದತ್ತಾಂಶದಲ್ಲಿ ಏರುಪೇರುಗಳು ಕಂಡುಬಂದರೆ ಒಳ ಮೀಸಲಾತಿಯನ್ನು ಪರಿಷ್ಕರಿಸಬಹುದು.
- ‘ಮೀಸಲಾತಿ ಸೌಲಭ್ಯ ಪಡೆದು ಕೊಂಡಿರುವ ಕೆಲವು ಜಾತಿಗಳಲ್ಲಿ ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಚಲನಶೀಲತೆ ಯನ್ನು ಕಾಣಬಹುದು. ಈ ಸಮುದಾಯ ದವರು ಸ್ವಲ್ಪಮಟ್ಟಿಗೆ ಸಬಲೀಕರಣ ಗೊಂಡಿದ್ದಾರೆ. ಮೀಸಲಾತಿ ಸವಲತ್ತು ತಲುಪಿಯೇ ಇಲ್ಲದ ಕೆಲವು ಜಾತಿಗಳವರ ಜೀವನ ಹೀನಾಯವಾಗಿದೆ. ಇವರ ಮತ್ತು ಇವರ ಮಕ್ಕಳ ಶೈಕ್ಷಣಿಕ ಮಟ್ಟ ಬಹಳ ಕಡಿಮೆ ಇದೆ. ಉನ್ನತ ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗವೂ ಇಲ್ಲ. ಇಂತಹ ಜಾತಿಗಳ ಶೈಕ್ಷಣಿಕ, ಔದ್ಯೋಗಿಕ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಯನ್ನು ಕೂಡಾ ಪರಿಗಣನೆಗೆ ತೆಗೆದುಕೊಂಡು ಮೀಸಲಾತಿ ಪ್ರಮಾಣವನ್ನು ಹಂಚ ಲಾಗಿದೆ’ ಎಂದು ಆಯೋಗ ಹೇಳಿದೆ.

## ❖ ಸ್ವಾತಂತ್ರ್ಯೋತ್ಸವ ಕಲಾವಿದೆ ಸರಸ್ವತಿಗೆ ಆಹ್ವಾನ

- ತಾಲ್ಲೂಕಿನ ಮನಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಸುವಂತೆಯ ಸರಸ್ವತಿ ಈಶ್ವರ ನಾಯ್ಕ ಅವರಿಗೆ ನವದೆಹಲಿಯಲ್ಲಿ 78ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ಭವನದಿಂದ ಆಮಂತ್ರಣ ಬಂದಿದೆ.
- ಸಂಜೀವಿನಿ ಯೋಜನೆಯಡಿ ನಡೆಯುವ ಸರಸ್ ಮೇಳಗಳಲ್ಲಿ ಪಾಲ್ಗೊಂಡು ಚಿತ್ತಾರ ಕಲೆಯನ್ನು ಇಡೀ ರಾಷ್ಟ್ರಕ್ಕೆ ಪರಿಚಯಿಸಿದ್ದಕ್ಕೆ ಸರಸ್ವತಿ ಅವರಿಗೆ ಈ ಅವಕಾಶ ಸಿಕ್ಕಿದೆ. ಅಲ್ಲದೆ, ಅವರು ಮನಮನೆ ಸಂಜೀವಿನಿ ಒಕ್ಕೂಟದ ಅಧ್ಯಕ್ಷರಾಗಿದ್ದಾರೆ. ಸರಸ್ವತಿ ನಾಯ್ಕ ಅವರ ಪತಿ **ಹಸೆ ಚಿತ್ತಾರ** ಕಲಾವಿದ ಈಶ್ವರ ನಾಯ್ಕ ಹಸುವಂತೆ ಅವರಿಗೆ 2025ರ ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸಿತ್ತು.

## ❖ ಅಂಗಾಂಗ ಕಸಿ ದುರ್ಬಲರಿಗೆ ದುರ್ಲಭ

ಅಂಗಾಂಗ ಕಸಿಯ ತಂತ್ರಜ್ಞಾನ ಜಗತ್ತಿನಾದ್ಯಂತ ಅನೇಕ ಜೀವಗಳನ್ನು ಉಳಿಸುತ್ತಿದೆ. ಆದಾಗ್ಯೂ, ಈ ವಲಯದಲ್ಲಿ ಕೆಲವು ಸಮಸ್ಯೆಗಳು, ಅಂತರಗಳು ಹಾಗೆಯೇ ಉಳಿದಿವೆ. ಜಗತ್ತಿನಾದ್ಯಂತ ಶೋಷಿತ ಜನಾಂಗಗಳು, ಸಮುದಾಯಗಳು, ವ್ಯಕ್ತಿಗಳು ಮತ್ತು ಸಾಮಾಜಿಕವಾಗಿ, ಆರ್ಥಿಕವಾಗಿ ಕೆಳಮಟ್ಟದಲ್ಲಿರುವವರಿಗೆ ಅಂಗಾಂಗ ಕಸಿ ಸೌಲಭ್ಯ ಮತ್ತು ತಂತ್ರಜ್ಞಾನ ಅಲಭ್ಯವಾಗಿಯೇ ಉಳಿದಿದೆ. ಭಾರತದಲ್ಲಿಯೂ ಪುರುಷ–ಮಹಿಳೆ, ನಗರ–ಗ್ರಾಮೀಣ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ ಅಂತರಗಳಿರುವುದು 'ದಿ ಲ್ಯಾನ್ಸೆಟ್' ಅಧ್ಯಯನದಲ್ಲಿ ಕಂಡುಬಂದಿದೆ. ಎಲ್ಲರಿಗೂ ಸಮಾನ ಅವಕಾಶಗಳು ಸಿಗಬೇಕು ಎಂದರೆ, ಅದಕ್ಕೆ ತಕ್ಕಂತೆ ನೀತಿ ನಿರೂಪಣೆ ಮಾಡಬೇಕು ಎಂದು ವರದಿ ಹೇಳಿದೆ

ಭಾರತದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿಯೇ ಹೆಚ್ಚು ಕಸಿ; ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲಸೌಕರ್ಯ, ಸಂಪನ್ಮೂಲದ ಕೊರತೆ

# ಅಂಗಾಂಗ ಕಸಿ ದುರ್ಬಲರಿಗೆ ದುರ್ಲಭ



**17,000-18,000** ಭಾರತದಲ್ಲಿ ಪ್ರತಿ ವರ್ಷ ನಡೆಯುತ್ತಿರುವ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ

**0.65** ಭಾರತದಲ್ಲಿ ಅಂಗಾಂಗ ಕಸಿಯ ದರ (ಪ್ರತಿ 10 ಲಕ್ಷ ಜನರಿಗೆ)

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಮಾನವ ದೇಹದ ಅಂಗಗಳನ್ನು ಸಂರಕ್ಷಿಸಿ ಇಡುವ ತಂತ್ರಜ್ಞಾನದಲ್ಲಿ ಪ್ರಗತಿ, ರೋಗನಿರೋಧಕ ಶಕ್ತಿಯ ಉತ್ತಮ ನಿರ್ವಹಣೆಯಿಂದ ಅಂಗಾಂಗ ದಾನ ವಲಯದಲ್ಲಿ ದೊಡ್ಡ ಮಟ್ಟದ, ಸಕಾರಾತ್ಮಕ ಬದಲಾವಣೆಗಳು ಘಟಿಸುತ್ತಿವೆ. ಆದರೆ, ಈ ಬೆಳವಣಿಗೆಗಳ ಫಲ ಎಲ್ಲರಿಗೂ ಸಮಾನವಾಗಿ ಸಿಗುತ್ತಿಲ್ಲ. ಈ ವಿಚಾರದಲ್ಲಿ ಪ್ರಾದೇಶಿಕ, ಆರ್ಥಿಕ ಹಾಗೂ ಸಾಮಾಜಿಕ ಅಂತರಗಳಿದ್ದು, ಅವನ್ನು ಹೋಗಲಾಡಿಸಲು ನೀತಿ ನಿರೂಪಣೆ ಮತ್ತು ಸಂಪನ್ಮೂಲಗಳ ಪೂರೈಕೆಯಲ್ಲಿ ಬದಲಾವಣೆ ಆಗಬೇಕಿದೆ ಎಂದು 'ದಿ ಲ್ಯಾನ್ಸೆಟ್' ವರದಿ ಪ್ರತಿಪಾದಿಸಿದೆ.

ಭಾರತವು ಅಂಗಾಂಗ ಕಸಿಯಲ್ಲಿ ಭಾರಿ ಪ್ರಗತಿ ಸಾಧಿಸಿದೆ. ಹೊರದೇಶಗಳಿಂದಲೂ ಅಂಗಾಂಗ ಕಸಿಗಳಿಗಾಗಿ ರೋಗಿಗಳು ಭಾರತಕ್ಕೆ ಬರುತ್ತಿದ್ದಾರೆ. 2024ರಲ್ಲಿ 39 ವಿವಿಧ ದೇಶಗಳ ರೋಗಿಗಳು ಅಂಗಾಂಗ ಕಸಿಗಾಗಿ ಭಾರತಕ್ಕೆ ಭೇಟಿ ನೀಡಿದ್ದರು ಎಂದು 'ಇಂಡಿಯನ್ ಸೊಸೈಟಿ ಆಫ್ ಆರ್ಗನ್ ಟ್ರಾನ್ಸ್‌ಪ್ಲಾಂಟೇಷನ್' ಹೇಳಿದೆ. ಆದರೂ, ಭಾರತದಲ್ಲಿ ನಗರ–ಗ್ರಾಮೀಣ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ನಡುವೆ ಅಂತರಗಳಿರುವುದು ಅಧ್ಯಯನಗಳಲ್ಲಿ ಕಂಡುಬಂದಿದೆ.

ಅಂಗಾಂಗ ಕಸಿಯಲ್ಲಿ ಸಮಾನತೆ ಸಾಧಿಸುವ ವಿಚಾರದಲ್ಲಿ ಭಾರತವು ಹಿಂದುಳಿದಿದೆ. ಮಹಾನಗರಗಳಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿಯೇ ಬಹುತೇಕ ಕಸಿ ನಡೆಯುತ್ತಿದ್ದು, ಗ್ರಾಮಗಳಲ್ಲಿ ವಾಸಿಸುವ ಜನರು ಈ ವ್ಯವಸ್ಥೆಯ ಸೌಲಭ್ಯ ಪಡೆಯಲಾಗುತ್ತಿಲ್ಲ. ದೇಶದ ಬಹುತೇಕ ರಾಜ್ಯಗಳಲ್ಲಿ ಉಚಿತ ಡಯಾಲಿಸಿಸ್ ವ್ಯವಸ್ಥೆ ಲಭ್ಯವಿದ್ದರೂ ಅಂಗಾಂಗ ಕಸಿಯ ವೆಚ್ಚಕ್ಕೆ ಸಂಬಂಧಿಸಿದಂತೆ ರಾಷ್ಟ್ರ ಮಟ್ಟದಲ್ಲಿ ಸಮಗ್ರವಾದ ನಿಯಮಾವಳಿ ಇಲ್ಲ. ಕೆಲವು ಖಾಸಗಿ ಆಸ್ಪತ್ರೆಗಳ ಶೇ 90ರಷ್ಟು ಕಸಿಗಳು ವಿದೇಶಿ ಪ್ರಜೆಗಳಿಗೆ ನಡೆಯುತ್ತಿವೆ ಎಂದು ವರದಿ ಹೇಳಿದೆ.

ವರದಿಯಲ್ಲಿ ಅಂಗಾಂಗ ಕಸಿಯ ಸ್ಥಿತಿಗಳನ್ನು ಆಧರಿಸಿ ವಿವಿಧ ದೇಶಗಳನ್ನು ಐದು ಗುಂಪುಗಳನ್ನಾಗಿ ಮಾಡಲಾಗಿದ್ದು, ಭಾರತವು ನಾಲ್ಕನೇ ಗುಂಪಿನಲ್ಲಿ ಸ್ಥಾನ ಪಡೆದಿದೆ. ಈ ಗುಂಪಿನಲ್ಲಿ ದಕ್ಷಿಣ ಆಫ್ರಿಕಾವೂ ಇದೆ. ಭಾರತದಲ್ಲಿ ಉದರ, ಎದೆಗೆ ಸಂಬಂಧಿಸಿದ ಕಸಿಗಳು ಹೆಚ್ಚು ನಡೆಯುತ್ತಿವೆ. ಸತ್ತವರು ಮತ್ತು ಜೀವಂತ ದಾನಿಗಳಿಂದ ಅಂಗಾಂಗ ಸಂಗ್ರಹ ಮಾಡಿ, ಸರ್ಕಾರಿ ಮತ್ತು ಖಾಸಗಿ ಧನಸಹಾಯದೊಂದಿಗೆ ಕಸಿ ನೆರವೇರಿಸಲಾಗುತ್ತಿದೆ.

ಮಾನವ ಅಂಗಾಂಗ ಕಸಿ ಕಾಯ್ದೆ–1994 ಮೃತ ದಾನಿಯಿಂದ ಪಡೆದ ಅಂಗಾಂಗಗಳ ಕಸಿಗೆ ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ಚೌಕಟ್ಟು ಒದಗಿಸುತ್ತದೆ. 'ಮೋಹನ'ದಂಥ ಸ್ವಯಂ ಸೇವಾ ಸಂಸ್ಥೆಗಳು ವೈದ್ಯಕೀಯ ಸಿಬ್ಬಂದಿ ಕಾರ್ಯದಕ್ಷತೆ ಉತ್ತಮಪಡಿಸಲು ಹಲವು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಹಾಗಿದ್ದರೂ ದೇಶದಲ್ಲಿ ಅಂಗಾಂಗ ಕಸಿಯು ಭಿನ್ನ ಪ್ರದೇಶಗಳಲ್ಲಿ ಭಿನ್ನವಾದ ರೀತಿಯಲ್ಲಿ ನಡೆಯುತ್ತಿದೆ.

ಅನೇಕ ಭಾರತೀಯರು, ಮುಖ್ಯವಾಗಿ ಬಡವರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವವರು ಜೀವ ಉಳಿಸಲು ನೆರವಾಗುವಂಥ ಅಂಗಾಂಗ ಕಸಿಯಿಂದ ದೂರ ಉಳಿದಿದ್ದು, ಸರ್ಕಾರವು ಇವರಿಗೂ ಕಸಿ ಸೌಲಭ್ಯ ಕಲ್ಪಿಸದಿದ್ದರೆ ಈ ಅಸಮಾನತೆ ಹೀಗೆಯೇ ಮುಂದುವರಿಯಲಿದೆ ಎಂದು ವರದಿ ಹೇಳಿದೆ.

### ಐದು ಗುಂಪುಗಳು

ಜಾಗತಿಕ ಅಂಗಾಂಗ ಕಸಿಯ ವ್ಯವಸ್ಥೆಯನ್ನು ವರದಿಯಲ್ಲಿ ಐದು ಗುಂಪುಗಳಾಗಿ ವಿಂಗಡಿಸಲಾಗಿದೆ. ಒಂದನೇ ಗುಂಪಿನಲ್ಲಿ ಜಿಂಬಾಬ್ವೆ, ಚಾಡ್, ನೈಗರ್‌ನಂಥ ಅಂಗಾಂಗ ಕಸಿ ವ್ಯವಸ್ಥೆ ಇಲ್ಲದ ಕಡಿಮೆ ಮತ್ತು ಮಧ್ಯಮ ಆದಾಯದ ದೇಶಗಳು ಸ್ಥಾನ ಪಡೆದಿವೆ. ಎರಡನೇ ಗುಂಪಿನಲ್ಲಿ ಕ್ಯಾಮರೂನ್, ಉಗಾಂಡ, ಮಂಗೋಲಿಯಾದಂಥ ಸೀಮಿತ ಕಸಿ ಕೇಂದ್ರಗಳಿರುವ, ಕಿಡ್ನಿ ಕಸಿಗೆ ಹೆಚ್ಚು ಆದ್ಯತೆ ನೀಡುವ ದೇಶಗಳು ಸ್ಥಾನ ಪಡೆದಿವೆ. ಮೂರನೇ ಗುಂಪಿನಲ್ಲಿ ಹಲವು ಕಸಿ ಕೇಂದ್ರಗಳಿರುವ ಈಜಿಪ್ಟ್, ವಿಯೆಟ್ನಾಂನಂಥ ದೇಶಗಳು ಇದ್ದು, ಅವು ಹಣದ ಕೊರತೆ ಮತ್ತು ಆದ್ಯತೆಯ ಪ್ರಶ್ನೆಗಳನ್ನು ಎದುರಿಸುತ್ತಿವೆ. ಐದನೇ ಗುಂಪಿನಲ್ಲಿ ಅಮೆರಿಕ, ಸ್ಪೇನ್‌ನಂಥ ಅಂಗಾಂಗ ಕಸಿಯನ್ನು ವ್ಯವಸ್ಥಿತವಾಗಿ, ನಿರ್ದಿಷ್ಟ ಚೌಕಟ್ಟುಗಳೊಳಗೆ ನಡೆಸುತ್ತಿರುವ ದೇಶಗಳಿವೆ.

ಕಸಿ ಮಾಡಲು ಅಂಗಾಂಗಗಳಿಗಾಗಿ ಜೀವಂತ ಇರುವವರನ್ನೇ ನೆಚ್ಚಿಕೊಂಡಿರುವುದರಿಂದ ಹೆಚ್ಚು ಅಂಗಾಂಗಗಳು ಲಭ್ಯವಾಗುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಪನ್ಮೂಲದ ಕೊರತೆ ಇದೆ. ಜತೆಗೆ, ಅಂಗಾಂಗಗಳಿಗೆ ಹೆಚ್ಚು ಬೇಡಿಕೆ ಇದ್ದು, ಕಸಿ ಸಾಮರ್ಥ್ಯ ಕಡಿಮೆ ಇದೆ. ಅಂಗಾಂಗಗಳನ್ನು ಹಣ ಕೊಟ್ಟು ಕೊಳ್ಳುವಂತಹ ಅನೈತಿಕ ಪದ್ಧತಿಗಳೂ ಚಾಲ್ತಿಯಲ್ಲಿವೆ. ಒಟ್ಟು ಅಂಗಾಂಗ ಕಸಿಗಳ ಲೆಕ್ಕದಲ್ಲಿ ಭಾರತವು ಅಗ್ರ ಮೂರು ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರೂ ಒಟ್ಟಾರೆ ಜನಸಂಖ್ಯೆಗೆ ಹೋಲಿಸಿದರೆ, ಪಟ್ಟಿಯಲ್ಲಿ ಕೆಳಕ್ಕೆ ಕುಸಿಯುತ್ತದೆ ಎಂದು ಅಧ್ಯಯನ ತಂಡದ ಭಾಗವಾಗಿದ್ದವರು ಹೇಳಿದ್ದಾರೆ.

ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಮತ್ತು ಗುಜರಾತ್ ರಾಜ್ಯಗಳು ಅಂಗಾಂಗ ಕಸಿಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿವೆ. ದೇಶದಲ್ಲಿಯೇ ತಮಿಳುನಾಡು ಮುಂದಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಮೃತ ವ್ಯಕ್ತಿಗಳ ಅಂಗಾಂಗಗಳನ್ನು ಸಂಗ್ರಹಿಸಿ, ಕಸಿ ಮಾಡಲಾಗುತ್ತಿದೆ. ಅದಕ್ಕಾಗಿ ಖಾಸಗಿ ಮೂಲಗಳಿಂದಲೂ ಹಣವನ್ನು ಪೂರೈಸಲಾಗುತ್ತಿದೆ. ಒಡಿಶಾ ಮತ್ತು ಕೆಲವು ಈಶಾನ್ಯ ರಾಜ್ಯಗಳು ಇದರಲ್ಲಿ ಹಿಂದುಳಿದಿವೆ. ಜಾರ್ಖಂಡ್, ಛತ್ತೀಸಗಢ, ಬಿಹಾರ, ಉತ್ತರ ಪ್ರದೇಶ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಈ ವ್ಯವಸ್ಥೆ ಈಗ ಪ್ರವರ್ಧಮಾನಕ್ಕೆ ಬರುತ್ತಿದೆ ಎಂದು ಅವರು ತಿಳಿಸಿದ್ದಾರೆ.

ದೇಶದಲ್ಲಿ ಎಲ್ಲ ವರ್ಗ, ಪ್ರದೇಶಗಳ ಜನರಿಗೂ ಸಮಾನ ಅವಕಾಶಗಳು ಸಿಗಬೇಕು ಎಂದರೆ, ಅದಕ್ಕೆ ತಕ್ಕಂತೆ ಆಸ್ಪತ್ರೆಗಳ ಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನಿಯಮಾವಳಿಗಳನ್ನು ರೂಪಿಸಬೇಕು ಎಂದು ವರದಿ ಪ್ರತಿಪಾದಿಸಿದೆ.

ಆಧಾರ: ದಿ ಲ್ಯಾನ್ಸೆಟ್‌ನ 'ಪಾಲಿಸಿ ಇನೊವೇಷನ್ಸ್ ಟು ಅಡ್ವಾನ್ಸ್ ಈಕ್ವಿಟಿ ಇನ್ ಸಾಲಿಡ್ ಆರ್ಗನ್ ಟ್ರಾನ್ಸ್‌ಪ್ಲಾಂಟೇಷನ್' ಮತ್ತು ಇತರ ವರದಿಗಳು, ಮಾಧ್ಯಮ ವರದಿಗಳು

### ಸವಾಲುಗಳು

- ರಾಷ್ಟ್ರೀಯ ಮಟ್ಟದಲ್ಲಿ ದತ್ತಾಂಶ ಕೊರತೆ
- ಸರ್ಕಾರ ಸಾಕಷ್ಟು ಬಂಡವಾಳ ಹೂಡದಿರುವುದು, ದೂರದೃಷ್ಟಿ ಕೊರತೆ
- ಎಲ್ಲರಿಗೂ ಅತ್ಯುತ್ತಮ ಚಿಕಿತ್ಸೆ ಲಭ್ಯ ಇಲ್ಲದಿರುವುದು
- ಅಂಗಾಂಗ ಕಸಿಗೆ ಶಿಫಾರಸು ಮಾಡುವ ವೈದ್ಯರು ಮತ್ತು ಅಂಗಾಂಗ ಕಸಿ ಯೋಜನೆಯ ನಡುವೆ ಸಮನ್ವಯ ಇಲ್ಲದಿರುವುದು
- ವಿಮೆ ಸೌಲಭ್ಯದ ಇತಿಮಿತಿ
- ರೋಗಿಗಳಿಗೆ ಹಣಕಾಸಿನ ಕೊರತೆ

### ಪರಿಹಾರ

- ರಾಷ್ಟ್ರೀಯ ಮಟ್ಟದಲ್ಲಿ ದತ್ತಾಂಶಗಳನ್ನು ದಾಖಲಿಸುವ ವ್ಯವಸ್ಥೆ ಅಭಿವೃದ್ಧಿಪಡಿಸಬೇಕು
- ರೋಗಿಗಳ ಮೇಲೆ ಬರುವ ಹಣಕಾಸಿನ ಹೊರೆಯನ್ನು ತಪ್ಪಿಸುವಂತಹ ನೀತಿಗಳನ್ನು ಜಾರಿಗೊಳಿಸಬೇಕು
- ಮೃತಪಟ್ಟವರ ಅಂಗಾಂಗಗಳನ್ನು ದಾನವಾಗಿ ಪಡೆಯುವ ದಿಸೆಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗಾಗಿ ಹೆಚ್ಚು ಬಂಡವಾಳ ಹೂಡಬೇಕು
- ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಯನ್ನು ಹೆಚ್ಚಿಸುವುದಕ್ಕಾಗಿ ಆಸ್ಪತ್ರೆಗಳಿಗೆ ಪ್ರೋತ್ಸಾಹ ನೀಡಬೇಕು ಮತ್ತು ಆರೈಕೆ ಸಮನ್ವಯವನ್ನು ಸುಧಾರಿಸಬೇಕು

### ಸುಧಾರಣೆ ಕಂಡಿದೆ, ಆದರೆ...

ಭಾರತದಲ್ಲಿ ಅಂಗಾಂಗ ಕಸಿ ಕ್ಷೇತ್ರದಲ್ಲಿ ವರ್ಷದಿಂದ ವರ್ಷಕ್ಕೆ ಸುಧಾರಣೆಯಾಗುತ್ತಿದೆ. ಪ್ರತಿ ದಾನಿಗೆ ಸಂಬಂಧಿಸಿದಂತೆ ಅಂಗಾಂಗ ಕಸಿಯ ಸರಾಸರಿ ಸಂಖ್ಯೆಯು 2016ರಲ್ಲಿ 2.43 ಇದ್ದರೆ, 2022ರಲ್ಲಿ ಇದು 3.05ಕ್ಕೆ ಏರಿಕೆಯಾಗಿದೆ. ಹಾಗಿದ್ದರೂ, ಬಹುತೇಕ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗಳು ಖಾಸಗಿ ಆಸ್ಪತ್ರೆಗಳಲ್ಲಿ ನಡೆಯುತ್ತಿವೆ. ಖಾಸಗಿ ಆರೋಗ್ಯ ಸೇವೆ ದುಬಾರಿಯಾಗಿರುವುದರಿಂದ ಬಹುಪಾಲು ರೋಗಿಗಳಿಗೆ ಅಂಗಾಂಗ ಕಸಿ ಮಾಡಿಸಿಕೊಳ್ಳಲು ಆಗುತ್ತಿಲ್ಲ.




ಭಾರತದಲ್ಲಿ ಹೆಚ್ಚು ಮೂತ್ರಪಿಂಡ (ಕಿಡ್ನಿ) ಕಸಿ ಮಾಡಲಾಗುತ್ತಿದೆ. ಹಾಗಿದ್ದರೂ, ಈ ಪ್ರಕ್ರಿಯೆಯು ಬಹುತೇಕ ರೋಗಿಗಗಳನ್ನು ಒಳಗೊಳ್ಳುತ್ತಿಲ್ಲ. ರೋಗಿಗಳ ನಡುವೆ ಸಮಾನತೆಯನ್ನೂ ಸಾಧಿಸಲಾಗುತ್ತಿಲ್ಲ. ಮೃತಪಟ್ಟವರ (ಮಿದುಳು ನಿಷ್ಕ್ರಿಯಗೊಂಡವರು ಮತ್ತು ಹೃದಯ ಸ್ತಂಭನಕ್ಕೆ ಒಳಗಾಗಿ ಮೃತಪಟ್ಟವರ) ಮೂತ್ರಪಿಂಡಗಳನ್ನು ಅಗತ್ಯವಿರುವವರಿಗೆ ಕಸಿ ಕಟ್ಟುವ ಪ್ರಕ್ರಿಯೆಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದ್ದರೂ ದೇಶದಲ್ಲಿ ಮೃತರ ಅಂಗಾಂಗಗಳನ್ನು ಬಳಸುವ ವ್ಯವಸ್ಥೆ ಉತ್ತಮವಾಗಿಲ್ಲ. ಇದಕ್ಕೆ ಧಾರ್ಮಿಕ, ಸಾಂಸ್ಕೃತಿಕ ನಂಬಿಕೆಗಳು, ಆರೋಗ್ಯ ವ್ಯವಸ್ಥೆಯಲ್ಲಿನ ಇತಿಮಿತಿಗಳು ಸೇರಿದಂತೆ ಹಲವು ಕಾರಣಗಳಿವೆ.

2023ರಲ್ಲಿ ಭಾರತದಲ್ಲಿ 18,378 ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಈ ಪೈಕಿ ಮೃತಪಟ್ಟ 2,935 ಮಂದಿಯ (ಶೇ 15.9ರಷ್ಟು) ಅಂಗಾಂಗಗಳನ್ನು ಮಾತ್ರ ಪಡೆಯಲಾಗಿತ್ತು.

'ದಿ ಲ್ಯಾನ್ಸೆಟ್'ನ 2024ರ ವರದಿ ಪ್ರಕಾರ, ಭಾರತದಲ್ಲಿ ವಾರ್ಷಿಕವಾಗಿ 11,243 ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗುತ್ತಿದೆ. ಆದರೆ, ಪ್ರತಿ ವರ್ಷ 2 ಲಕ್ಷ ಮಂದಿ ಮೂತ್ರಪಿಂಡ ನಿಷ್ಕ್ರಿಯ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ, ಬೇಡಿಕೆಯಷ್ಟು ಮೂತ್ರಪಿಂಡಗಳು ಲಭ್ಯವಾಗುತ್ತಿಲ್ಲ. ಬಹುತೇಕ ರೋಗಿಗಳು ಜೀವನಪೂರ್ತಿ ಡಯಾಲಿಸಿಸ್ ಅವಲಂಬಿಸಿದ್ದಾರೆ. ಇನ್ನೂ ಕೆಲವರು ಕಸಿ ಕಟ್ಟಲು ಮೂತ್ರಪಿಂಡಗಳಿಗೆ ಇಲ್ಲವೇ ಖಾಸಗಿ ಆಸ್ಪತ್ರೆಗಳಲ್ಲಿ ಕಸಿ ಶಸ್ತ್ರಚಿಕಿತ್ಸೆಗಾಗಿ ಹಣಕಾಸು ನೆರವಿಗೆ ಕಾದುಕುಳಿತಿದ್ದಾರೆ.

### ದಾನಿಗಳಲ್ಲಿ ಮಹಿಳೆಯರೇ ಹೆಚ್ಚು

ದೇಶದಲ್ಲಿ ಅಂಗಾಂಗ ದಾನ ಪ್ರಕ್ರಿಯೆಯಲ್ಲೂ ಲಿಂಗ ಅಸಮಾನತೆ ಇರುವುದರ ಬಗ್ಗೆ ಈ ವರ್ಷದ ಜೂನ್‌ನಲ್ಲಿ ಪ್ರಕಟವಾದ 'ದಿ ಲ್ಯಾನ್ಸೆಟ್'ನ ಮತ್ತೊಂದು ಅಧ್ಯಯನ ವರದಿ ಬೊಟ್ಟು ಮಾಡಿದೆ.

2000–2025ರ ನಡುವೆ ದೇಶದಲ್ಲಿ ನಡೆದಿರುವ ಕಿಡ್ನಿ ಮತ್ತು ಯಕೃತ್ (ಲಿವರ್) ವಿನಿಮಯ ಕಸಿ ಶಸ್ತ್ರಚಿಕಿತ್ಸೆಗಳನ್ನು (exchange transplantation) ಈ ಅಧ್ಯಯನದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. 1,839 ಮೂತ್ರಪಿಂಡ ಮತ್ತು 259 ಯಕೃತ್ ವಿನಿಮಯ ಕಸಿ ಶಸ್ತ್ರಚಿಕಿತ್ಸೆಗಳನ್ನು ಅಧ್ಯಯನಕ್ಕಾಗಿ ಪರಿಗಣಿಸಲಾಗಿದೆ. ಕಿಡ್ನಿ ವಿನಿಮಯ ಕಸಿಯಲ್ಲಿ ಪುರುಷರು 1,504 ಕಿಡ್ನಿಗಳನ್ನು (ಶೇ 82ರಷ್ಟು) ಪಡೆದರೆ, 1,469 ಕಿಡ್ನಿಗಳನ್ನು (ಶೇ 80ರಷ್ಟು) ಮಹಿಳೆಯರೇ ದಾನ ಮಾಡಿದ್ದಾರೆ. ಯಕೃತ್ ಅನ್ನು ಪಡೆದವರಲ್ಲೂ ಪುರುಷರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. 222 ಪುರುಷರು ಯಕೃತ್ ಪಡೆದಿದ್ದರೆ, 37 ಮಹಿಳೆಯರಿಗೆ ಮಾತ್ರ ಯಕೃತ್ ಲಭ್ಯವಾಗಿದೆ.

## ❖ ‘ಶೇ 50ರಷ್ಟು ಸುಂಕದಿಂದ ನಷ್ಟ’

# ‘ಶೇ 50ರಷ್ಟು ಸುಂಕದಿಂದ ನಷ್ಟ’

## ‘ಸುಂಕದ ದಿಢೀರ್ ಏರಿಕೆಯ ಪರಿಣಾಮ ಸಣ್ಣ ಉದ್ದಿಮೆಗಳ ಮೇಲೆ ಹೆಚ್ಚು’

ನವದೆಹಲಿ (ಎಎಫ್‌ಪಿ): ಭಾರತದ ಸರಕುಗಳಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಧಿಸಿರುವ ಶೇಕಡ 50ರಷ್ಟು ತೆರಿಗೆಯ ಕಾರಣದಿಂದಾಗಿ ಭಾರಿ ನಷ್ಟ ಉಂಟಾಗಲಿದೆ ಎಂದು ಭಾರತದ ರಫ್ತುದಾರರು ಆತಂಕ ವ್ಯಕ್ತಪಡಿಸಿದ್ದಾರೆ.

‘ಸುಂಕವನ್ನು ಹೆಚ್ಚು ಮಾಡಿರುವುದು ಭಾರತದ ರಫ್ತು ವಹಿವಾಟುಗಳಿಗೆ ಗಂಭೀರ ಸ್ವರೂಪದ ಹಿನ್ನಡೆ. ನಾವು ಅಮೆರಿಕದ ಮಾರುಕಟ್ಟೆಗೆ ಕಳುಹಿಸುವ ಶೇ 55ರಷ್ಟು ಪಾಲಿನ ಮೇಲೆ ನೇರ ಪರಿಣಾಮ ಉಂಟಾಗಲಿದೆ’ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಸಿ.ರಲ್ಹಾನ್ ಹೇಳಿದ್ದಾರೆ.

ಖರೀದಿದಾರರು ತಾವು ಯಾವ ದೇಶದ ಸರಕು ಖರೀದಿಸಬೇಕು ಎಂಬುದನ್ನು ಪುನರ್ ಪರಿಶೀಲಿಸಲು ಆರಂಭಿಸಿರುವ ಕಾರಣಕ್ಕೆ ‘ಹಲವು ರಫ್ತು ಕಾರ್ಯಾದೇಶಗಳನ್ನು ಈಗಾಗಲೇ ತಡೆಹಿಡಿಯಲಾಗಿದೆ’ ಎಂದು ಕೂಡ ಅವರು ಹೇಳಿದ್ದಾರೆ.

ಸಣ್ಣ ಹಾಗೂ ಮಧ್ಯಮ ಗಾತ್ರದ ಹಲವು ಉದ್ಯಮಗಳ ಲಾಭದ ಪ್ರಮಾಣವು ಈಗಾಗಲೇ ಬಹಳ ಕಡಿಮೆ ಇದೆ. ಈಗ ಆಗಿರುವ ದಿಢೀರ್ ವೆಚ್ಚ ಏರಿಕೆಯನ್ನು ತಾಳಿಕೊಳ್ಳುವುದು ಆಗದ ಕೆಲಸ ಎಂದು ಅವರು ವಿವರಿಸಿದ್ದಾರೆ.

‘ಅಧ್ಯಕ್ಷ ಟ್ರಂಪ್ ಅವರು ಹೆಚ್ಚುವರಿಯಾಗಿ ಶೇ 25ರಷ್ಟು ತೆರಿಗೆ ವಿಧಿಸಿರುವುದು ಜಾರಿಗೆ ಬಂದಲ್ಲಿ, ಪ್ರವರ್ಧಮಾನಕ್ಕೆ ಬರುತ್ತಿರುವ ತಯಾರಿಕಾ ಕೇಂದ್ರವಾಗಿ ಭಾರತವು ಗಳಿಸಿರುವ ಆಕರ್ಷಣೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ’ ಎಂದು ಕ್ಯಾಪಿಟಲ್ ಎಕನಾಮಿಕ್ಸ್ ಸಂಸ್ಥೆಯ ಶಿಲಾನ್ ಶಾ ಹೇಳಿದ್ದಾರೆ.

ರಫ್ತಿನಲ್ಲಿ ಆಗುವ ಇಳಿಕೆಯ ಪರಿಣಾಮವಾಗಿ ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಈ ವರ್ಷದಲ್ಲಿ ಸರಿಸುಮಾರು ಶೇ 6ರಷ್ಟು ಮಾತ್ರ ಆಗಲಿದೆ ಎಂದು ಕೂಡ ಅವರು ಅಂದಾಜು ಮಾಡಿದ್ದಾರೆ.

ಸ್ಮಾರ್ಟ್‌ಫೋನ್‌ಗಳು, ಔಷಧಗಳು, ಮುತ್ತು ಮತ್ತು ಹವಳಗಳು, ಜವಳಿ ಹಾಗೂ ಕೈಗಾರಿಕಾ ಯಂತ್ರೋಪಕರಣಗಳು ಭಾರತದಿಂದ ಅಮೆರಿಕಕ್ಕೆ ದೊಡ್ಡ ಪ್ರಮಾಣದಲ್ಲಿ ರಫ್ತಾಗುತ್ತವೆ. ಆಭರಣಗಳು ಹಾಗೂ ಸಾಗರ ಉತ್ಪನ್ನಗಳು ಕೂಡ ಹೆಚ್ಚು ರಫ್ತಾಗುತ್ತವೆ.



### ಜಾಗತಿಕ ಶಕ್ತಿಗಳು ಬೆದರಿಸುತ್ತಲೇ ಇರುತ್ತವೆ: ಗೋಯಲ್

ಭಾರತವು ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವವರೆಗೆ ಜಾಗತಿಕ ಶಕ್ತಿಗಳು ಭಾರತವನ್ನು ಬೆದರಿಸುತ್ತಲೇ ಇರುತ್ತವೆ ಎಂದು ಎಟರ್ನಲ್ ಕಂಪನಿಯ ಸಿಇಒ ದೀಪಿಂದರ್ ಗೋಯಲ್ ಹೇಳಿದ್ದಾರೆ. ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸುವ ಆದೇಶ ಹೊರಡಿಸಿದ ನಂತರ ಗೋಯಲ್ ಈ ಮಾತು ಆಡಿದ್ದಾರೆ. ‘ಬೆದರಿಕೆ’ ಹಾಗೂ ‘ಸುಂಕ’ದ ನಡುವೆ ಭಾರತವು ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರವಾಗಲು ಸಾಮೂಹಿಕ ತೀರ್ಮಾನವೊಂದನ್ನು ಮಾಡಬೇಕು ಎಂದು ಗೋಯಲ್ ಅವರು ‘ಎಕ್ಸ್’ ವೇದಿಕೆಯಲ್ಲಿ ಬರೆದಿದ್ದಾರೆ.

### ‘ಕೇಂದ್ರ ತಕ್ಷಣವೇ ನೆರವು ಒದಗಿಸಬೇಕು’

ನವದೆಹಲಿ (ಪಿಟಿಐ): ಸುಂಕವನ್ನು ದುಪ್ಪಟ್ಟು ಮಾಡಿರುವ ಅಮೆರಿಕದ ಕ್ರಮದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸಿದ್ಧ ಉಡುಪು ರಫ್ತು ಉತ್ತೇಜನಾ ಮಂಡಳಿಯು (ಎಇಪಿಸಿ) ಕೇಂದ್ರ ಸರ್ಕಾರವು ತಕ್ಷಣವೇ ಹಣಕಾಸಿನ ನೆರವು ಒದಗಿಸಬೇಕು ಎಂದು ಆಗ್ರಹಿಸಿದೆ. ಅತಿಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಹೆಚ್ಚು ಹಾನಿಯಾಗಲಿದೆ ಎಂದು ಅದು ಹೇಳಿದೆ.

‘ಈ ಪರಿಯ ಸುಂಕವನ್ನು ನಮ್ಮ ಉದ್ಯಮವು ತಾಳಿಕೊಳ್ಳಲು ಸಾಧ್ಯವೇ ಇಲ್ಲ. ಅಸಮರ್ಥನೀಯವಾದ ಈ ಸುಂಕ ಏರಿಕೆಯು ಅತಿಸಣ್ಣ ಹಾಗೂ ಮಧ್ಯಮ ಗಾತ್ರದ ಸಿದ್ಧ ಉಡುಪು ಉದ್ಯಮದ ಪಾಲಿಗೆ ಸಾವಿನ ಕರೆಗಂಟೆಯಂತೆ ಇದೆ ಎಂಬುದನ್ನು ಸರ್ಕಾರವೂ ಅರ್ಥ ಮಾಡಿಕೊಳ್ಳುತ್ತದೆ ಎನ್ನುವ ವಿಶ್ವಾಸವು ನನಗೆ ಇದೆ’ ಎಂದು ಮಂಡಳಿಯ ಅಧ್ಯಕ್ಷ ಸುಧೀರ್ ಸೇಖ್ರಿ ಹೇಳಿದ್ದಾರೆ.

ಭಾರತದ ಸಿದ್ಧ ಉಡುಪು ಉದ್ಯಮಕ್ಕೆ ಅಮೆರಿಕವು ದೊಡ್ಡ ಮಾರುಕಟ್ಟೆ. 2024ರಲ್ಲಿ ಭಾರತದ ಒಟ್ಟು ಜವಳಿ ರಫ್ತಿನಲ್ಲಿ ಅಮೆರಿಕದ ಪಾಲು ಶೇ 33ರಷ್ಟು ಇತ್ತು.

### ಜವಳಿ, ರಾಸಾಯನಿಕ ವಲಯಕ್ಕೆ ನೆರವು?

ನವದೆಹಲಿ (ಪಿಟಿಐ): ಅಮೆರಿಕವು ವಿಧಿಸಿರುವ ಸುಂಕದ ಪರಿಣಾಮವು ಹೆಚ್ಚು ಇರಲಿರುವ ಜವಳಿ ಹಾಗೂ ರಾಸಾಯನಿಕಗಳ ವಲಯಗಳಿಗೆ ರಫ್ತು ಉತ್ತೇಜನಾ ಮಿಷನ್ ಅಡಿಯಲ್ಲಿ ಕೇಂದ್ರ ಸರ್ಕಾರವು ಆದ್ಯತೆಯ ಮೇರೆಗೆ ನೆರವು ಒದಗಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಸುಂಕದ ಪರಿಣಾಮಗಳನ್ನು ಅಂದಾಜು ಮಾಡಲು, ನೆರವು ಕ್ರಮಗಳು ಏನಿರಬೇಕು ಎಂಬುದನ್ನು ಅರಿಯಲು ಜವಳಿ ಹಾಗೂ ರಾಸಾಯನಿಕಗಳ ರಫ್ತುದಾರರ ಜೊತೆ ವಾಣಿಜ್ಯ ಸಚಿವಾಲಯವು ನಡೆಸಿದ ಸಮಾಲೋಚನಾ ಸಭೆಯಲ್ಲಿ ಈ ವಿಷಯಗಳ ಬಗ್ಗೆ ಚರ್ಚೆ ಆಗಿದೆ ಎಂದು ಗೊತ್ತಾಗಿದೆ.

ಬಜೆಟ್‌ನಲ್ಲಿ ಘೋಷಿಸಿರುವ ರಫ್ತು ಉತ್ತೇಜನಾ ಮಿಷನ್ ಕುರಿತು ಕೇಂದ್ರ ಸರ್ಕಾರ ಕಡೆಯಿಂದ ಕೆಲಸಗಳು ನಡೆದಿವೆ. ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಸುಲಭವಾಗಿ ಸಾಲ ಕೊಡಿಸುವುದು ಹಾಗೂ ದೇಶದ ಹೊರಗೆಯೂ ಗೋದಾಮು ಸೇವೆ ಒದಗಿಸುವ ಕ್ರಮಗಳನ್ನು ಈ ಮಿಷನ್ ಒಳಗೊಳ್ಳುವ ನಿರೀಕ್ಷೆ ಇದೆ.

ರಫ್ತುದಾರರು ಹೊಸ ಮಾರುಕಟ್ಟೆಗಳನ್ನು ಹುಡುಕುವ ಕೆಲಸವನ್ನೂ ಶುರು ಮಾಡಿದ್ದಾರೆ ಎಂದು ಉದ್ಯಮದ ಮೂಲಗಳು ಹೇಳಿವೆ.

### ರತ್ನ, ಆಭರಣ ಉದ್ಯಮಕ್ಕೆ ಪೆಟ್ಟು



ಮುಂಬೈ (ಪಿಟಿಐ): ರತ್ನ ಮತ್ತು ಆಭರಣಗಳ ರಫ್ತುದಾರರ ಸಂಘಟನೆಯಾದ ‘ರತ್ನ ಮತ್ತು ಆಭರಣ ರಫ್ತು ಉತ್ತೇಜನಾ ಮಂಡಳಿ’ಯು ಉದ್ಯಮಕ್ಕೆ ಬೆಂಬಲವಾಗಿ ನಿಲ್ಲಲು ನೀತಿಗಳಲ್ಲಿ ತಕ್ಷಣವೇ ಸುಧಾರಣೆ ತರಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಭಾರತದ ರತ್ನ ಮತ್ತು ಆಭರಣಗಳಿಗೆ ಅಮೆರಿಕವು ದೊಡ್ಡ ಮಾರುಕಟ್ಟೆ. ಈ ಉದ್ಯಮ ವಲಯವು ನಡೆಸುವ ಜಾಗತಿಕ ವಹಿವಾಟಿನಲ್ಲಿ ಅಮೆರಿಕದ ಪಾಲು ಸರಿಸುಮಾರು ಶೇ 30ರಷ್ಟಿದೆ ಎಂದು ಮಂಡಳಿಯ ಅಧ್ಯಕ್ಷ ಕಿರೀಟ್ ಭನ್ಸಾಲಿ ಹೇಳಿದ್ದಾರೆ.

ಈ ಪ್ರಮಾಣದ ಸುಂಕವು ರತ್ನ ಮತ್ತು ಆಭರಣ ವಲಯಕ್ಕೆ ಬಹಳ ಕೇಡು ಉಂಟುಮಾಡಲಿದೆ ಎಂದು ಭನ್ಸಾಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಭಾರತದಿಂದ ರಫ್ತಾಗುವ ಕತ್ತರಿಸಿದ ಹಾಗೂ ಪಾಲಿಷ್ ಮಾಡಲಾದ ವಜ್ರಗಳ ಪೈಕಿ ಶೇ 50ರಷ್ಟು ಅಮೆರಿಕ ತಲುಪುತ್ತವೆ. ಪರಿಷ್ಕೃತ ಸುಂಕದ ಪರಿಣಾಮವಾಗಿ ಈ ಉದ್ಯಮ ವಲಯದಲ್ಲಿ ಚಟುವಟಿಕೆಗಳು ಸ್ಥಗಿತಗೊಳ್ಳಬಹುದು ಎಂಬ ಆತಂಕ ಎದುರಾಗಿದೆ.

ಭಾರತದಕ್ಕೆ ಸ್ಪರ್ಧೆ ನೀಡುವ ಇತರ ತಯಾರಿಕಾ ದೇಶಗಳ (ಟರ್ಕಿ, ವಿಯೆಟ್ನಾಂ, ಥಾಯ್ಲೆಂಡ್) ಮೇಲೆ ಕಡಿಮೆ ಸುಂಕ ವಿಧಿಸಲಾಗಿದೆ. ಇದು ಭಾರತದ ಉದ್ಯಮದ ಪಾಲಿಗೆ ಹೆಚ್ಚು ಕಳವಳಕಾರಿ ಎಂದು ಭನ್ಸಾಲಿ ಹೇಳಿದ್ದಾರೆ.

## ❖ 6ಜಿ ತಂತ್ರಜ್ಞಾನ ಅಭಿವೃದ್ಧಿಪಡಿಸುತ್ತಿರುವ ಜಿಯೊ

- ದೂರಸಂಪರ್ಕ ಸೇವಾ ಕಂಪನಿ ಜಿಯೊ, 6ಜಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದೆ, ಈ ಕ್ಷೇತ್ರದಲ್ಲಿ ಜಾಗತಿಕ ನಾಯಕ ಆಗುವ ಗುರಿಯನ್ನು ಹೊಂದಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್‌ನ ವಾರ್ಷಿಕ ವರದಿ ತಿಳಿಸಿದೆ.
- ಜಗತ್ತಿನಲ್ಲಿ ಮೊಬೈಲ್ ಮೂಲಕ ಇಂಟರ್ನೆಟ್ ಡೇಟಾ ಸೇವೆ ಒದಗಿಸುವ ಅತಿದೊಡ್ಡ ಕಂಪನಿಯಾಗಿರುವ ಜಿಯೊ, 17ಕ್ಕೂ ಹೆಚ್ಚು ಎಕ್ಸಾಬೈಟ್‌ನಷ್ಟು ಡೇಟಾವನ್ನು ಮಾಸಿಕವಾಗಿ ನಿರ್ವಹಿಸುತ್ತಿದೆ. ಭಾರತದಲ್ಲಿನ ವಯರ್‌ಲೆಸ್ ಡೇಟಾ ಬಳಕೆಯಲ್ಲಿ ಶೇ 60ರಷ್ಟು ಜಿಯೊ ಮೂಲಕ ಆಗುತ್ತಿದೆ.
- ‘ಕಂಪನಿಯು ಭವಿಷ್ಯದ ಸಂವಹನ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುತ್ತಿದೆ. 6ಜಿ ತಂತ್ರಜ್ಞಾನದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದೆ’ ಎಂದು ವರದಿಯಲ್ಲಿ ಹೇಳಲಾಗಿದೆ.
- 2016ರಲ್ಲಿ 4ಜಿ, 2018ರಲ್ಲಿ ಮನೆಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ, 2022ರಲ್ಲಿ 5ಜಿ ಮತ್ತು 2024ರಲ್ಲಿ ವಯರ್‌ಲೆಸ್ ಬ್ರಾಡ್‌ಬ್ಯಾಂಡ್ ಸಂಪರ್ಕ ಸೇವೆಯನ್ನು ಕಂಪನಿ ಆರಂಭಿಸಿದೆ.

- ಕಂಪನಿಯು ತನ್ನದೇ ಆದ ಉಪಗ್ರಹ ಆಧಾರಿತ ಸಂವಹನ ವ್ಯವಸ್ಥೆ ಆರಂಭಿಸುತ್ತಿದೆ. ಅಲ್ಲದೆ, ಇಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಜೊತೆ ಪಾಲುದಾರಿಕೆ ಮಾಡಿಕೊಳ್ಳುವ ಮೂಲಕ ಭಾರತದಲ್ಲಿನ ತನ್ನ ಗ್ರಾಹಕರಿಗೆ ಈ ಸೇವೆ ಒದಗಿಸಲು ನಿರ್ಧರಿಸಿದೆ.
- 2025ರ ಮಾರ್ಚ್ ವೇಳೆಗೆ ಕಂಪನಿಯು 19.1 ಕೋಟಿ 5ಜಿ ಬಳಕೆದಾರರನ್ನು ಹೊಂದಿದೆ.

## ❖ ಭಾರತದ ಜತೆಗಿನ ಸ್ನೇಹ ಸರ್ವಕಾಲಕ್ಕೂ ಭದ್ರ: ರಷ್ಯಾ

- 'ಅಂತರರಾಷ್ಟ್ರೀಯ ಕಾನೂನುಗಳ ರಕ್ಷಣೆಯನ್ನು ಖಾತರಿಪಡಿಸಿ ಕೊಳ್ಳುವುದರ ಜತೆಗೆ ಆಧುನಿಕ ಸವಾಲುಗಳನ್ನು ಜಂಟಿಯಾಗಿ ಎದುರಿಸಲು ನಾವು ಬದ್ಧರಾಗಿದ್ದೇವೆ. ರಷ್ಯಾ ಮತ್ತು ಭಾರತದ ನಡುವಿನ ಸ್ನೇಹವು ಸರ್ವ ಕಾಲಕ್ಕೂ ಭದ್ರವಾಗಿರಲಿದೆ' ಎಂದು ರಷ್ಯಾದ ಭದ್ರತಾ ಮಂಡಳಿಯ ಕಾರ್ಯದರ್ಶಿ ಸರ್ಗೆ ಶೊಯಿಗು ಹೇಳಿದ್ದಾರೆ.
- ಇಂಧನ ಮತ್ತು ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಮಹತ್ವದ ಮಾತುಕತೆ ನಡೆಸಲು ಹಾಗೂ ಭಾರತಕ್ಕೆ ಪುಟಿನ್ ಭೇಟಿಯ ಸಿದ್ಧತೆ ಕುರಿತಂತೆ ಚರ್ಚಿಸಲು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋಬಾಲ್ ಅವರು ರಷ್ಯಾಗೆ ತೆರಳಿದ್ದು, ಸರ್ಗೆ ಅವರನ್ನು ಭೇಟಿಯಾಗಿದ್ದಾರೆ.
- ಈ ವೇಳೆ ಮಾತನಾಡಿರುವ ಸರ್ಗೆ, 'ಪ್ರಧಾನಿ ಮೋದಿ ಹಾಗೂ ಪುಟಿನ್ ಅವರು ನಿರಂತರ ಸಂಪರ್ಕದಲ್ಲಿದ್ದು, ಉಭಯ ರಾಷ್ಟ್ರಗಳ ನಡುವಿನ ರಾಜಕೀಯ ಸಂಬಂಧ ಉತ್ತಮವಾಗಿದೆ. ವಿಶ್ವಾಸ, ಪರಸ್ಪರ ಹಿತಾಸಕ್ತಿ, ನಂಬಿಕೆಯ ಆಧಾರದಲ್ಲಿ ಭಾರತದೊಂದಿಗೆ ಹೊಂದಿರುವ ಉತ್ತಮ ಕಾರ್ಯತಂತ್ರ ಪಾಲುದಾರಿಕೆಯನ್ನು ಬಲಗೊಳಿಸುವುದು ರಷ್ಯಾದ ಆದ್ಯತೆ' ಎಂದಿದ್ದಾರೆ.
- 'ಅಲ್ಲದೇ, ಭಾರತ-ರಷ್ಯಾ ನಡುವಿನ ಸಂಬಂಧವು ಸರ್ವಕಾಲಕ್ಕೂ ಭದ್ರವಾಗಿ ಇರಲಿದೆ ಎಂದಿರುವ ಅವರು, ಶೀಘ್ರವೇ ನಮ್ಮ ನಾಯಕರ ನಡುವೆ ಪೂರ್ಣ ಪ್ರಮಾಣದ ಮಾತುಕತೆಯೂ ನಡೆಯಲಿದೆ. ಇದಕ್ಕಾಗಿ ದಿನಾಂಕ ನಿಗದಿಪಡಿಸಲಿದ್ದೇವೆ' ಎಂದೂ ತಿಳಿಸಿದ್ದಾರೆ.
- ರಷ್ಯಾದಿಂದ ತೈಲ ಖರೀದಿ ಮಾಡುತ್ತಿರುವ ವಿಚಾರದಲ್ಲಿ ಅಮೆರಿಕ ಆಕ್ಷೇಪ ವ್ಯಕ್ತಪಡಿಸಿದ್ದು, ಭಾರತದ ಮೇಲೆ ಶೇ 25ರ ಪ್ರತಿಸುಂಕದ ಜತೆಗೆ ಶೇ 25 ಹೆಚ್ಚುವರಿ ಸುಂಕ ವಿಧಿಸಿದೆ. ಈ ನಡುವೆಯೇ ದೋಬಾಲ್ ಅವರು ರಷ್ಯಾ ಭೇಟಿ ಕೈಗೊಂಡಿರುವುದು ಮಹತ್ವ ಪಡೆದಿದೆ.

## ❖ ಗಜೇಂದ್ರಗಡ ಪಟ್ಟೇದಂಚು ಸೀರೆಗೆ ಭೌಗೋಳಿಕ ಮಾನ್ಯತೆ





ಗಜೇಂದ್ರಗಡ ಪಟ್ಟೇದಂಚು ಸೀರೆಗೆ ಜಿಐ ಟ್ಯಾಗ್ ಸಿಕ್ಕಿದ್ದು, 400 ವರ್ಷಗಳ ಕೈಮಗ್ಗ ಪರಂಪರೆಗೊಂದು ಭೌಗೋಳಿಕ ಗುರುತು ಸಿಕ್ಕಂತಾಗಿದೆ.

- ಸ್ವಾತಂತ್ರ್ಯಪೂರ್ವದಲ್ಲಿ ಸ್ಥಾಪನೆಗೊಂಡ ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘದ ನೇಕಾರರು ಕೈಮಗ್ಗದಲ್ಲಿ ನೇಯುವ ಪಟ್ಟೇದಂಚು ಸೀರೆಗೆ ಭೌಗೋಳಿಕ ಮಾನ್ಯತೆ (ಜಿಐ ಟ್ಯಾಗ್) ಲಭಿಸಿದೆ.
- ಸೀರೆಯ ಅಂಚಿನಲ್ಲಿ ಪಟ್ಟೆ ವಿನ್ಯಾಸ ಇರುವುದಕ್ಕೆ ಪಟ್ಟೇದಂಚು ಸೀರೆ ಎಂಬ ಹೆಸರು ಬಂದಿದೆ.
- **ಪರಿಶುದ್ಧ ಹತ್ತಿ, ಪರಿಸರ ಸ್ನೇಹಿ ಬಣ್ಣ ಮತ್ತು ನೈಸರ್ಗಿಕ ಅಂಟು ಬಳಸಿ ಸೀರೆ ತಯಾರಿಸಲಾಗುತ್ತದೆ. ಅವು 4 ಬಣ್ಣ ಹಾಗೂ 35 ವಿನ್ಯಾಸಗಳಲ್ಲಿ ಲಭ್ಯವಿದ್ದು, ಎಲ್ಲ ಋತುಗಳಿಗೂ ಹೊಂದುತ್ತವೆ.**
- ಸಂಘ ಸ್ಥಾಪನೆಯಾಗಿ 8 ದಶಕಗಳು ಕಳೆದಿವೆ. ಪಟ್ಟೇದಂಚು ಸೀರೆಗೆ 200 ವರ್ಷಗಳ ಇತಿಹಾಸವಿದೆ.
- ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘದಲ್ಲಿ ಸದ್ಯ 1,126 ಮಂದಿ ಸದಸ್ಯರಿದ್ದಾರೆ. ನಿತ್ಯ 200 ಮಂದಿ ಕೆಲಸ ಮಾಡುತ್ತಾರೆ. ಒಬ್ಬರು ಎಂಟು ಗಂಟೆ ಕೆಲಸ ಮಾಡಿದರೆ ಎರಡು ಪಟ್ಟೇದಂಚು ಸೀರೆಗಳು ಸಿದ್ಧವಾಗುತ್ತವೆ. ನೇಯ್ಗೆ ಮಾಡುವವರಲ್ಲಿ ಶೇ 25 ಪುರುಷರು ಮತ್ತು ಶೇ 75 ಮಹಿಳೆಯರು ಇದ್ದಾರೆ.
- 'ಪಟ್ಟೇದಂಚು ಸೀರೆಗೆ ಜಿಐ ಟ್ಯಾಗ್ ಮಾನ್ಯತೆ ಪಡೆಯಲು 2019ರಿಂದ ನಡೆಸಿದ ಪ್ರಯತ್ನಕ್ಕೆ 2025ರ ಮಾರ್ಚ್‌ನಲ್ಲಿ ಫಲ ಸಿಕ್ಕಿತು. ಜಿಐ ಟ್ಯಾಗ್ ಮಾನ್ಯತೆ ಸಿಕ್ಕಿರುವುದರಿಂದ ಪಟ್ಟೇದಂಚು ಸೀರೆಯ ಮಾರುಕಟ್ಟೆ ವಿಸ್ತರಿಸುವ ನಿರೀಕ್ಷೆ ಇದೆ' ಎಂದು ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾರುತಿ ಕಳಕಪ್ಪ ಶಾಬಾದಿ ತಿಳಿಸಿದರು.
- **'ಗಜೇಂದ್ರಗಡದಲ್ಲಿ ಉತ್ಪಾದನೆಯಾಗುವ ಪಟ್ಟೆ ದಂಚು ಸೀರೆ ಬೆಲೆ ₹850. ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಸೇರಿ ವಿವಿಧ ರಾಜ್ಯಗಳಲ್ಲಿ ಈ ಸೀರೆಗೆ ಬೇಡಿಕೆ ಇದೆ.**

## ❖ ಎಸ್‌ಇಪಿ ಆಯೋಗ: ದ್ವಿಭಾಷಾ ನೀತಿಗೆ ಶಿಫಾರಸು

- ಶಾಲಾ ಶಿಕ್ಷಣದಲ್ಲಿ ದ್ವಿಭಾಷಾ ನೀತಿಯನ್ನು ಕಡ್ಡಾಯ ವಾಗಿ ಅನುಷ್ಠಾನ ಗೊಳಿಸುವಂತೆ ರಾಜ್ಯ ಶಿಕ್ಷಣ ನೀತಿ ಆಯೋಗ ಶಿಫಾರಸು ಮಾಡಿದೆ. **ತೃತೀಯ ಭಾಷೆಯಾಗಿ ಹಿಂದಿಯನ್ನು ಕಲಿಸುವ ಬಗ್ಗೆ ಆಯೋಗ ಪ್ರಸ್ತಾಪಿಸಿಲ್ಲ.**
- ರಾಷ್ಟ್ರೀಯ ಹೊಸ ಶಿಕ್ಷಣ ನೀತಿ-2020ರ (ಎನ್‌ಇಪಿ) ಬದಲಿಗೆ **ರಾಜ್ಯಕ್ಕೆ ಪ್ರತ್ಯೇಕವಾದ ಶಿಕ್ಷಣ ನೀತಿ ರೂಪಿಸಲು ಪ್ರೊ.ಸುಖದೇವ್ ಥೋರಟ್** ಅಧ್ಯಕ್ಷತೆ ಯಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ಸರ್ಕಾರ ರಚಿಸಿತ್ತು.
- 2,197 ಪುಟಗಳಿರುವ ಮೂರು ಸಂಪುಟ ಒಳಗೊಂಡ ತನ್ನ ಅಂತಿಮ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಯೋಗವು ಸಲ್ಲಿಸಿತು. ಮೂರು ಸಂಪುಟ ಗಳನ್ನು **ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ** ಎಂದು ವರ್ಗೀಕರಿಸಲಾಗಿದೆ.
- **ಕನ್ನಡ ಸೇರಿದಂತೆ ಇತರೆ ಮಾತೃ ಭಾಷೆಗಳನ್ನು ಪ್ರಥಮ ಭಾಷೆಯಾಗಿ, ಇಂಗ್ಲಿಷ್ ಅನ್ನು ದ್ವಿತೀಯ ಭಾಷೆಯಾಗಿ ನಿಗದಿ ಮಾಡ ಬೇಕು.**
- **ಈ ನಿಯಮವನ್ನು ಸರ್ಕಾರಿ, ಅನುದಾನಿತ ಹಾಗೂ ಎಲ್ಲ ಖಾಸಗಿ ಶಾಲೆಗಳಲ್ಲೂ ಅನುಷ್ಠಾನಗೊಳಿಸಬೇಕು.**
- **ಐದನೇ ತರಗತಿಯವರೆಗೆ ಮಾತೃಭಾಷೆ ಯಲ್ಲೇ ಬೋಧನೆಗೆ** ಅವಕಾಶ ನೀಡಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

## ❖ ಒಳಮೀಸಲು ವರದಿ: ಮತ್ತಷ್ಟು ಮಾಹಿತಿ



# ಒಳಮೀಸಲು ವರದಿ: ಮತ್ತಷ್ಟು ಮಾಹಿತಿ

ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದಂತೆ ನ್ಯಾ.ಎಚ್.ಎನ್.ನಾಗಮೋಹನದಾಸ್ ಅವರ ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ರಾಜ್ಯದಲ್ಲಿರುವ ಪರಿಶಿಷ್ಟ ಜಾತಿಯಲ್ಲಿ 101 ಉಪಜಾತಿಗಳು ಇದ್ದು, ಅವುಗಳ ಒಟ್ಟು ಜನಸಂಖ್ಯೆ 1.07 ಕೋಟಿಗೂ ಹೆಚ್ಚಿದೆ. ಇವು ಭಿನ್ನರೂಪದ ಜಾತಿಗಳಾಗಿದ್ದು, ವಿವಿಧ ಪ್ರದೇಶಗಳಲ್ಲಿ ಹರಡಿ, ವಿವಿಧ ಹೆಸರು, ಕಸುಬು, ಪದ್ಧತಿಗಳೊಂದಿಗೆ ಜೀವಿಸುತ್ತಿವೆ. ಇವುಗಳ ನಡುವೆ ಒಳಮೀಸಲಾತಿ ಕಲ್ಪಿಸಲು ಅವುಗಳ ಜನಸಂಖ್ಯೆ, ಆರ್ಥಿಕ, ಸಾಮಾಜಿಕ ಸ್ಥಿತಿಗತಿ, ಸರ್ಕಾರಿ ಉದ್ಯೋಗಿಗಳ ಸಂಖ್ಯೆ ಸೇರಿದಂತೆ ಸಮಗ್ರ ದತ್ತಾಂಶ ಅಗತ್ಯವಾಗಿದೆ. ನ್ಯಾ.ನಾಗಮೋಹನದಾಸ್ ಆಯೋಗದ ವರದಿಯು ರಾಜ್ಯದ ಪರಿಶಿಷ್ಟ ಜಾತಿಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವ ದಿಸೆಯಲ್ಲಿ ಪ್ರಯತ್ನ ನಡೆಸಿದೆ. ಹಾಗೆಯೇ ನ್ಯಾ.ಸದಾಶಿವ ಆಯೋಗದಲ್ಲಿನ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಗೊಂದಲವನ್ನು ಬಗೆಹರಿಸುವ ಸಂಬಂಧ ಅಂಕಿಅಂಶ ಕಲೆಹಾಕಿ, ಸರ್ಕಾರಕ್ಕೆ ಶಿಫಾರಸು ಮಾಡಿದೆ. ರಾಜ್ಯದಲ್ಲಿ ಭಾರಿ ಚರ್ಚೆ ಹುಟ್ಟುಹಾಕಿದ್ದ ಬೇಡ ಜಂಗಮ, ಬುಡ್ಗ ಜಂಗಮ ಸಮಸ್ಯೆಗೂ ವರದಿಯಲ್ಲಿ ಪರಿಹಾರ ಸೂಚಿಸಲಾಗಿದೆ. ಸಚಿವ ಸಂಪುಟದಲ್ಲಿ ಚರ್ಚೆಯಾಗಿರುವ ವರದಿಯ ಮುಖ್ಯ ಅಂಶಗಳ ಬಗ್ಗೆ 'ಪ್ರಜಾವಾಣಿ'ಯಲ್ಲಿ ಈಗಾಗಲೇ ಹಲವು ವಿಶೇಷ ವರದಿಗಳು ಪ್ರಕಟವಾಗಿವೆ. ವರದಿಯ ಮತ್ತಷ್ಟು ಮುಖ್ಯ ಅಂಶಗಳ ಮಾಹಿತಿ ಇಲ್ಲಿದೆ

## ಆದಿ ದ್ರಾವಿಡ, ಆದಿ ಆಂಧ್ರ ಗೊಂದಲ

## ಶಿಕ್ಷಣ: ನಾಲ್ಕು ಜಾತಿಗಳ ಮೇಲುಗೈ

ಪರಿಶಿಷ್ಟ ಜಾತಿಗಳ ಸಾಕ್ಷರತೆ ಪ್ರಮಾಣ ಉತ್ತಮವಾಗಿದೆ. 1.07 ಕೋಟಿಯಷ್ಟಿರುವ ಜನಸಂಖ್ಯೆಯಲ್ಲಿ 86.54 ಲಕ್ಷದಷ್ಟು ಜನರು ಅಕ್ಷರಸ್ಥರಾಗಿದ್ದಾರೆ. 2011ರ ಜನಗಣತಿಗೆ ಹೋಲಿಸಿದರೆ ಪರಿಶಿಷ್ಟ …

ನ್ಯಾ.ನಾಗಮೋಹನದಾಸ್ ಆಯೋಗದ ವರದಿಯಲ್ಲಿ ಹಲವು ಸಮಸ್ಯೆಗಳ ಬಗ್ಗೆ ಪ್ರಸ್ತಾಪ, ಚರ್ಚೆ, ಪರಿಹಾರ ಶಿಫಾರಸು

### ಕರ್ನಾಟಕದಲ್ಲಿ ಎಸ್‌ಸಿ ಜನಸಂಖ್ಯೆ

**1,07,01,982** ಒಟ್ಟು ಜನಸಂಖ್ಯೆ

**53,65,014** ಪುರುಷರು 50.12%

**53,33,273** ಮಹಿಳೆಯರು 49.83%

**4,695** ಲಿಂಗತ್ವ ಅಲ್ಪಸಂಖ್ಯಾತರು 0.04%

ಪ್ರದೇಶವಾರು ಜನಸಂಖ್ಯೆ

| ಪ್ರದೇಶ | ಜನಸಂಖ್ಯೆ (ಶೇಕಡ) | ಕುಟುಂಬಗಳು (ಶೇಕಡ) |
|---|---|---|
| ಗ್ರಾಮೀಣ | 81,15,365 (75.83) | 20,60,850 (75.63) |
| ನಗರ | 25,86,617 (24.17) | 6,63,918 (24.37) |

## ಬೇಡ ಜಂಗಮ: ಜನಸಂಖ್ಯೆಯಲ್ಲಿ ಕೃತಕ ಹೆಚ್ಚಳ

## ರಾಜಕೀಯ: ಐದು ಜಾತಿಗಳಿಗೆ ಸಿಂಹಪಾಲು

## ಸ್ವಂತ ಮನೆ, ಗುಡಿಸಲು ವಾಸ

## ಒಳಜಾತಿಗಳ ನಡುವೆ ತಾರತಮ್ಯ

## ಸರ್ಕಾರಿ ಉದ್ಯೋಗ: 12 ಜಾತಿಗಳಿಗಿಲ್ಲ ಪ್ರಾತಿನಿಧ್ಯ

ರಾಜ್ಯ ಸರ್ಕಾರದ 45 ಇಲಾಖೆಗಳಲ್ಲಿ 'ಎ' 'ಬಿ' 'ಸಿ' ಮತ್ತು 'ಡಿ' ಶ್ರೇಣಿಯ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದ 1.47 ಲಕ್ಷ ಮಂದಿ ಕೆಲಸ ಮಾಡುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಗ್ರೂಪ್ 'ಸಿ' ಮತ್ತು 'ಡಿ'ಗಳಲ್ಲಿ ಅವರಿಗೆ ಮೀಸಲಿಟ್ಟ ಸ್ಥಾನಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ, ಗ್ರೂಪ್ 'ಎ' ಮತ್ತು 'ಬಿ' ಶ್ರೇಣಿಯ ಹುದ್ದೆಗಳಲ್ಲಿ ಈ ಸಮುದಾಯದವರು ಮೀಸಲು (ಕೋಟಾ) ಇಟ್ಟಿರುವಷ್ಟು ಪ್ರಮಾಣದಲ್ಲಿಲ್ಲ.

ಪರಿಶಿಷ್ಟ ಜಾತಿಗೆ ಸೇರಿದ 101 ಉಪಜಾತಿಗಳ ಪೈಕಿ 12 ಜಾತಿಗಳು ಸರ್ಕಾರಿ ಉದ್ಯೋಗಗಳಲ್ಲಿ ಪ್ರಾತಿನಿಧ್ಯವನ್ನೇ ಪಡೆದಿಲ್ಲ. ಬಿಂಡ್ಲಾ, ಚಾಂಡಾಲ, ಗಾರೋಡಾ ಗಾರೋ, ಕ್ಯಾಪ್‌ಮರೀಸ್, ಕೋಲುಪುಲುವಂದ್ಲು, ಕುಟುಂಬನ್, ಮಹ್ಯಾವಂಶಿ, ಧೇಡ್, ವಂಕರ್, ಮಾರು ವಂಕರ್, ಮಾಲಾ ಜಂಗಮ, ಮಾಲಾ ಮಸ್ತಿ, ಮನ್ನೆ, ಮಸ್ತಿ, ಸಿಂದೊಳ್ಳು-ಚಿಂದೊಳ್ಳು ಜಾತಿಗಳಿಗೆ ಸೇರಿದವರು ಯಾರೊಬ್ಬರೂ ಸರ್ಕಾರಿ ನೌಕರಿಯಲ್ಲಿಲ್ಲ.

ಹೊಲಯ, ಹೊಲರ್, ಹೊಲೆಯ, ಮಾದಿಗ, ಬಂಜಾರ, ಲಂಬಾಣಿ, ಭೋವಿ, ಛಲವಾದಿ, ಭಾಂಬಿ, ಬೇಡ ಜಂಗಮ, ಕೊರಮ, ಸಮಗಾರ, ಆದಿ ದ್ರಾವಿಡ ಸೇರಿದಂತೆ ಪ್ರಮುಖ 10 ಜಾತಿಗಳಿಗೆ ಸೇರಿದವರು ಗರಿಷ್ಠ ಸಂಖ್ಯೆಯಲ್ಲಿ ಸರ್ಕಾರಿ ನೌಕರಿ ಪಡೆದಿದ್ದಾರೆ.

ಚೆನ್ನದಾಸರಿ, ಹೊಲಯ ದಾಸರಿ, ಪರೈಯನ್, ಕೊರಚ, ಆದಿಕರ್ನಾಟಕ, ಮೊಗೇರ್, ಮಾಲಾ, ಭಂಗಿ, ಸುಡುಗಾಡು ಸಿದ್ಧ ಸೇರಿದಂತೆ 28 ಜಾತಿಗಳಿಗೆ ಸೇರಿದವರು ಮಧ್ಯಮ ಪ್ರಮಾಣದಲ್ಲಿ ಸರ್ಕಾರಿ ಉದ್ಯೋಗಗಳಲ್ಲಿ ಪ್ರಾತಿನಿಧ್ಯ ಹೊಂದಿದ್ದಾರೆ. ಆದಿ ಆಂಧ್ರ, ಆದಿಯಾ, ಪರವನ್, ಅಜಿಲಾ ಸೇರಿದಂತೆ 51 ಜಾತಿಗಳ ಜನರು ಕಡಿಮೆ ಸಂಖ್ಯೆಯಲ್ಲಿ ಸರ್ಕಾರಿ ನೌಕರಿಯಲ್ಲಿದ್ದಾರೆ.

ರಾಜ್ಯ ಸರ್ಕಾರದ 45 ಇಲಾಖೆಗಳಲ್ಲಿರುವ ಎಸ್‌ಸಿ ಸರ್ಕಾರಿ ಉದ್ಯೋಗಿಗಳು (ಶ್ರೇಣಿವಾರು)

| ಹುದ್ದೆಗಳ ವಿವರ | ಎ | ಬಿ | ಸಿ | ಡಿ | ಒಟ್ಟು |
|---|---|---|---|---|---|
| ಎಸ್‌ಸಿ ಪ್ರಾತಿನಿಧ್ಯ ಶೇ 17ರಷ್ಟು | 8,764 | 13,898 | 1,38,619 | 38,180 | 1,99,461 |
| ನೇಮಕಾತಿ ಆಗಿರುವುದು | 6,468 | 10,424 | 1,02,920 | 27,860 | 1,47,672 |
| ನೇಮಕಾತಿ ಮಾಡದಿರುವುದು | 2,296 | 3,474 | 35,699 | 10,320 | 51,789 |

## ❖ ‘ಬೀಬಿ ಫಾತಿಮಾ ಸಂಘ’ ಕ್ಕೆ ಪ್ರಶಸ್ತಿ



ಬೀಬಿ ಫಾತಿಮಾ ಸಂಘದ ಸದಸ್ಯೆಯರು

- ಜೀವವೈವಿಧ್ಯ ಸಂರಕ್ಷಣಾ ಕ್ಷೇತ್ರದ ನೊಬೆಲ್ ಪುರಸ್ಕಾರ ಎಂದೇ ಪರಿಗಣಿಸಲ್ಪಡುವ **ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ)** ನೀಡುವ **‘ಈಕ್ವೇಟರ್ ಇನಿಷಿಯೇಟಿವ್’** ಪ್ರಶಸ್ತಿಗೆ ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ತೀರ್ಥ ಗ್ರಾಮದ ‘ಬೀಬಿ ಫಾತಿಮಾ ಮಹಿಳಾ ಸಂಘ’ ಪಾತ್ರವಾಗಿದೆ.
- **‘ನಿಸರ್ಗ ಆಧಾರಿತ ತಾಪಮಾನ ನಿಯಂತ್ರಣಕ್ಕೆ ಮಹಿಳೆ ಹಾಗೂ ಯುವಜನರ ನಾಯಕತ್ವ’** ವಿಷಯ ಆಧರಿಸಿ ನಡೆದ ಈ ವರ್ಷದ ಆಯ್ಕೆ ಪ್ರಕ್ರಿಯೆಯಲ್ಲಿ ಭಾರತದ ಬೀಬಿ ಫಾತಿಮಾ ಮಹಿಳಾ ಸಂಘ ಸೇರಿ 103 ದೇಶಗಳ 700 ಸ್ಪರ್ಧಿಗಳು ಪಾಲ್ಗೊಂಡಿದ್ದರು.
- **ಪ್ರಶಸ್ತಿಯು ₹10,000 ಅಮೆರಿಕನ್ ಡಾಲರ್ (₹8.5 ಲಕ್ಷ) ನಗದು ಬಹುಮಾನ** ಒಳಗೊಂಡಿದೆ.
- ‘ಸಹಜ ಸಮೃದ್ಧ’ ಬಳಗದ ಬೀಬಿ ಫಾತಿಮಾ ಮಹಿಳಾ ಸಂಘವು ತೀರ್ಥ ಗ್ರಾಮದಲ್ಲಿ 15 ಮಹಿಳೆಯರ ಶ್ರಮದಿಂದ 2018ರಲ್ಲಿ ಅಸ್ತಿತ್ವಕ್ಕೆ ಬಂತು. ಪರಿಸರ ಸ್ನೇಹಿ ಕೃಷಿಗೆ ಉತ್ತೇಜನ ನೀಡುತ್ತಿದ್ದು, 30 ಗ್ರಾಮಗಳಲ್ಲಿ ನೈಸರ್ಗಿಕ ವಿಧಾನದಲ್ಲಿ ಸಿರಿಧಾನ್ಯ ಆಧಾರಿತ ಮಿಶ್ರ ಬೆಳೆ ಬೇಸಾಯವನ್ನು ಮತ್ತೆ ಚಾಲ್ತಿಗೆ ತಂದಿದೆ.

## ❖ ಒಳ ಮೀಸಲು ವರದಿ: ಸಂಪುಟ ಒಮ್ಮತ

- ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಕುರಿತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ನೇತೃತ್ವದ ಏಕ ಸದಸ್ಯ ಆಯೋಗ ಸಲ್ಲಿಸಿದ ವರದಿಯ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಒಮ್ಮತ ವ್ಯಕ್ತವಾಗಿದ್ದು, ಯಾರೊಬ್ಬರೂ ವಿರೋಧ ವ್ಯಕ್ತ ಪಡಿಸಿಲ್ಲ ಎಂದು ಗೊತ್ತಾಗಿದೆ.
- ‘ಸಚಿವ ಸಂಪುಟ ಸಭೆಯಲ್ಲಿ ವರದಿಯನ್ನು ಮಂಡಿಸಲಾಯಿತು. ಆಯೋಗದ ವರದಿಯ ಬಗ್ಗೆ ಎಲ್ಲ ಸಚಿವರೂ ಸಹಮತ ಹೊಂದಿದ್ದಾರೆ. ಸಣ್ಣ-ಪುಟ್ಟ ಲೋಪಗಳು ಇದ್ದರೆ ಸರಿಪಡಿಸಿಕೊಂಡು ಜಾರಿ ಮಾಡಲು ಎಲ್ಲರೂ ಒಪ್ಪಿದರು’ ಎಂದು ಮೂಲಗಳು ಹೇಳಿವೆ.
- **‘ಆದಿ ದ್ರಾವಿಡ, ಆದಿ ಕರ್ನಾಟಕ ಎಂದು ಪ್ರತ್ಯೇಕವಾಗಿ ಗುರುತಿಸಿ ಶೇ 1ರಷ್ಟು ಮೀಸಲಾತಿ ನೀಡುವ ಅಗತ್ಯ ಇರಲಿಲ್ಲ. ಈ ಎರಡೂ ಉಪ ಜಾತಿಗಳು ಬಲಗೈ ಅಥವಾ ಎಡಗೈ ಪಂಗಡದಲ್ಲೇ ಬರುತ್ತವೆ.** ಅದನ್ನು ಪರಿಷ್ಕರಿಸುವುದು ಸೂಕ್ತ ಎಂದು ಹಿರಿಯ ಸಚಿವರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು’ ಎಂದು ಮೂಲಗಳು ತಿಳಿಸಿವೆ.
- ‘ಸರ್ಕಾರ ರಚಿಸಿದ ಆಯೋಗವು ನೀಡಿದ ವರದಿಯನ್ನು ಒಂದೋ ಯಥಾವತ್ತಾಗಿ ಅಂಗೀಕರಿಸಬೇಕು ಅಥವಾ ಸಣ್ಣಪುಟ್ಟ ಪರಿಷ್ಕರಣೆ ಯೊಂದಿಗೆ ಪುರಸ್ಕರಿಸಬೇಕು, ಇಲ್ಲವೇ ತಿರಸ್ಕರಿಸಬೇಕು. ಅದು ಬಿಟ್ಟರೆ ಬೇರೆ ದಾರಿ ಇಲ್ಲ’ ಎಂದು ಸಿದ್ದರಾಮಯ್ಯ ತಮ್ಮ ಸಹೋದ್ಯೋಗಿಗಳಿಗೆ ತಿಳಿಸಿದರು. ‘ನಮ್ಮ ಸರ್ಕಾರವೇ ಆಯೋಗ ರಚಿಸಿ ವರದಿ ಪಡೆದಿರುವಾಗ, ತಿರಸ್ಕರಿಸುವುದು ಸರಿಯಲ್ಲ ಎಂದು ಬಹುತೇಕ ಸಚಿವರು ಅಭಿಪ್ರಾಯಪಟ್ಟರು’ ಎಂದು ಗೊತ್ತಾಗಿದೆ.

## ❖ ತ್ರಿಭಾಷ ಸೂತ್ರ ಪಾಲಿಸುವುದಿಲ್ಲ: ಸ್ಟಾಲಿನ್

- ಯಾವುದೇ ಕಾರಣಕ್ಕೂ ತಮಿಳುನಾಡು ತ್ರಿಭಾಷಾ ಸೂತ್ರ ಪಾಲಿಸುವುದಿಲ್ಲ. ದ್ವಿಭಾಷಾ ಸೂತ್ರವನ್ನೇ ಅನುಸರಿಸಲಾಗುವುದು ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪುನರುಚ್ಚರಿಸಿದ್ದಾರೆ.
- ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಪರ್ಯಾಯವಾಗಿ ತಮಿಳುನಾಡು ಸರ್ಕಾರ ರೂಪಿಸಿರುವ ಶಾಲಾ ಶಿಕ್ಷಣ ನೀತಿ-2025 (ಎಸ್‌ಇಪಿ) ಅನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಮಾತೃಭಾಷೆ ತಮಿಳು ನಮ್ಮ ಅಸ್ಮಿತೆ, ನಮ್ಮ ಹೆಮ್ಮೆ. ಎನ್‌ಇಪಿ ಮೂಲಕ ಹಿಂದಿ ಹೇರಿಕೆ ಮಾಡುವ ಪ್ರಯತ್ನಗಳಿಗೆ ನಾವು ಮಣಿಯುವುದಿಲ್ಲ’ ಎಂದು ಹೇಳಿದರು.

Dr. Rajkumar IAS/KAS Academy

- ಈ ಮೂಲಕ **ತಮಿಳುನಾಡು ದೆಹಲಿ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಡಿ.ಮುರುಗೇಶನ್ ಅವರ ನೇತೃತ್ವದ 14 ಸದಸ್ಯರ ಸಮಿತಿಯ ಶಿಫಾರಸು ಆಧರಿಸಿ ನೂತನ ಶಿಕ್ಷಣ ನೀತಿ ಜಾರಿಗೆ ತಂದ ಮೊದಲ ರಾಜ್ಯ ಎನಿಸಿಕೊಂಡಿದೆ.**

## ❖ ತೈಲ ಕಂಪನಿಗಳಿಗೆ ₹30 ಸಾವಿರ ಕೋಟಿ ನೆರವು

- ನಿಯಂತ್ರಿತ ಬೆಲೆಯಲ್ಲಿ ಮನೆಗಳಿಗೆ ಅಡುಗೆ ಅನಿಲ ಸಿಲಿಂಡರ್ ಗಳನ್ನು ಪೂರೈಸಿದ್ದಕ್ಕಾಗಿ ಸರ್ಕಾರಿ ಸ್ವಾಮ್ಯದ ಮೂರು ತೈಲ ಮಾರುಕಟ್ಟೆ ಕಂಪನಿಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂಗೆ ಪರಿಹಾರವಾಗಿ ₹30 ಸಾವಿರ ಕೋಟಿ ನೀಡುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ.
- ಪ್ರಸ್ತುತ ಭೌಗೋಳಿಕ ರಾಜಕೀಯ ಸನ್ನಿವೇಶಗಳು, ತೈಲ ಮತ್ತು ಅನಿಲ ವಲಯದಲ್ಲಿನ ಅನಿಶ್ಚಿತತೆ ಗಮನದಲ್ಲಿಟ್ಟುಕೊಂಡು ಈ ಸಬ್ಸಿಡಿ ನೀಡಲು ನಿರ್ಧರಿಸಲಾಗಿದೆ.
- ರಷ್ಯಾದಿಂದ ಕಚ್ಚಾ ತೈಲ ಖರೀದಿ ನಿಲ್ಲಿಸುವಂತೆ ಅಮೆರಿಕ ಒತ್ತಡ ಹೇರುತ್ತಿರುವುದರಿಂದ ಭಾರತದಲ್ಲಿ ಇಂಧನ ಬೆಲೆಗಳು ಹೆಚ್ಚಳವಾಗುವ ನಿರೀಕ್ಷೆ ಇದೆ.
- ಕಳೆದ 15 ತಿಂಗಳುಗಳಲ್ಲಿ ಕಡಿಮೆ ಬೆಲೆಗೆ ಎಲ್‌ಪಿಜಿ ಮಾರಾಟ ಮಾಡಿರುವುದರಿಂದ ಉಂಟಾದ ನಷ್ಟ ಸರಿದೂಗಿಸಲು ಸಬ್ಸಿಡಿ ನೀಡಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಲಾಗಿದೆ. ತೈಲ ಮಾರುಕಟ್ಟೆ ಕಂಪನಿಗಳಿಗೆ 12 ಕಂತುಗಳಲ್ಲಿ ಈ ಮೊತ್ತ ಪಾವತಿಸಲಾಗುವುದು.
- 2024-25ರಲ್ಲಿ ಎಲ್‌ಪಿಜಿಯ ಅಂತರರಾಷ್ಟ್ರೀಯ ಬೆಲೆ ಗರಿಷ್ಠ ಮಟ್ಟದಲ್ಲಿದ್ದವು. ಆದಾಗ್ಯೂ, ದೇಶದಲ್ಲಿ ಎಲ್‌ಪಿಜಿ ಬೆಲೆ ಹೆಚ್ಚಳವಾಗದಂತೆ ನೋಡಿಕೊಳ್ಳಲಾಗಿತ್ತು. ಇದರಿಂದಾಗಿ, ಮೂರು ಕಂಪನಿಗಳು ಗಮನಾರ್ಹ ನಷ್ಟ ಅನುಭವಿಸಿದ್ದವು. ಈ ಸಬ್ಸಿಡಿಯಿಂದಾಗಿ ಕಚ್ಚಾ ತೈಲ ಮತ್ತು ಎಲ್‌ಪಿಜಿ ಖರೀದಿ, ಸಾಲ ಮರುಪಾವತಿ ಮತ್ತು ಬಂಡವಾಳ ವೆಚ್ಚದಂತಹ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಕಂಪನಿಗಳಿಗೆ ಅನುಕೂಲವಾಗಲಿದೆ. ಇದರಿಂದಾಗಿ ದೇಶದಾದ್ಯಂತ ಮನೆಗಳಿಗೆ ಎಲ್‌ಪಿಜಿ ಸಿಲಿಂಡರ್‌ಗಳ ನಿರಂತರ ಪೂರೈಕೆ ಖಚಿತಪಡಿಸಲು ಸಾಧ್ಯವಾಗಲಿದೆ.

### ಉಜ್ವಲ ಯೋಜನೆಗೆ ₹12 ಸಾವಿರ ಕೋಟಿ

- ➢ 2025-26ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಉಜ್ವಲ ಯೋಜನೆ ಅಡಿಯಲ್ಲಿ ₹12 ಸಾವಿರ ಕೋಟಿ ಸಬ್ಸಿಡಿ ನೀಡಲು ಸಂಪುಟ ಅನುಮೋದಿಸಿದೆ.
- ➢ **ದೇಶದಾದ್ಯಂತ ಬಡ ಕುಟುಂಬಗಳ ವಯಸ್ಕ ಮಹಿಳೆಯರಿಗೆ ಉಚಿತ ಎಲ್‌ಪಿಜಿ ಸಂಪರ್ಕ ಒದಗಿಸಲು ಈ ಯೋಜನೆಯನ್ನು 2016ರ ಮೇ ತಿಂಗಳಲ್ಲಿ ಪ್ರಾರಂಭಿಸಲಾಗಿತ್ತು. ಈ ಯೋಜನೆಯಡಿ ದೇಶದಲ್ಲಿ 10.33 ಕೋಟಿ ಸಂಪರ್ಕಗಳಿವೆ.**
- ➢ ಈ ಯೋಜನೆಯ ಫಲಾನುಭವಿಗಳಿಗೆ **14.2 ಕೆ.ಜಿ ತೂಕದ ಅಡುಗೆ ಅನಿಲ ಸಿಲಿಂಡರ್‌ಗೆ ವರ್ಷಕ್ಕೆ 9 ಪುನರ್ ಭರ್ತಿಗೊಳಿಸುವಿಕೆ (ಮತ್ತು 5 ಕೆ.ಜಿ ಸಿಲಿಂಡರ್‌ಗೆ ಅನುಗುಣವಾದ ಅನುಪಾತದಲ್ಲಿ) ₹300 ಸಬ್ಸಿಡಿ** ನೀಡುವ ಪ್ರಸ್ತಾವಕ್ಕೆ ಸಂಪುಟ ಅನುಮೋದನೆ ನೀಡಿದೆ.
- ➢ ಭಾರತವು ತನ್ನ ಎಲ್‌ಪಿಜಿಯ ಅಗತ್ಯದ ಸುಮಾರು 60 ಪ್ರತಿಶತವನ್ನು ಆಮದು ಮಾಡಿಕೊಳ್ಳುತ್ತದೆ.

## ❖ ಪಿ.ಎಂ ಕಿಸಾನ್ ಸಮ್ಮಾನ್: ಕರ್ನಾಟಕದ ರೈತರಿಗೆ ₹15,127 ಕೋಟಿ ವಿತರಣೆ

- ಕೇಂದ್ರ ಸರ್ಕಾರದ ಪ್ರಮುಖ ಯೋಜನೆಯಾದ ಪಿಎಂ-ಕಿಸಾನ್ ಸಮ್ಮಾನ್ ಯೋಜನೆಯಡಿ 2020ರ ಏಪ್ರಿಲ್‌ನಿಂದ ಇಲ್ಲಿಯವರೆಗೆ ಕರ್ನಾಟಕದ ಫಲಾನುಭವಿಗಳಿಗೆ ಒಟ್ಟು ₹15,127.88 ಕೋಟಿ ವಿತರಿಸಲಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.
- ಯೋಜನೆ ಪ್ರಾರಂಭವಾದಾಗಿನಿಂದ ಕೇಂದ್ರವು ದೇಶದಾದ್ಯಂತ ರೈತರಿಗೆ 20 ಕಂತುಗಳಲ್ಲಿ ₹3.90 ಲಕ್ಷ ಕೋಟಿಗೂ ಹೆಚ್ಚು ಹಣ ವಿತರಿಸಿದೆ.

## ❖ ಭಾರತಕ್ಕೆ ಶೇ 50 ಸುಂಕ: ಅಮೆರಿಕ ಸಮರ್ಥನೆ

- ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕ ಹೇರಿರುವ ಶೇ 25ರಷ್ಟು ಹೆಚ್ಚುವರಿ ಸುಂಕವು ನ್ಯಾಯ ಸಮ್ಮತವಾಗಿದ್ದು, ಇದು ದೇಶದ 'ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರವಾಗಿದೆ' ಎಂದು ವೈಟ್‌ಹೌಸ್‌ನ ವ್ಯಾಪಾರ ಸಲಹೆಗಾರ ಸಮರ್ಥಿಸಿಕೊಂಡಿದ್ದಾರೆ.
- ಭಾರತದಿಂದ ಅಮೆರಿಕಕ್ಕೆ ಸರಕುಗಳನ್ನು ಆಮದು ಮಾಡಿಕೊಳ್ಳುವವರು ಶೇ 25ರಷ್ಟು ಪ್ರತಿ ಸುಂಕ ಮತ್ತು ಶೇ 25ರಷ್ಟು ಹೆಚ್ಚುವರಿ ಸುಂಕ ಸೇರಿ ಸದ್ಯ ಶೇ 50ರಷ್ಟು ಸುಂಕ ಪಾವತಿಸಬೇಕಿದೆ. ಇದು ಅಮೆರಿಕವು ಇತರೆ ದೇಶಗಳ ಮೇಲೆ ಹೇರಿರುವ ಸುಂಕದಲ್ಲೇ ಗರಿಷ್ಠ ಮಟ್ಟದ್ದಾಗಿದೆ. ಹೆಚ್ಚುವರಿ ಸುಂಕವು ಆಗಸ್ಟ್ 27ರಿಂದ ಜಾರಿಗೆ ಬರಲಿದೆ.
- 'ಪ್ರತಿ ಸುಂಕಕ್ಕೂ, ಹೆಚ್ಚುವರಿ ಸುಂಕಕ್ಕೂ ವ್ಯತ್ಯಾಸವಿದೆ. ಭಾರತದ ಮೇಲೆ ಅಮೆರಿಕ ಹೆಚ್ಚುವರಿ ಸುಂಕ ವಿಧಿಸಿರುವುದಕ್ಕೆ ಸಕಾರಣವಿದೆ. ರಷ್ಯಾದಿಂದ ತೈಲ ಖರೀದಿಸಬಾರದು ಎಂಬ ಅಮೆರಿಕದ ಎಚ್ಚರಿಕೆಯನ್ನು ಭಾರತ ತಿರಸ್ಕರಿಸಿದೆ. ಹೀಗಾಗಿ ಇದು ಸಂಪೂರ್ಣವಾಗಿ ಅಮೆರಿಕದ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರವಾಗಿದೆ' ಎಂದು ಅವರು ಪ್ರತಿಪಾದಿಸಿದ್ದಾರೆ.
- ಭಾರತಕ್ಕಿಂತಲೂ ಚೀನಾ ರಷ್ಯಾದಿಂದ ಹೆಚ್ಚಿನ ತೈಲ ಖರೀದಿಸುತ್ತದೆಯಲ್ಲ ಎಂಬ ಪ್ರಶ್ನೆಗೆ ಉತ್ತರಿಸಿರುವ ನವ್ರೊ, ಚೀನಾ ಮೇಲೆ ಈಗಾಗಲೇ ಶೇ50ಕ್ಕಿಂತ ಹೆಚ್ಚಿನ ಸುಂಕ ವಿಧಿಸಿದೆ. ತೈಲ ಖರೀದಿ ವಿಚಾರವಾಗಿ ಮಾತುಕತೆ ನಡೆಸಲಾಗುವುದು ಎಂದು ಹೇಳಿದ್ದಾರೆ.

------------------------------------------------ಶುಭವಂದನೆಗಳು ------------------------------------------------

